## ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ: 2 (175)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ಬಿ.ಎಸ್. ಸತ್ಯನಾರಾಯಣ (ಕಟ್ಟೆ ಸತ್ಯ), ಆಡಳಿತ ಪಕ್ಷದ ನಾಯಕರು ಹಾಗೂ ಶ್ರೀ ಎಲ್.ಎ. ರವಿಸುಬ್ರಮಣ್ಯ, ಶಾಸಕರು, ಬಸವನಗುಡಿ ವಿಧಾನಸಭಾ ಕ್ಷೇತ್ರ ರವರು ಕ್ರಮವಾಗಿ ದಿನಾಂಕ:13-7-2010 ಮತ್ತು 20-7-2010 ರಂದು ಪೂಜ್ಯ ಮಹಾಪೌರರು ಹಾಗೂ ಆಯುಕ್ತರವರಿಗೆ, ಶ್ರೀ ಗುರು ಸಂಕಣ್ಣಾರ್ಯಾಶ್ರಮ ಟ್ರಸ್ಟ್ ರವರ ಮನವಿ ಪತ್ರವನ್ನು ಲಗತ್ತಿಸುತ್ತಾ ವಾರ್ಡ್ ಸಂಖ್ಯೆ:154 ರ ವ್ಯಾಪ್ತಿಯಲ್ಲಿ ಬರುವ ತ್ಯಾಗರಾಜನಗರ 3ನೇ ಬ್ಲಾಕ್ 6ನೇ ಮುಖ್ಯರಸ್ತೆಯಲ್ಲಿ ಶ್ರೀ ದತ್ತಾತ್ರೇಯ ದೇವಸ್ಥಾನದ ಎದುರು ಭಾಗದಲ್ಲಿರುವ ಆಟದ ಮೈದಾನಕ್ಕೆ ಡಾ॥ ಎಂ.ಕೆ.ಪಾಂಡುರಂಗ ಶೆಟ್ಟಿ ರವರ ಹೆಸರನ್ನು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ ಡಾ ಃ ಎಂ.ಕೆ. ಪಾಂಡುರಂಗ ಶೆಟ್ಟಿ ರವರು ಅನೇಕ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಸೇವೆ ಸಲ್ಲಿಸಿರುತ್ತಾರೆ ಹಾಗೂ ಹಲವು ಶಿಕ್ಷಣ ಸಂಸ್ಥೆಗಳಿಗೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 26 ಮಂದಿ, ವಿರೋಧವಾಗಿ ಯಾರು ಸಹಿ ಮಾಡದೇ ಇರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಅನಂತರ ಅದನ್ನು, ಕನಿಷ್ಠ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ.

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:154 ರ ವ್ಯಾಪ್ತಿಯಲ್ಲಿ ಬರುವ ತ್ಯಾಗರಾಜನಗರ 3ನೇ ಬ್ಲಾಕ್, 6ನೇ ಮುಖ್ಯರಸ್ತೆಯಲ್ಲಿನ ದತ್ತಾತ್ರೇಯ ದೇವಸ್ಥಾನದ ಎದುರು ಭಾಗದಲ್ಲಿರುವ ಆಟದ ಮೈದಾನಕ್ಕೆ **"ಡಾ॥ ಎಂ.ಕೆ.ಪಾಂಡುರಂಗ ಶೆಟ್ಟಿ"** ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:18-11-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

.........................2

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 3 (176)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:29-5-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:44/2010-11 ರಲ್ಲಿ ಈ ಕೆಳಕಂಡ ರಸ್ತೆಗಳಿಗೆ ನಾಮಕರಣ ಮಾಡುವುದೆಂದು ತೀರ್ಮಾನಿಸಲಾಗಿದೆ.

1) ಮಹಾಲಕ್ಷ್ಮಿ ಬಡಾವಣೆ ಎಂಟ್ರನ್ಸ್ ವೃತ್ತಕ್ಕೆ ಇಸ್ಕಾನ್ ಟೆಂಪಲ್ ವೃತ್ತವೆಂದು ನಾಮಕರಣ ಮಾಡುವುದು.
2) ಜಯನಗರ 5ನೇ ಬಡಾವಣೆಯ 5ನೇ ಮುಖ್ಯ ರಸ್ತೆಯಿಂದ 11ನೇ ಮುಖ್ಯ ರಸ್ತೆಯವರೆಗಿನ 36ನೇ ಅಡ್ಡರಸ್ತೆಗೆ ಪ್ರೊ.ಎಂ.ಗೋಪಾಲಕೃಷ್ಣ ಅಡಿಗ ರಸ್ತೆ ಎಂದು ನಾಮಕರಣ ಮಾಡುವುದು.
3) ಜಯನಗರ 5ನೇ ಮುಖ್ಯರಸ್ತೆಯಿಂದ 11ನೇ ಮುಖ್ಯರಸ್ತೆವರೆಗಿನ 46ನೇ ಅಡ್ಡರಸ್ತೆಗೆ ದಾಸವರೇಣ್ಯ ಕನಕದಾಸ ರಸ್ತೆ ಎಂದು ನಾಮಕರಣ ಮಾಡುವುದು.
4) ಜಯನಗರ 5ನೇ ಬಡಾವಣೆಯ 9ನೇ ಮುಖ್ಯರಸ್ತೆಯಿಂದ 46ನೇ ಅಡ್ಡರಸ್ತೆಯವರೆಗಿನ 40ನೇ ಅಡ್ಡರಸ್ತೆಗೆ ಸ್ವಾಮಿ ವಿವೇಕಾನಂದ ಮಾರ್ಗ ಎಂದು ನಾಮಕರಣ ಮಾಡುವುದು.
5) ಜೆ.ಪಿ.ನಗರದ (ಆರ್.ವಿ.ದಂತ ಮಹಾ ವಿದ್ಯಾಲಯವಿರುವ) ಮೊದಲನೆ ಹಂತದ 24ನೇ ಮುಖ್ಯ ರಸ್ತೆಯ 5ನೇ ಅಡ್ಡರಸ್ತೆಗೆ ಶ್ರೀ ಡಿ.ಎ.ಪಾಂಡು ರಸ್ತೆ ಎಂದು ನಾಮಕರಣ ಮಾಡುವುದು.
6) ಜಯನಗರ 4ನೇ ಬ್ಲಾಕ್‌ನ 32ನೇ ಅಡ್ಡರಸ್ತೆಯಿಂದ 39ನೇ ಅಡ್ಡರಸ್ತೆಯವರೆಗಿನ 16ನೇ ಮುಖ್ಯ ರಸ್ತೆಗೆ ಶ್ರೀ ಬಿ.ಎಲ್.ಲಕ್ಕೇಗೌಡ ರಸ್ತೆ ಎಂದು ನಾಮಕರಣ ಮಾಡುವುದು.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು ಃ ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:5-8-2010 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಈ ಮಧ್ಯೆ ದಿನಾಂಕ:28-8-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:85/2010-11 ರಲ್ಲಿ ಶಾಕಾಂಬರಿ ನಗರ 179ನೇ ವಾರ್ಡಿನ ವ್ಯಾಪ್ತಿಯ ಜೆ.ಪಿ.ನಗರದ (ಆರ್.ವಿ.ದಂತ ಮಹಾ ವಿದ್ಯಾಲಯವಿರುವ) ಮೊದಲನೇ ಹಂತದ 24ನೇ ಮುಖ್ಯ ರಸ್ತೆಯ 5ನೇ ಅಡ್ಡರಸ್ತೆಗೆ ಶ್ರೀ ಡಿ.ಎ.ಪಾಂಡು ರಸ್ತೆ ಎಂದು ನಾಮಕರಣ ಮಾಡುವುದೆಂದು ತೀರ್ಮಾನಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕ್ರಮ ಸಂಖ್ಯೆ:5 ರಲ್ಲಿನ ಪ್ರಸ್ತಾವನೆಯನ್ನು ಹೊರತುಪಡಿಸಿ ಉಳಿದ ರಸ್ತೆಗಳಿಗೆ ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುವ ಬಗ್ಗೆ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:18-11-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010ರ ನಿರ್ಣಯ.

..........................2

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಕ್ರಮ ಸಂಖ್ಯೆ:1 ರಲ್ಲಿನ ಮಹಾಲಕ್ಷ್ಮಿ ಬಡಾವಣೆ ಎಂಟ್ರೆನ್ಸ್ ವೃತ್ತಕ್ಕೆ ಇಸ್ಕಾನ್ ಟೆಂಪಲ್ ವೃತ್ತವೆಂದು ನಾಮಕರಣ ಮಾಡುವುದು ಮುಂದೂಡಿ, ಉಳಿದ ರಸ್ತೆಗಳ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಕ್ರಮ ಸಂಖ್ಯೆ:1 ರಲ್ಲಿನ ಮಹಾಲಕ್ಷ್ಮಿ ಬಡಾವಣೆ ಎಂಟ್ರೆನ್ಸ್ ವೃತ್ತಕ್ಕೆ ಇಸ್ಕಾನ್ ಟೆಂಪಲ್ ವೃತ್ತವೆಂದು ನಾಮಕರಣ ಮಾಡುವುದು ಮುಂದೂಡಿ, ಉಳಿದ ರಸ್ತೆಗಳ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 4 (177)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ಎಸ್. ನಟರಾಜ್, ನಗರ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ: 94 ಹಾಗೂ ಶ್ರೀ ದಿನೇಶ್ ಗುಂಡೂರಾವ್, ಶಾಸಕರು, ಗಾಂಧಿನಗರ ವಿಧಾನಸಭಾ ಕ್ಷೇತ್ರ ರವರು ಕ್ರಮವಾಗಿ ದಿನಾಂಕ:06-09-2010 ಮತ್ತು 09-09-2010 ರಂದು ಮಾನ್ಯ ಆಯುಕ್ತರವರಿಗೆ ಮನವಿ ಪತ್ರ ಸಲ್ಲಿಸಿ ಶೇಷಾದ್ರಿಪುರಂ ಸಿರೂರ್ ಪಾರ್ಕ್ ಆಟದ ಮೈದಾನದಲ್ಲಿ ನೂತನವಾಗಿ ನಿರ್ಮಿಸಿರುವ ಒಳಾಂಗಣ ಕ್ರೀಡಾಂಗಣಕ್ಕೆ "ಶ್ರೀ. ಆರ್. ಗುಂಡೂರಾವ್ ಕ್ರೀಡಾ ಸಂಕೀರ್ಣ" ಎಂದು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ ಶ್ರೀ. ಆರ್. ಗುಂಡೂರಾವ್ ರವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ ಸೇವೆಯನ್ನು ಸಲ್ಲಿಸಿದ್ದು, ದಿವಂಗತರಾಗಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 7 ಮಂದಿ, ವಿರೋಧವಾಗಿ ಯಾರು ಸಹಿ ಮಾಡದೇ ಇರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು, ಕನಿಷ್ಟ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಈ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ.

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ : 94 ರ ವ್ಯಾಪ್ತಿಯಲ್ಲಿ ಬರುವ ಶೇಷಾದ್ರಿಪುರಂ ಸಿರೂರ್ ಪಾರ್ಕ್ ಆಟದ ಮೈದಾನದಲ್ಲಿ ನೂತನವಾಗಿ ನಿರ್ಮಿಸಿರುವ ಒಳಾಂಗಣ ಕ್ರೀಡಾಂಗಣಕ್ಕೆ "ಶ್ರೀ. ಆರ್. ಗುಂಡೂರಾವ್ ಕ್ರೀಡಾ ಸಂಕೀರ್ಣ " ಎಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-11-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

.......................2

“ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28–12–2010 ರ ನಿರ್ಣಯವನ್ನು ಒಪ್ಪುವುದು”.

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** “ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28–12–2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು”.

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

## ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

### ವಿಷಯದ ಸಂಖ್ಯೆ: 6 (190)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸಾರ್ವಜನಿಕ ಆರೋಗ್ಯ ಹಿತದೃಷ್ಟಿಯಿಂದ ಈಗಾಗಲೇ 6 ರೆಫರಲ್ ಆಸ್ಪತ್ರೆಗಳು, 24 ಹೆರಿಗೆ ಆಸ್ಪತ್ರೆಗಳು, 29 ಆರೋಗ್ಯ ಕೇಂದ್ರಗಳು, 16 ಔಷಧಾಲಯಗಳು, 19 ಕುಟುಂಬ ಕಲ್ಯಾಣ ಕೇಂದ್ರ ಮತ್ತು 3 ಸಂಚಾರಿ ಔಷಧಾಲಯಗಳನ್ನು ನಡೆಸಲಾಗುತ್ತಿದೆ. ಸಾರ್ವಜನಿಕರಿಗೆ ಇನ್ನೂ ಹೆಚ್ಚಿನ ರೀತಿಯ ಆರೋಗ್ಯ ಸೇವೆಯನ್ನು ವಿಸ್ತರಗೊಳಿಸುವ ಸಲುವಾಗಿ ಈ ಕೆಳಕಂಡ ಸ್ಥಳಗಳಲ್ಲಿ 5 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 8 ಔಷಧಾಲಯಗಳ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ಇವುಗಳನ್ನು ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಪ್ರಾರಂಭಿಸಲು ಭಾರತೀಯ ಸಾರ್ವಜನಿಕ ಆರೋಗ್ಯ ಗುಣಮಟ್ಟದ ರೀತ್ಯಾ (ಐ.ಪಿ.ಹೆಚ್.ಎಸ್) ಸಿಬ್ಬಂದಿ ಮತ್ತು ಸಲಕರಣೆಗಳ ಅವಶ್ಯಕತೆ ಇದ್ದು, ಈ ಸೌಲಭ್ಯವನ್ನು ಕಲ್ಪಿಸಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ಅಗತ್ಯವಾಗಿದೆ. ಅದರಂತೆ ಈ ಕೆಳಕಂಡಂತೆ ಪ್ರಸ್ತಾವನೆ ಸಲ್ಲಿಸಿದೆ.

### 5 – ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿಳಾಸ:

| | | | |
|---|---|---|---|
| 1 | ಮೂಡಲಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರ,<br>ಭೈರವೇಶ್ವರ ನಗರ,<br>ಮೂಡಲಪಾಳ್ಯ, ಬೆಂಗಳೂರು-72. | 3 | ಮಹಾಲಕ್ಷ್ಮೀ ಲೇಔಟ್ ಪ್ರಾಥಮಿಕ ಆರೋಗ್ಯ ಕೇಂದ್ರ,<br>(ಗೆಳೆಯರ ಬಳಗ), 2ನೇ ಕ್ರಾಸ್,<br>3ನೇ ಮುಖ್ಯ ರಸ್ತೆ, ಚೇರ್‌ಮೆನ್ ಚಿನ್ನಪ್ಪ ಆಸ್ಪತ್ರೆ,<br>ಗಣೇಶ ದೇವಸ್ಥಾನದ ಎದುರು,<br>ಗೆಳೆಯರ ಬಳಗ,<br>ಬೆಂಗಳೂರು-86. |
| 2 | ಮಂಜುನಾಥನಗರ ಪ್ರಾಥಮಿಕ ಆರೋಗ್ಯ ಕೇಂದ್ರ,<br>1ನೇ ಮುಖ್ಯರಸ್ತೆ, ವಾರ್ಡ್-15,<br>ಮಂಜುನಾಥನಗರ, ರಾಜಾಜಿನಗರ,<br>ಬೆಂಗಳೂರು-10. | 4 | ಆಡುಗೋಡಿ ಪ್ರಾಥಮಿಕ ಆರೋಗ್ಯ ಕೇಂದ್ರ,<br>ಆಡುಗೋಡಿ ಆರೋಗ್ಯ ಕೇಂದ್ರದ ಮೇಲೆ,<br>ಕೋರಮಂಗಲ ಮುಖ್ಯ ರಸ್ತೆ,<br>ಆಡುಗೋಡಿ ಕೋರ್ಟ್, ಬೆಂಗಳೂರು-30. |
| 5 | ತಾವರೆಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರ,<br>ತಾವರೆಕೆರೆ ಆರೋಗ್ಯ ಕೇಂದ್ರದ ಪಕ್ಕದಲ್ಲಿ,<br>ತಾವರೆಕೆರೆ ಮುಖ್ಯ ರಸ್ತೆ,<br>ಮುಖ್ಯ ಬಸ್ ನಿಲ್ದಾಣದ ಹಿಂಭಾಗ,<br>ಬೆಂಗಳೂರು. | | |

ಪ್ರಾಥಮಿಕ ಆರೋಗ್ಯ ಕೇಂದ್ರದ ನಿರ್ವಹಣೆಗೆ ಈ ಕೆಳಕಂಡಂತೆ ಸಿಬ್ಬಂದಿ, ಔಷಧಿಗಳು ಹಾಗೂ ಯಂತ್ರೋಪಕರಣ ಮತ್ತು ಪೀಠೋಪಕರಣಗಳ ಅಗತ್ಯತೆ ಇರುತ್ತದೆ.

| ಕ್ರ.ಸಂ. | ಹುದ್ದೆಯ ಹೆಸರು | ಒಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಹುದ್ದೆಗಳ ಸಂಖ್ಯೆ | ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗೆ ತಗಲುವ ಅಂದಾಜು ವೆಚ್ಚ (ಪ್ರತಿ ವರ್ಷ) | 5 ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಒಟ್ಟು ಹುದ್ದೆಗಳ ಸಂಖ್ಯೆ | 5 ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗೆ ತಗಲುವ ಅಂದಾಜು ವೆಚ್ಚ (ಪ್ರತಿ ವರ್ಷ) |
|---|---|---|---|---|---|
| **1** | **2** | **3** | **4** | **5** | **6** |
| 1 | ಸಹಾಯಕ ಶಸ್ತ್ರ ಚಿಕಿತ್ಸಕರು | 02 | 566952 | 10 | 2834760 |
| 2 | ಆಯುರ್ವೇದ ವೈದ್ಯರು | 01 | 283476 | 5 | 1417380 |
| 3 | ಅಕೌಂಟ್ಸ್ ಮ್ಯಾನೇಜರ್ | 01 | 202800 | 5 | 1014000 |
| 4 | ಫಾರ್ಮಸಿಸ್ಟ್ | 02 | 253800 | 10 | 1269000 |
| 5 | ಸ್ಟಾಫ್ ನರ್ಸ್ | 05 | 816000 | 25 | 4080000 |
| 6 | ಆರೋಗ್ಯ ಕಾರ್ಯಕರ್ತರು (ಮಹಿಳೆ) | 01 | 128340 | 5 | 641700 |
| 7 | ಆರೋಗ್ಯ ಶಿಕ್ಷಕರು | 01 | 128340 | 5 | 641700 |
| 8 | ಆರೋಗ್ಯ ಸಹಾಯಕರು (ಒಬ್ಬ ಪುರುಷ, ಒಬ್ಬ ಮಹಿಳೆ) | 02 | 256680 | 10 | 1283400 |
| 9 | ಗುಮಾಸ್ತರು | 02 | 235872 | 10 | 1179360 |
| 10 | ಲ್ಯಾಬ್ ಟೆಕ್ನಿಷಿಯನ್ | 02 | 294648 | 10 | 1473240 |
| 11 | ಚಾಲಕರು (Optional) | 01 | 120936 | 5 | 604680 |
| 12 | ನಾಲ್ಕನೇ ದರ್ಜೆ ನೌಕರರು (Contractual) | 04 | 404064 | 20 | 2020320 |
| | **ಒಟ್ಟು ಮೊತ್ತ** | **24** | **3691908** | **120** | **18459540** |
| 13 | ಔಷಧಿಗಳು | – | 300000 | – | 1500000 |
| 14 | ಯಂತ್ರೋಪಕರಣ ಮತ್ತು ಪೀಠೋಪಕರಣಗಳು | | 1341500 | | 6707500 |
| | **ನಿವ್ವಳ ಮೊತ್ತ** | | **5333408** | | **26667040** |

## 8 – ಔಷಧಾಲಯಗಳ ವಿಳಾಸ:

| | | | |
|---|---|---|---|
| 1 | ಕಮಲ ನಗರ ಔಷಧಾಲಯ,<br>ವಾರ್ಡ್ ಕಛೇರಿಯ ಹತ್ತಿರ,<br>ಶಂಕರ್‌ನಾಗ್ ಬಸ್ ನಿಲ್ದಾಣ,<br>ಬೆಂಗಳೂರು. | 5 | ಸಂಜಯನಗರ ಔಷಧಾಲಯ,<br>ವಿಜಯ ಬ್ಯಾಂಕ್ ಎದುರು,<br>ಸಂಜಯನಗರ ಬಸ್ ನಿಲ್ದಾಣ,<br>ಆರ್.ಎಮ್.ವಿ. 2ನೇ ಹಂತ, ಬೆಂಗಳೂರು-94. |
| 2 | ಚೋಳೂರು ಪಾಳ್ಯ ಔಷಧಾಲಯ,<br>ವಾರ್ಡ್ ಕಛೇರಿಯ ಹತ್ತಿರ, ಪೈಪ್ ಲೈನ್ ರಸ್ತೆ, ಚೋಳೂರುಪಾಳ್ಯ, ವಿಜಯನಗರ,<br>ಬೆಂಗಳೂರು–40. | 6 | ಭಾಷ್ಯಂ ನಗರ ಔಷಧಾಲಯ,<br>9ನೇ ಮುಖ್ಯ ರಸ್ತೆ,<br>ಶ್ರೀರಾಮ್‌ಪುರ ಪೊಲೀಸ್ ಠಾಣೆ ಹಿಂಭಾಗ,<br>ಬೆಂಗಳೂರು–21. |
| 3 | ಪಂಚಶೀಲ ನಗರ ಔಷಧಾಲಯ,<br>ಪ್ರಮೀಳಾ ಬಾಯಿ ಮನೆ ಆಸ್ಪತ್ರೆ,<br>1ನೇ ಮುಖ್ಯ ರಸ್ತೆ, ಪಂಚಶೀಲ ನಗರ,<br>ಬೆಂಗಳೂರು. | 7 | ಆನಂದಪುರಂ ಔಷಧಾಲಯ,<br>ಮೈಸೂರು ರಸ್ತೆ, ಆನಂದಪುರಂ,<br>ಬೆಂಗಳೂರು. |
| 4 | ಪೀಣ್ಯ ಔಷಧಾಲಯ,<br>ವಾರ್ಡ್ ಕಛೇರಿಯ ಹತ್ತಿರ, 1ನೇ ಹಂತ,<br>ಪೀಣ್ಯ,<br>ಬೆಂಗಳೂರು. | 8 | ವಸಂತನಗರ ಔಷಧಾಲಯ,<br>1ನೇ ಮುಖ್ಯ ರಸ್ತೆ, ವಸಂತನಗರ,<br>ಬೆಂಗಳೂರು – 52. |

**ಔಷಧಾಲಯಗಳ ನಿರ್ವಹಣೆಗೆ ಈ ಕೆಳಕಂಡಂತೆ ಸಿಬ್ಬಂದಿ, ಔಷಧಿಗಳು ಮತ್ತು ಯಂತ್ರೋಪಕರಣ ಮತ್ತು ಪೀಠೋಪಕರಣಗಳ ಅಗತ್ಯತೆ ಇರುತ್ತದೆ.**

| ಕ್ರ.ಸಂ. | ಹುದ್ದೆಯ ಹೆಸರು | ಒಂದು ಔಷಧಾಲಯಕ್ಕೆ ಅಗತ್ಯವಿರುವ ಹುದ್ದೆಗಳ ಸಂಖ್ಯೆ | 8 ಔಷಧಾಲಯಗಳಿಗೆ ಸಿಬ್ಬಂದಿಗೆ ತಗಲುವ ಅಂದಾಜು ವೆಚ್ಚ (ಪ್ರತಿ ವರ್ಷ) | 8 ಔಷಧಾಲಯಗಳಿಗೆ ಅಗತ್ಯವಿರುವ ಒಟ್ಟು ಹುದ್ದೆಗಳ ಸಂಖ್ಯೆ | 8 ಔಷಧಾಲಯಗಳ ಸಿಬ್ಬಂದಿಗೆ ತಗಲುವ ಅಂದಾಜು ವೆಚ್ಚ (ಪ್ರತಿ ವರ್ಷ) |
|---|---|---|---|---|---|
| 1 | 2 | 3 | 4 | 5 | 6 |
| 1 | ಸಹಾಯಕ ಶಸ್ತ್ರ ಚಿಕಿತ್ಸಕರು | 1 | 283476 | 8 | 2267808 |
| 2 | ಎ.ಎನ್.ಎಮ್. | 2 | 253800 | 16 | 2030400 |
| 3 | ಪ್ರಥಮ ದರ್ಜೆ ಸಹಾಯಕರು | 1 | 147324 | 8 | 1178592 |
| 4 | ದ್ವಿತೀಯ ದರ್ಜೆ ಸಹಾಯಕರು | 1 | 117936 | 8 | 943488 |
| 5 | ಲ್ಯಾಬ್ ಟೆಕ್ನಿಷಿಯನ್ | 1 | 147324 | 8 | 1178592 |

.........................4

| | | | | | |
|---|---|---|---|---|---|
| 6 | ಜವಾನರು (To carry out Tappal duties) | 2 | 196032 | 16 | 1568256 |
| 7 | ಆಯಾ (Contractual Services) | 2 | 196032 | 16 | 1568256 |
| | **ಒಟ್ಟು ಮೊತ್ತ** | **10** | **1341924** | **80** | **10735392** |
| 8 | ಔಷಧಿಗಳು | – | 100000 | – | 800000 |
| 9 | ಯಂತ್ರೋಪಕರಣ ಮತ್ತು ಪೀಠೋಪಕರಣಗಳು | | 585300 | | 4682400 |
| 10 | ಲೆನಿನ್ ಸಾಮಗ್ರಿಗಳು | | 66750 | | 534000 |
| | **ನಿವ್ವಳ ಮೊತ್ತ** | | **2093974** | | **16751792** |

5 ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ವಹಣೆಗೆ ಅಗತ್ಯವಾದ ಸಿಬ್ಬಂದಿ ಮತ್ತು ಇತರೆ ಸೌಲಭ್ಯಗಳಿಗೆ ವಾರ್ಷಿಕ ರೂ.2,66,67,040/- ಅಂದಾಜು ವೆಚ್ಚ ಮತ್ತು 8 ಔಷಧಾಲಯಗಳ ನಿರ್ವಹಣೆಗೆ ಅಗತ್ಯವಾದ ಸಿಬ್ಬಂದಿ ಮತ್ತು ಇತರೆ ಸೌಲಭ್ಯಗಳಿಗೆ ವಾರ್ಷಿಕ ರೂ.1,67,51,792/- ಅಂದಾಜು ವೆಚ್ಚದಂತೆ ಒಟ್ಟಾರೆ ರೂ.4,34,18,832/- ಗಳು ಅಂದಾಜು ವೆಚ್ಚವಾಗುತ್ತದೆ.

ತತ್ಸಂಬಂಧ, ಮೇಲ್ಕಂಡ ಅಂಶಗಳನ್ನು ಅವಗಾಹನೆಗೆ ತರುತ್ತಾ, ಪ್ರಸ್ತಾಪಿತ ಪ್ರಸ್ತಾವನೆಗೆ ಅಗತ್ಯವಿರುವ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಲು ಮತ್ತು ಅಗತ್ಯವಿರುವ ಅಂದಾಜು ಮೊತ್ತವಾದ ರೂ.4,34,18,832/- ಗಳನ್ನು 2010-11 ನೆ ಸಾಲಿನ ಆಯವ್ಯಯದಲ್ಲಿ ಬಳಸಿಕೊಳ್ಳಲು ಅನುಮೋದನೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಔಷಧಾಲಯಗಳನ್ನು ಪ್ರಾರಂಭಿಸಲು ಮತ್ತು ಪ್ರತಿ ವರ್ಷ ಇದಕ್ಕೆ ಅಗತ್ಯವಿರುವ ವೆಚ್ಚವನ್ನು ಆಯವ್ಯಯದಲ್ಲಿ ಕಾಯ್ದಿರಿಸಿಕೊಳ್ಳಲು ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-10-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-10-2010 ರ ನಿರ್ಣಯ ಹಾಗೂ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:07-01-2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:07-01-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

..........................5

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:07–01–2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್. ಕೆ. ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 7 (179)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:107 (22 ಹಳೆಯದು) ರಲ್ಲಿ ರಾಜಾಜಿನಗರ 5ನೇ ಬ್ಲಾಕ್‌ನಲ್ಲಿರುವ ಧೋಬಿಘಾಟ್, ಅಧ್ಯಕ್ಷರು, ವಾಷರ್‌ಮೆನ್ ಅಸೋಸಿಯೇಷನ್ ರವರಿಗೆ ಬಟ್ಟೆಗಳನ್ನು ಒಗೆಯಲು ಒಂದು ಕಲ್ಲಿಗೆ ರೂ.10/- ರಂತೆ ಒಟ್ಟು 40 ಕಲ್ಲುಗಳಿಗೆ ಮಾಸಿಕ ರೂ.400/- ಗಳನ್ನು ನಿಗಧಿಪಡಿಸಿ, ದಿನಾಂಕ: 31-8-2003 ರ ಅವಧಿಗೆ ಗುತ್ತಿಗೆ ನೀಡಲಾಗಿತ್ತು. ಗುತ್ತಿಗೆ ಅವಧಿಯು ಪೂರ್ಣಗೊಂಡಿದ್ದು, ನಂತರ 5 ವರ್ಷಗಳ ಅವಧಿಗೆ ಸದರಿ ಗುತ್ತಿಗೆ ಅವಧಿಯನ್ನು ಪುನಃ ನವೀಕರಿಸಲು ಕೋರಿ ಅರ್ಜಿದಾರರು ಮನವಿಯನ್ನು ಸಲ್ಲಿಸಿದ್ದರ ಮೇರೆಗೆ, ದಿನಾಂಕ:26-10-2004 ರಂದು ನಡೆದ ಮಹಾನಗರ ಪಾಲಿಕೆ ಸಭೆಯಲ್ಲಿ ವಿಷಯ ಸಂಖ್ಯೆ:17(74), ದಿನಾಂಕ:01-9-2003 ರಿಂದ 31-8-2008 ರವರೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ಮೊತ್ತ ವಾರ್ಷಿಕ ರೂ.4800/- ಗಳ ಆಧಾರದ ಮೇರೆಗೆ ಗುತ್ತಿಗೆ ಅವಧಿಯನ್ನು ನವೀಕರಿಸಲಾಗಿರುತ್ತದೆ.

ಸದರಿ ಅರ್ಜಿದಾರರು ಪುನಃ 5 ವರ್ಷಗಳ ಅವಧಿಗೆ ಗುತ್ತಿಗೆಯನ್ನು ದಿನಾಂಕ:01-9-2008 ರಿಂದ ನವೀಕರಿಸುವಂತೆ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ. ಜಂಟಿ ಆಯುಕ್ತರು (ಪಶ್ಚಿಮ) ರವರು ಈಗಾಗಲೇ ಇದೇ ರಾಜಾಜಿನಗರ ವಾಷರ್‌ಮೆನ್ ಅಸೋಸಿಯೇಷನ್ ರವರು ಸದರಿ ದೋಬಿಘಾಟ್‌ನ್ನು ಉಪಯೋಗಿಸಿರುವುದರಿಂದ ಗುತ್ತಿಗೆ ಮೊತ್ತವನ್ನು ರೂ.4800/- ಗಳನ್ನು ಪರಿಷ್ಕರಿಸುವ (ಶೇ.10 ರಷ್ಟು ಹೆಚ್ಚುವರಿ ಮಾಡಿ) ದಿನಾಂಕ:01-9-2008 ರಿಂದ 31-8-2013 ರವರೆಗೆ ಗುತ್ತಿಗೆ ಅವಧಿಯನ್ನು ನವೀಕರಿಸಬಹುದಾಗಿದೆಯೆಂದು ಪ್ರಸ್ತಾಪಿಸಿರುತ್ತಾರೆ.

ಪಾಲಿಕೆಯ ಸ್ವತ್ತುಗಳಿಗೆ ಗುತ್ತಿಗೆ ಮೊತ್ತ ನಿಗಧಿಪಡಿಸುವ ಮಾರ್ಗಸೂಚಿಗಳಿಗೆ, ಅಂದರೆ ದೋಬಿಘಾಟ್ ಸಾಮೂಹಿಕವಾಗಿ ಉಪಯೋಗಿಸುವ ಸ್ವತ್ತಾಗಿದ್ದು, ಯಾವುದೇ ಮಾರ್ಗಸೂಚಿಯಿರುವುದಿಲ್ಲ. ದೋಬಿಘಾಟ್‌ನಲ್ಲಿ ಉಪಯೋಗಿಸುವ ಕಲ್ಲುಗಳ ಸಂಖ್ಯೆಯ ಆಧಾರದ ಮೇಲೆ ನಿಗಧಿಪಡಿಸಲಾಗಿದ್ದು, ಇದೇ ದರವನ್ನು ಪ್ರತಿ ಕಲ್ಲಿಗೆ ಮಾಸಿಕ ಗುತ್ತಿಗೆ ದರ ರೂ.50/- ರಂತೆ ಗುತ್ತಿಗೆ ನವೀಕರಿಸಿ ಮತ್ತು ಕರಾರು ಪತ್ರ ನೋಂದಾಯಿಸುವ ದಿನದಿಂದ ಜಾರಿಗೆ ಬರುವಂತೆ 5 ವರ್ಷದ ಅವಧಿಗೆ ನವೀಕರಿಸಲು ಹಾಗೂ ಹಿಂದಿನ ಬಾಕಿ ಮೊತ್ತವನ್ನು ಇದೇ ದರದಲ್ಲಿ ವಸೂಲಿ ಮಾಡುವ ಪ್ರಸ್ತಾವನೆಗೆ ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11-10-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15-11-2010 ರ ನಿರ್ಣಯ ಮತ್ತು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ. ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 8 (180)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ:128ರ ವ್ಯಾಪ್ತಿಯಲ್ಲಿ ಬರುವ ನಾಗರಭಾವಿ ವೃತ್ತದಲ್ಲಿ ಭಾರತ ರತ್ನ ಸಂವಿಧಾನ ಶಿಲ್ಪಿ ಡಾ:ಬಿ.ಆರ್.ಅಂಬೇಡ್ಕರ್ ರವರ ಪ್ರತಿಮೆ ಪ್ರತಿಷ್ಠಾಪನೆಗೆ ಅನುಮತಿ ಕೋರಿ, ಅಖಿಲ ಕರ್ನಾಟಕ ದಲಿತ ಹಿಂದುಳಿದವರ ವೇದಿಕೆ (ರಿ) (ಕಾರ್ಮಿಕ ರೈತ ಶೋಷಿತ ಹಾಗೂ ಕನ್ನಡ ಪರ ಸಂಘಟನೆ)ಯವರು ಪತ್ರ ಬರೆದಿರುತ್ತಾರೆ.

ಸದರಿ ಜಾಗವು ಬಿಬಿಎಂಪಿ ವ್ಯಾಪ್ತಿಗೆ ಒಳಪಟ್ಟಿದ್ದು, ಸ್ಥಳದ ಮತ್ತು ಸಾರ್ವಜನಿಕರ ಮಹಜರ್ ಕ್ರಮ ಜರುಗಿಸಿ, ಕಂದಾಯ ಅಧಿಕಾರಿಗಳು (ಗೋವಿಂದರಾಜನಗರ) ರವರು ಮಹಜರ್ ವರದಿಯನ್ನು ನೀಡಿರುತ್ತಾರೆ. ಸದರಿ ಮಹಜರ್ ವರದಿ ಪ್ರಕಾರ ನಾಗರಭಾವಿ ವೃತ್ತದಲ್ಲಿ ಡಾ:ಬಿ.ಆರ್.ಅಂಬೇಡ್ಕರ್‌ರವರ ಪ್ರತಿಮೆ ಪ್ರತಿಷ್ಠಾಪನೆಗೆ ಸ್ಥಳೀಯರು ಒಪ್ಪಿಗೆ ವ್ಯಕ್ತಪಡಿಸಿದ್ದು, ಯಾರಿಂದಲೂ ವಿರೋಧ ವ್ಯಕ್ತವಾಗಿರುವುದಿಲ್ಲ. ಆದ್ದರಿಂದ, ಪ್ರಸ್ತಾಪಿತ ಸ್ಥಳವಾದ ವಾರ್ಡ್ ಸಂಖ್ಯೆ:128ರ ವ್ಯಾಪ್ತಿಯಲ್ಲಿ ಬರುವ ನಾಗರಭಾವಿ ವೃತ್ತದಲ್ಲಿ ಸಂವಿಧಾನ ಶಿಲ್ಪಿ ಡಾ:ಬಿ.ಆರ್.ಅಂಬೇಡ್ಕರ್‌ರವರ ಪ್ರತಿಮೆ ಪ್ರತಿಷ್ಠಾಪನೆಗೆ ಅನುಮತಿ ಕೋರಿ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-12-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಮುಂದೂಡಲು ಸೂಚಿಸಿದರು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ಸೂಚನೆಯನ್ನು ಮತಕ್ಕೆ ಹಾಕಲಾಗಿ ಸೂಚನೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಮುಂದೂಡಿದೆ".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 9 (181)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ.ಕೆ.ಎನ್.ಸುಬ್ಬಾರೆಡ್ಡಿ ಮತ್ತು ಇತರರು ರಿಟ್ ಅರ್ಜಿ ಸಂ:20301/2010ನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿ, ಕಬ್ಬನ್‌ಪೇಟೆ ರಸ್ತೆಯಿಂದ ನಗರ ನ್ಯಾಯಾಲಯಗಳ ಸಂಕೀರ್ಣಕ್ಕೆ ಕೆ.ಜಿ.ರಸ್ತೆಯನ್ನು ದಾಟಲು ಕಷ್ಟಕರವಾಗಿರುತ್ತದೆಂದು, ಸದರಿ ಸ್ಥಳದಲ್ಲಿ ಪಾದಚಾರಿ ಸುರಂಗ ಮಾರ್ಗವನ್ನು ನಿರ್ಮಿಸಲು ಪಾಲಿಕೆಗೆ ಸೂಚನೆಗಳನ್ನು ನೀಡಲು ಕೋರಿರುತ್ತಾರೆ. ಶ್ರೀಯುತರ Prayer ಮತ್ತು Interim prayer ರಿಟ್ ಅರ್ಜಿಯಲ್ಲಿ ಈ ಕೆಳಕಂಡಂತೆ ಇರುತ್ತದೆ.

**PRAYER**

a) Issue a Writ in the nature of Mandamus directing the Respondents to take immediate steps for the construction of under pass from Cubbonpet to City civil Complex, Bangalore, at the earliest.

b) Grant any such other order as this Hon'ble Court deems fit in the interest of justice and equity.

**INTERIM PRAYER**

Pending disposal of the present writ petition it is prayed to this Hon'ble Court that it may kindly be pleased to direct the Respondents to inspect the place immediately where sub-way to be constructed and to commence the work at the earliest in the interest of justice and equity.

ಈ ರಸ್ತೆಯ ಮಾರ್ಗದಲ್ಲಿ ನೀರಿನ, ವಿದ್ಯುತ್, ದೂರವಾಣಿ ಕೊಳವೆಗಳು ಹೋಗುತ್ತಿರುವ ಕಾರಣ, ಪಾದಚಾರಿ ಸುರಂಗ ಮಾರ್ಗದ ಬದಲಾಗಿ, ಪಾದಚಾರಿ ಮೇಲುಸೇತುವೆ ನಿರ್ಮಿಸಲು ಸೂಕ್ತವೆಂದು ಅಭಿಪ್ರಾಯಪಡಲಾಗಿರುತ್ತದೆ. ದಿನಾಂಕ:15-12-2010ರಂದು ಘನ ಉಚ್ಚ ನ್ಯಾಯಾಲಯವು ಪಾದಚಾರಿ ಮೇಲುಸೇತುವೆಯನ್ನು ನಿರ್ಮಿಸಲು ಪಾಲಿಕೆಯ ಸ್ಥಾಯಿ ಸಮಿತಿಯಿಂದ ದಿನಾಂಕ:31-01-2011 ರ ಒಳಗಾಗಿ ಅನುಮೋದನೆ ಪಡೆಯಲು ಹಾಗೂ ದಿನಾಂಕ: 31-03-2011 ರ ಒಳಗಾಗಿ ಪಾದಚಾರಿ ಮೇಲುಸೇತುವೆ ನಿರ್ಮಿಸಲು ಆದೇಶಿಸಿರುತ್ತದೆ. ಈ ವಿಷಯವನ್ನು ಪಾಲಿಕೆಯ ವಕೀಲರಾದ ಶ್ರೀ.ಕೆ.ಎನ್.ಪುಟ್ಟೇಗೌಡ ರವರು ದೃಢೀಕೃತ ಆದೇಶ ಪ್ರತಿ ಕಾಯ್ದಿರಿಸಲಾಗಿರುವುದಾಗಿ, ದಿನಾಂಕ:16-12-2010 ರಂದು ತಿಳಿಸಿರುತ್ತಾರೆ.

ಈ ಹಿನ್ನಲೆಯಲ್ಲಿ, ಕಂದಾಯ ಭವನ ಎದುರು ಕೆಂಪೇಗೌಡ ರಸ್ತೆಯಲ್ಲಿ ಪಾದಚಾರಿ ಮೇಲುಸೇತುವೆಯನ್ನು ನಿರ್ಮಿಸಲು ಹಾಗೂ ಟೆಂಡರ್ ಪ್ರಕಟಣೆ ಹೊರಡಿಸಲು ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ

.........................2

ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27-12-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ನಿರ್ಣಯ: "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

## ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ: 10 (182)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕೋರಮಂಗಲದ ವಾರ್ಡ್ ಸಂಖ್ಯೆ:151 ಮತ್ತು ಮಡಿವಾಳ ವಾರ್ಡ್ ಸಂಖ್ಯೆ: 172 ರಲ್ಲಿ ಬರುವ ಖಾಸಗಿ ಸ್ವತ್ತುಗಳು ಹೊಸೂರು ರಸ್ತೆ ಅಗಲೀಕರಣಕ್ಕೆ ಅವಶ್ಯಕವಾಗಿ ಬೇಕಾಗಿದ್ದು, ಇವುಗಳನ್ನು ಭೂಸ್ವಾಧೀನ ಕಾಯ್ದೆಯನ್ವಯ, ಭೂಸ್ವಾಧೀನಪಡಿಸಿಕೊಳ್ಳಲು ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ) ರವರು ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ರವರ ಮುಖಾಂತರ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಆಸ್ತಿಗಳ ವಿವರಗಳು, ಖಾತೆದಾರರ ಹೆಸರು, ಸ್ವಾಧೀನಪಡಿಸಿಕೊಳ್ಳಲಾಗುವ ವಿಸ್ತೀರ್ಣ ಮತ್ತು ಆ ವಿಸ್ತೀರ್ಣದ ಮತ್ತು ಕಟ್ಟಡಗಳ ಮೌಲ್ಯಗಳನ್ನು ಲೆಕ್ಕಾಚಾರ ಮಾಡಿ ಸದರಿ ವಿಸ್ತೀರ್ಣವನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ.

ಈ ಪ್ರಕರಣದ ಆಸ್ತಿಗಳ ಸ್ಥಳ ತನಿಖೆಯನ್ನು ಉಪ ಆಯುಕ್ತರು (ಭೂಸ್ವಾಧೀನ) ರವರು ದಿನಾಂಕ:31-07-2010 ರಂದು ನಡೆಸಿರುತ್ತಾರೆ. ಆ ಸಮಯದಲ್ಲಿ ಸಹಾಯಕ ಅಭಿಯಂತರರು ಮತ್ತು ಮೋಜಣಿದಾರರು ಸ್ಥಳದಲ್ಲಿ ಹಾಜರಿದ್ದರು. ಈ ಪ್ರಕರಣಗಳ ಆಸ್ತಿಗಳ ಖಾತೆದಾರರು ಈ ಹಿಂದೆ ಟಿ.ಡಿ.ಆರ್ ಯೋಜನೆಯಡಿಯಲ್ಲಿ ಡಿ.ಆರ್.ಸಿ ಪಡೆಯಲು ಒಪ್ಪಿಕೊಂಡಿದ್ದು, ತದನಂತರ ಡಿ.ಆರ್.ಸಿ ಪಡೆಯಲು ಆಸಕ್ತಿ ತೋರಿಸಿಲ್ಲವಾದ ಕಾರಣ ಹಾಗೂ ಆಸ್ತಿಗಳು ರಾಷ್ಟ್ರೀಯ ಹೆದ್ದಾರಿಗೆ ಲಗತ್ತಾಗಿದ್ದು, ಕೆಳ ಸೇತುವೆ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವ ಹಂತದಲ್ಲಿದ್ದು, ನೆಲಮಟ್ಟದ ರಸ್ತೆಯಿಂದ ಅಂದರೆ ಹೊಸೂರು ರಸ್ತೆಯಿಂದ ಬಂದವರು ಎಡ ಭಾಗದಿಂದ ಕೋರಮಂಗಲ ಕಡೆಗೆ ಹೋಗಲು ಹಾಗೂ ಮಡಿವಾಳ ಗ್ರಾಮ, ಮಾರುತಿನಗರದ ಕಡೆ ಹೋಗಲು ರಸ್ತೆ ಅಗಲೀಕರಣ ಮಾಡುವುದು ಅವಶ್ಯವಾಗಿರುತ್ತದೆ ಎಂದೂ, ಇದೇ ರೀತಿ ಬೆಂಗಳೂರು ಕಡೆಯಿಂದ ಬಂದವರು ಟೋಟಲ್ ಷಾಪಿಂಗ್ ಕಾಂಪ್ಲೆಕ್ಸ್‌ನಿಂದ ಎಡಭಾಗಕ್ಕೆ ಕೋರಮಂಗಲ ಮತ್ತು ಸರ್ಜಾಪುರ ರಸ್ತೆ ಕಡೆಗೆ ಸುಗಮ ಸಂಚಾರಕ್ಕಾಗಿ ಈ ರಸ್ತೆಯನ್ನು ಸಹ ಅಗಲೀಕರಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಅವಶ್ಯಕವಿರುತ್ತದೆಂದು ಶಿಫಾರಸ್ಸು ಮಾಡಿರುತ್ತಾರೆ. 1894ರ ಭೂಸ್ವಾಧೀನ ಕಾಯ್ದೆಯನ್ವಯ ಈ ಆಸ್ತಿಗಳಿಗೆ ಸರ್ಕಾರದ ಮಾರ್ಗಸೂಚಿ ಬೆಲೆಯನ್ವಯ, ಪಾವತಿಸಬೇಕಾದ ಪರಿಹಾರ ಮತ್ತು ಇತರೆ ವೆಚ್ಚಗಳು ಈ ರೀತಿ ಇರುತ್ತವೆ.

## VALUATION STATEMENT SHOWING THE PROPOSED LAND, AND BUILLDING TO BE ACQUIRED IN HOSUR ROAD AT MADIWALA

| SL.No. | CTS No / Katha No | Name of the Owner | Name of the Anubhavadar | Nature of Land | Description of the building | Area required for Acquisition (Sqm) | Cost(Rs) |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | 134<br>5-1, 78 | M.Dhadhajohn | M.Dhadhajohn | Vacant land | - | 11.50 | 494960 |
| | 134<br>5-2, 78 | Siraj Ahmed | Siraj Ahmed | | | | |
| | 134<br>5/3, 78 | M.Dhadhajohn | M.Dhadhajohn | | | | |
| | 134<br>5-4, 78 | M.S.Masthan | M.S.Masthan | | | | |
| | 134<br>78/5, 6/7 | Asmathulla M | Asmathulla M | | | | |
| 2 | 134<br>78/2 | Ramakrishna | Ramakrishna | Vacant land | - | 10.00 | 430400 |
| 3 | 134<br>78/3 | Pillappa | Pillappa | Vacant land | - | 5.92 | 254796.8 |
| 4 | 134<br>79 | K.Manjunatha | K.Manjunatha | Vacant land | - | 20.47 | 881028.8 |
| 5 | 134<br>78 | V.N. Nagaraj | V.N. Nagaraj | Vacant land | - | 66.30 | 2853552 |
| 6 | 134<br>77/1 | Harish B Mulki | Harish B Mulki | Vacant land | - | 69.30 | 29822672 |
| 7 | 134& 135<br>76, 125 | Vishwanatha C | Vishwanatha C | Vacant land | - | 14.00 | 602560 |
| | | | Vishwanatha C | Site only | - | 90.25 | 3884360 |
| | | | | | Value of RCC Building (G+2) | 270.75 | 1164225 |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 8 | 135<br>76/02 | Swarnamala G | Swarnamala G | Site only | - | 25.31 | 10893424 |
| | | | | | Value of RCC Building (G+3) | 101.24 | 435332 |
| 9 | 135<br>76/2-1 | Anil Kumar chopra | Anil Kumar chopra | Site only | - | 22.00 | 946880 |
| | | | | | Value of RCC Building (G+0) | 22.00 | 88000 |
| 10 | 135 & 136<br>75/2-1 | Rajamma | Rajamma | Site only | - | 19.80 | 852192 |
| | | | | | Value of RCC building (G+0) | 19.80 | 79200 |
| | | | | Site only | - | 22.75 | 979160 |
| | | | | | Value of RCC building (G+0) | 22.75 | 91000 |
| 11 | 136<br>75/2, 124 | Salem Bai & Ashok Kumar | Salem Bai & Ashok Kumar | Site only | - | 19.82 | 853052.8 |
| | | | | | Value of RCC building (G+0) | 19.82 | 69370 |
| 12 | 136<br>75/1 | Vishwanatha C | Vishwanatha C | Site only | - | 15.95 | 686488 |
| | | | | | Value of RCC building (G+0) | 15.95 | 55825 |
| 13 | 137<br>74 | M.S.Masthan | M.S.Masthan | Site only | - | 40.06 | 1724182.4 |
| | | | | | Value of RCC building (G+1) | 80.12 | 320480 |

| | | | | | | | |
|---|---|---|---|---|---|---|---|
| 14 | 138<br>73/1-1, 123 | Shankar Gupta D.R | Shankar Gupta D.R. | | | | |
| | 138<br>73/1-2, 123 | Chandra Mohan D.R | Chandra Mohan D.R. | | | | |
| | 138<br>73/1-3, 123 | Vasantha Kumari J.S | Vasantha Kumari J.S | Site only | - | 136.12 | 5858604.8 |
| | 138<br>73/1-4, 123 | Nagendra Prasad D.R | Nagendra Prasad D.R | | | | |
| | 138<br>73/1-5, 123 | Rajendra Gupta D.R | Rajendra Gupta D.R | | | | |
| | 138<br>73/01, 123 | Saraswathamma | Saraswathamma | | | | |
| | | | | | Value of RCC building (G+0) | 136.12 | 544480 |
| 15 | 147/2<br>18, 122 | M/s. Vijaya Enterprises | M/s. Vijaya Enterprises | Site only | - | 235.20 | 10123008 |
| | | | | | Value of RCC building (G+2) | 705.60 | 2822400 |
| 16 | 148<br>1/2 | Narayan Swamy M.P | Narayan Swamy M.P | Site only | - | 22.35 | 961944 |
| | | | | | Value of RCC building (G+0) | 22.35 | 55875 |
| 17 | 149<br>73, 121 | A. Narayan Reddy | A. Narayan Reddy | Site only | - | 18.50 | 796240 |
| | | | | | Value of AC sheet building (G+0) | 18.50 | 37000 |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 18 | 149<br>72, 120 | C. Jagadesh | C. Jagadesh | Site only | - | 20.00 | 860800 |
| | | | | | Value of AC sheet building (G+0) | 20.00 | 40000 |
| 19 | 149<br>71, 119 | Rahamath BI | Rahamath BI | Site only | - | 18.50 | 796240 |
| | | | | | Value of AC sheet building (G+0) | 18.50 | 37000 |
| 20 | 150<br>70/1, 116 | Sahira Devi | Sahira Devi | Site only | - | 18.00 | 774720 |
| | | | | | Value of RCC building (G+1) | 36.00 | 144000 |
| 21 | 150<br>70 | Bhagaram, | Bhagaram, | Site only | - | 18.00 | 774720 |
| | | | | | Value of RCC building (G+1) | 36.00 | 144000 |
| 22 | 150<br>69/1 | M. Anand Kumar | M. Anand Kumar | Site only | - | 37.00 | 1592480 |
| | | | | | Value of RCC building (G+1) | 74.00 | 296000 |
| 23 | 150<br>69, 115 | D.R. Rajendra | D.R. Rajendra | Site only | - | 18.50 | 796240 |
| | | | | | Value of RCC building (G+0) | 18.50 | 37000 |
| 24 | 151<br>65, 110 | Anjaneya devastana | Anjaneya devastana | Site only | - | 15.40 | 662816 |
| | | | | | Value of RCC building (G+0) | 15.40 | 38500 |
| 25 | 152<br>67, 111 | P. Anand | P. Anand | Site only | - | 37.00 | 1592480 |
| | | | | | Value of RCC building (G+1) | 74.00 | 296000 |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 26 | 153 &154<br>68, 113 | Trustees Anjaneya devastana | Trustees Anjaneya devastana | Vacant land | - | 13.55 | 583192 |
| | | | | | | 13.20 | 568128 |
| 27 | 216 & 217<br>64/1 | Vinod Kumar K | Vinod Kumar K | Site only | - | 20.07 | 863812.8 |
| | | | | | Value of RCC building (G+1) | 40.14 | 120420 |
| | | | | Site only | - | 19.57 | 842292.8 |
| | | | | | Value of RCC building (G+1) | 39.14 | 117420 |
| 28 | 216 &217<br>22/02 | Nanjappa P | Nanjappa P | Site only | - | 7.08 | 304723.2 |
| | | | | | Value of RCC building (G+2) | 21.24 | 63720 |
| | | | | Site only | - | 21.84 | 939993.6 |
| | | | | | Value of RCC building (G+2) | 65.52 | 196560 |
| 29 | 217<br>8, 64 | Velin D | Velin D | Site only | - | 27.51 | 1184030.4 |
| | | | | | Value of RCC building (G+0) | 27.51 | 55020 |
| 30 | 217<br>64/5 | Vijaya Kumar P | Vijaya Kumar P | Site only | - | 26.20 | 1127648 |
| | | | | | Value of AC sheet building (G+0) | 26.20 | 39300 |

| | | | | | | | |
|---|---|---|---|---|---|---|---|
| 31 | 217<br>64/6 | Jayanthi. M | Jayanthi. M | Site only | - | 27.75 | 1194360 |
| | | | | | Value of RCC building (G+2) | 83.25 | 249750 |
| 32 | 218<br>62, 99 | Kumaraswamy Modaliyar A D | Kumaraswamy Modaliyar A D | Vacant land | - | 49.40 | 2126176 |
| | | | | Vacant land | - | 6.00 | 258240 |
| 33 | 218<br>64, 102 | Krishna Singh S | Krishna Singh S | Site only | - | 12.80 | 550912 |
| | | | | | Value of RCC building (G+0) | 12.80 | 19200 |
| 34 | 218<br>64/1 | M. Ranganatha | M. Ranganatha | Site only | - | 10.00 | 430400 |
| | | | | | Value of RCC building (G+1) | 20.00 | 50000 |
| 35 | 218<br>64/3 | Surya Narayan | Surya Narayan | Site only | - | 10.00 | 430400 |
| | | | | | Value of RCC building (G+1) | 20.00 | 50000 |
| 36 | 218<br>03-100 | Meharunnisa | Meharunnisa | Site only | - | 11.05 | 475592 |
| | | | | | Value of RCC building (G+1) | 22.10 | 55250 |
| 37 | 218<br>62/2 | Vinod Kumar K | Vinod Kumar K | Vacant land | - | 8.60 | 370144 |
| 38 | 219<br>63/5 | T. Chandrashekar Reddy | T. Chandrashekar Reddy | Vacant land | - | 18.67<br>7.50<br>26.17 | 803556.8<br>322700 |
| 39 | 224<br>54 | Vinod Kumar K | Vinod Kumar K | Vacant land | - | 22.72 | 977868.8 |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 40 | 428<br>22/05 | Dasappa | Dasappa | Site only | - | 41.50 | 1786160 |
| | | | | | Value of RCC building (G+1) | 83.00 | 249000 |
| 41 | 406,428<br>33/56 | M.R.Venugopal | M.R.Venugopal | Vacant land | - | 16.80 | 723072 |
| | | | | Vacant land | - | 37.81 | 1627342.4 |
| 42 | 396<br>36, 57 | Rakesh C | Rakesh C | Vacant land | - | 16.50 | 710160 |
| 43 | 396<br>37, 58 | Vinod A | Vinod A | Site only | - | 16.95 | 729528 |
| | | | | | Value of RCC building (G+2) | 50.85 | 203400 |
| 44 | 395<br>38, 62 | Jayamma | Jayamma | Vacant land | - | 10.65 | 458376 |
| 45 | 399<br>51/1-3 | Sangeetha M | Sangeetha M | Vacant land | - | 45.00 | 1936800 |
| 46 | 39951/1-2 | B. Gopal Reddy & C. Chamundeshwari | B. Gopal Reddy & C. Chamundeshwari | Vacant land | - | 19.53 | 840571.2 |
| 47 | 217<br>63/1 | **P.Ashwini** | **P.Ashwini** | Vacant land | - | **47.43** | **2041387.2** |
| | | | | | | **3872.83** | **78578314.00** |

**Total vacant land & site area = 1633.68 sqm & Amount required for vacant land & site area = Rs.70313587.00**

**Total built up area = 2239.15sqm & Amount required for built up area = Rs. 8264727.00**

**Total area = 3872.83sqm & Amount required for both vacant land, site area & built up area = Rs. 78578314.00**

‘ಅ’

| | | |
|---|---|---|
| 1. ಮಾರ್ಗಸೂಚಿ ಬೆಲೆ ಚ.ಅ. 1ಕ್ಕೆ 4000/-ರೂ.ಗಳಂತೆ | | |
| 2. ಭೂಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ 1633.68 ಚ.ಮೀ ಅಥವಾ 17578.3968 ಚ.ಅ X 4000 | 7,03,13,587–00 | 7,85,78,314–00 |
| 3. ಭೂಸ್ವಾಧೀನಪಡಿಸಿಕೊಳ್ಳುವ ಕಟ್ಟಡದ ವಿಸ್ತೀರ್ಣ ಮತ್ತು ಮೊಬಲಗು ಚ.ಮೀ 2239.15 ಚ.ಮೀ ಗಳಲ್ಲಿ | 82,64,727–00 | |
| 4. ಈ ಮೊಬಲಗಿಗೆ 1894 ಭೂಸ್ವಾಧೀನ ಕಾಯ್ದೆಯನ್ವಯ ಕಲಂ 23(1)(ಎ) ರನ್ವಯ, ಮಾರುಕಟ್ಟೆ ಬೆಲೆಯ ಮೇಲೆ ಸಾಲಿಯಾನ ಶೇ.12 ಹೆಚ್ಚುವರಿ ಮಾರುಕಟ್ಟೆ ಬೆಲೆ 1 ವರ್ಷಕ್ಕೆ | | 94,29,398–00 |
| 5. 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶಾಸನಬದ್ಧ ಭತ್ಯೆ, ಶೇ. 30 ರಂತೆ | | 2,35,73,494–00 |
| **ಒಟ್ಟು** | | **11,15,81,206–00** |

‘ಆ’

**ಇತರೇ ವೆಚ್ಚಗಳು**

| | |
|---|---|
| ಸಿಬ್ಬಂದಿ ವೆಚ್ಚ ಶೇ.10 ರಷ್ಟು | 1,11,58,121–00 |
| ಆಡಿಟ್ ವೆಚ್ಚ ಶೇ.1 ರಷ್ಟು | 11,15,812–00 |
| ಪ್ರಕಟಣಾ ವೆಚ್ಚ | 2,00,000–00 |
| ಒಟ್ಟು | **1,24,73,933–00** |
| (ಅ+ಆ) | **12,40,55,139–00** |

ಮೇಲ್ಕಂಡ ಸ್ವತ್ತುಗಳ ಭೂಪರಿಹಾರದ ಮೊತ್ತವು (ಅ+ಆ) ಒಟ್ಟು **12,40,55,139–00** ರೂ.(ರೂಪಾಯಿ ಹನ್ನೆರಡು ಕೋಟಿ ನಲವತ್ತು ಲಕ್ಷದ ಐವತ್ತೈದು ಸಾವಿರದ ಒಂದುನೂರ ಮೂವತ್ತೊಂಭತ್ತು ರೂಪಾಯಿಗಳು ಮಾತ್ರ.)

ರಸ್ತೆ ಅಗಲೀಕರಣಕ್ಕಾಗಿ ಸ್ವತ್ತುಗಳನ್ನು 1894 ರ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಆಗುವ ಭೂಪರಿಹಾರದ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ.**12,40,55,139.00** (ರೂಪಾಯಿ ಹನ್ನೆರಡು ಕೋಟಿ ನಲವತ್ತು ಲಕ್ಷದ ಐವತ್ತೈದು ಸಾವಿರದ ಒಂದುನೂರ ಮೂವತ್ತೊಂಭತ್ತು ರೂಗಳು ಮಾತ್ರ.) ಗಳನ್ನು ಭರಿಸುವ ಬಗ್ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:19–08–2010 ರ ಟಿಪ್ಪಣಿ ಹಾಗೂ ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:27–10–2010ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28–12–2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15-11-2010 ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010 ರ ನಿರ್ಣಯಗಳನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15-11-2010 ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010 ರ ನಿರ್ಣಯಗಳನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ: 11 (183)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ: 179 (ಹಳೇ ವಾರ್ಡ್ ನಂ. 57) ಸ್ವತ್ತಿನ ಸಂಖ್ಯೆ: ಸಾರಕ್ಕಿ ಗ್ರಾಮದ ಸರ್ವೆ ನಂ. 58/1ಎ, 59, 64/2, 65 ಮತ್ತು 69 ರಲ್ಲಿನ ಸ್ವತ್ತುಗಳನ್ನು ಬೃಹತ್ ನೀರುಗಾಲುವೆ 'ಯು' ಮಾದರಿ ಚರಂಡಿ ಕಾಮಗಾರಿಗಾಗಿ ನಿರ್ಮಾಣಕ್ಕಾಗಿ ಭೂಸ್ವಾಧೀನ ಪಡಿಸಿಕೊಳ್ಳಬೇಕೆಂದು, ಮುಖ್ಯ ಅಭಿಯಂತರರು (ಬೃಹತ್ ಮಳೆನೀರು ಕಣಿವೆ) ರವರು ದಿನಾಂಕ: 18-10-2010 ರಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಬನಶಂಕರಿಯಿಂದ ನವೋದಯ ಲೇಔಟ್‌ನವರೆಗೆ ಆರ್.ಸಿ.ಸಿ. **'ಯು'** ಮಾದರಿಯ ಮಳೆ ನೀರು ಚರಂಡಿಯ ನಿರ್ಮಾಣದ ಕಾಮಗಾರಿಯನ್ನು ನಿರ್ವಹಿಸಲು ಕೆಲಸದ ಆದೇಶವನ್ನು ಗುತ್ತಿಗೆದಾರರಿಗೆ ನೀಡಲಾಗಿದ್ದು, ಶಾಖಾಂಬರಿ ನಗರದಲ್ಲಿ ಹೊಸದಾಗಿ ನಿರ್ಮಿಸಲಾದ ಲೇಔಟ್‌ನಲ್ಲಿರುವ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಪೈಪ್‌ಲೈನ್‌ನಿಂದ ಮಳೆಯ ನೀರು ಪ್ರಾರಂಭವಾಗಿ ಲೇಔಟ್‌ನ ಪರಿಧಿಯಲ್ಲಿ ಸಾಗಿ, ಮುಂದೆ ಜಯಂತಿಗಾರ್ಡನ್ ಅಪಾರ್ಟ್‌ಮೆಂಟ್‌ನಲ್ಲಿ ಹಾದು ಹೋಗಿ ಜೆ.ಪಿ.ನಗರದ ಮುಖ್ಯರಸ್ತೆಯಲ್ಲಿರುವ ಮಳೆಯ ನೀರು ಚರಂಡಿಗೆ ಸೇರುವಂತೆ, ಯೋಜಿಸಲಾಗಿದೆ. ಮಳೆ ನೀರಿನ ಚರಂಡಿಯನ್ನು 3.20 ಮೀ x 1.80 ಮೀ. ವಿಸ್ತೀರ್ಣದ ವೆಂಟ್ ನಿರ್ಮಿಸಲು ಯೋಜಿಸಿದ್ದು, ಆರ್.ಸಿ.ಸಿ. ಚರಂಡಿಗೆ ಬದಿಗೋಡೆ ಮತ್ತು ತಳಪಾಯದ ಸೆಟ್‌ಬ್ಯಾಕ್‌ಗಳು ಸೇರಿದಂತೆ 4.30 ಮೀ. ಗಳ ಅಗಲದ ಜಮೀನು/ನಿವೇಶನ ಅವಶ್ಯಕತೆ ಇರುತ್ತದೆ. ಹಾಲಿ ಲೇಔಟ್‌ನಲ್ಲಿರುವ ಮಳೆ ನೀರು ಚರಂಡಿಯು 2 ಮೀ. ಅಗಲವಿದ್ದು, ಸದರಿ ಮಳೆ ನೀರಿನ ಚರಂಡಿಯನ್ನು ಬಾಕ್ಸ್ ಡ್ರೈನ್‌ನಂತೆ ನಿರ್ಮಿಸಿ ಅದರ ಮೇಲೆ ರಸ್ತೆಯನ್ನು ಯೋಜಿಸಿದ್ದರೆ ಹಾಲಿ ಇರುವ 2 ಮೀ. ಅಗಲದೊಂದಿಗೆ ಇನ್ನೂ 6 ಮೀ.ಗಳ ಅವಶ್ಯಕತೆ ಇರುತ್ತದೆ. ಸದರಿ ಜಾಗವನ್ನು ಶಾಸಕರು ಸ್ಥಳ ಪರಿಶೀಲನೆ ಮಾಡಿ, ಭೂಸ್ವಾಧೀನಪಡಿಸಿಕೊಳ್ಳುವ ಅವಶ್ಯಕತೆ ಇದೆ ಎಂದು ಮುಖ್ಯ ಅಭಿಯಂತರರು (ಎಸ್‌ಡಬ್ಲ್ಯೂಡಿ) ರವರಿಗೆ ತಿಳಿಸಿದ್ದು, ಅದರಂತೆ ಭೂಮಾಪಕರು ಸ್ಥಳ ಪರಿಶೀಲನೆ ಮಾಡಿ ನಕ್ಷೆ ತಯಾರಿಸಿ, ಭೂಸ್ವಾಧೀನತೆಗೆ ಒಳಪಡುವ ಸ್ವತ್ತುಗಳ ವಿಸ್ತೀರ್ಣದ ವಿವರಗಳನ್ನು ನೀಡಿದ್ದು, ಅದರಂತೆ, ಮುಖ್ಯ ಅಭಿಯಂತರರು (ಎಸ್‌ಡಬ್ಲ್ಯೂಡಿ) ರವರು ಸ್ಥಳ ಪರಿಶೀಲಿಸಿ, ಭೂಸ್ವಾಧೀನ ಮಾಡಿಕೊಳ್ಳುವ ಅವಶ್ಯಕತೆ ಇದೆ ಎಂದು ಶಿಫಾರಸ್ಸು ಮಾಡಿದ್ದು, ಉಪ ಆಯುಕ್ತರು (ಭೂಸ್ವಾಧೀನ) ರವರು ಸಹ ಸ್ಥಳ ತನಿಖೆ ಮಾಡಿ ಪ್ರಸ್ತಾಪಿತ ಸ್ವತ್ತುಗಳ ಭೂಸ್ವಾಧೀನ ಮಾಡಿಕೊಳ್ಳುವ ಅವಶ್ಯಕತೆ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಈ ಕೆಳಕಂಡಂತೆ ಇರುತ್ತವೆ.

| ಕ್ರ. ಸಂ. | ವಾರ್ಡ್ ಸಂಖ್ಯೆ ಮತ್ತು ನಿವೇಶನ ಸಂಖ್ಯೆ, ಖಾತೆ ಸಂಖ್ಯೆ | ಖಾತೆದಾರರ ಹೆಸರು (ಖಾತೆ ನಕಲಿನನ್ವಯ) | ಬಡಾವಣೆ | ಭೂಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ ಚ.ಅ.ಗಳಲ್ಲಿ | ಷರಾ |
|---|---|---|---|---|---|
| 1 | 179 (ಹಳೇ ವಾರ್ಡ್ ನಂ.57), ಸಾರಕ್ಕಿ ಗ್ರಾಮದ ಸರ್ವೆ ನಂ.58/1ಎ | ಶ್ರೀ. ರಾಮಯ್ಯ, (ಆರ್.ಟಿ.ಸಿ. ಪ್ರಕಾರ) ಶ್ರೀ. ಎ.ಜಿ.ಕುಲಕರ್ಣಿ ಹಾಗೂ ಇತರ 18 ಜನ (ಬಿ.ಬಿ.ಎಂ.ಪಿ. ಖಾತೆ ಪ್ರಕಾರ) | ಸಾರಕ್ಕಿ | 192 ಚ.ಮಿ. (2065 ಚ.ಅ) | - |

.........................2

| | | | | | |
|---|---|---|---|---|---|
| 2 | 179 (ಹಳೇ ವಾರ್ಡ್ ನಂ.57), ಸಾರಕ್ಕಿ ಗ್ರಾಮದ ಸರ್ವೆ ನಂ.59 | ಶ್ರೀಮತಿ. ಜಯಂತಿ, ನಿರ್ಮಲ ಮತ್ತು ಇತರ 14 ಜನ (ಆರ್.ಟಿ.ಸಿ. ಪ್ರಕಾರ) ಶ್ರೀ. ಎಸ್.ರಾಮಕುಮಾರ್ ಮತ್ತು ಇತರ 20 ಜನ (ಬಿ.ಬಿ.ಎಂ.ಪಿ. ಖಾತೆ ಪ್ರಕಾರ) | ಸಾರಕ್ಕಿ | 168 ಚ.ಮೀ. (1808 ಚ.ಅ) | - |
| 3 | 179 (ಹಳೇ ವಾರ್ಡ್ ನಂ.57), ಸಾರಕ್ಕಿ ಗ್ರಾಮದ ಸರ್ವೆ ನಂ.64/2 | ಶ್ರೀಮತಿ. ಲಕ್ಷ್ಮಿನಾರಾಯಣಮ್ಮ ಇತರ 13 ಜನ (ಆರ್.ಟಿ.ಸಿ. ಪ್ರಕಾರ) ಶ್ರೀ. ಮುನಿವೆಂಕಟಪ್ಪ ಮತ್ತು ಇತರ 5 ಜನ (ಬಿ.ಬಿ.ಎಂ.ಪಿ. ಖಾತೆ ಪ್ರಕಾರ) | ಸಾರಕ್ಕಿ | 411 ಚ.ಮೀ. (4422 ಚ.ಅ) | - |
| 4 | 179 (ಹಳೇ ವಾರ್ಡ್ ನಂ.57), ಸಾರಕ್ಕಿ ಗ್ರಾಮದ ಸರ್ವೆ ನಂ.65 | ಶ್ರೀ.ಎ.ಜಿ.ಕೃಷ್ಣಮೂರ್ತಿ (ಆರ್.ಟಿ.ಸಿ. ಪ್ರಕಾರ) ಶ್ರೀ. ಮುನಿವೆಂಕಟಪ್ಪ ಉ॥ ರಾಘವೆಂದ್ರ ಮತ್ತು ಇತರ 4 ಜನ (ಬಿ.ಬಿ.ಎಂ.ಪಿ. ಖಾತೆ ಪ್ರಕಾರ) | ಸಾರಕ್ಕಿ | 294 ಚ.ಮೀ. (3163 ಚ.ಅ) | - |
| 5 | 179 (ಹಳೇ ವಾರ್ಡ್ ನಂ.57), ಸಾರಕ್ಕಿ ಗ್ರಾಮದ ಸರ್ವೆ ನಂ.69 | ಶ್ರೀ.ಕಾಟನ್‌ಪೇಟೆ ಸೊಸೈಟಿ (ಆರ್.ಟಿ.ಸಿ. ಪ್ರಕಾರ) ಶ್ರೀ. ಆರ್.ಧರ್ಮಸಾಧಕ್ (ಅನುಭವದಾರ) (ಬಿ.ಬಿ.ಎಂ.ಪಿ. ಖಾತೆ ಪ್ರಕಾರ) | ಸಾರಕ್ಕಿ | 159 ಚ.ಮೀ. (1710 ಚ.ಅ) | - |

ಕಾರ್ಯದರ್ಶಿಗಳು, ಕೇಂದ್ರ ಮೌಲ್ಯ ಮಾಪನ ಸಮಿತಿ, ಬೆಂಗಳೂರು ಜಿಲ್ಲೆ ಇವರ ಅಧಿಸೂಚನೆ ಸಂಖ್ಯೆ: ಸಿವಿಸಿ/ಬಿಯುಡಿ/5/2006-07, ದಿನಾಂಕ: 17-04-2007 ರಂದು ಪ್ರಕಟಿಸಿರುವ ಮಾರ್ಗಸೂಚಿ ಬೆಲೆಯನ್ನಾಧರಿಸಿ, ಈ ಪ್ರಕರಣದ ಸ್ವತ್ತಿಗೆ ಭೂಪರಿಹಾರವನ್ನು ಹಾಗೂ ಕಟ್ಟಡದ ಮೌಲ್ಯವನ್ನು ಸೇರಿಸಿ ಒಟ್ಟು ರೂ. **2,89,97,959-00 (ರೂಪಾಯಿ ಎರಡು ಕೋಟಿ ಎಂಭತ್ತೊಂಭತ್ತು ಲಕ್ಷದ ತೊಂಭತ್ತೇಳು ಸಾವಿರದ ಒಂಭೈನೂರ ಐವತ್ತೊಂಭತ್ತು)** ಗಳನ್ನು ಪಾವತಿಸುವ ಮೂಲಕ ಭೂಸ್ವಾಧೀನಪಡಿಸಿಕೊಳ್ಳಲು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.

| **'ಅ'** | | |
|---|---|---|
| 1 | ನಿವೇಶನ ದರ ಚ.ಅ 1ಕ್ಕೆ ಮಾರ್ಗ ಸೂಚಿ ಬೆಲೆ ರೂ. 1,400/- ರಂತೆ 13,168 ಚ.ಅಡಿಗಳಿಗೆ | ರೂ.1,84,35,200-00 |
| 2 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)ಎ ರನ್ವಯ ಶಾಸನಬದ್ಧ ಭತ್ಯೆ ಶೇ 12 ರಂತೆ | ರೂ.22,12,224-00 |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶಾಸನಬದ್ಧ ಭತ್ಯೆ ಶೇ 30 ರಂತೆ | ರೂ.55,30,560-00 |
| **ನಿವೇಶನದ ಮೌಲ್ಯ ಒಟ್ಟು** | | **ರೂ.2,61,77,984-00** |

.........................3

'ಆ'

| | | |
|---|---|---|
| 1 | ಶೇಕಡ 10 ರಷ್ಟು ಆಡಳಿತ ವೆಚ್ಚ | ರೂ.26,17,798-00 |
| 2 | ಶೇಕಡ 1 ರಷ್ಟು ಆಡಿಟ್ ವೆಚ್ಚ | ರೂ.26,177-00 |
| 3 | ಪ್ರಕಟಣಾ ವೆಚ್ಚ | ರೂ.1,00,000-00 |
| | ಒಟ್ಟು | **ರೂ.27,43,975-00** |

(ಅ+ಆ) ಒಟ್ಟು = **ರೂ.2,89,21,959-00**

**(ರೂ.ಎರಡು ಕೋಟಿ ಎಂಭತ್ತೊಂಭತ್ತು ಲಕ್ಷದ ಇಪ್ಪತ್ತೊಂದು ಸಾವಿರದ ಒಂಭೈನೂರ ಐವತ್ತೊಂಭತ್ತು ಮಾತ್ರ)**

'ಇ'

| | | |
|---|---|---|
| 1 | **ಕಾಂಪೌಂಡ್ ವೆಚ್ಚ 38 ಚ.ಮೀ X ರೂ.2,000 ಚ.ಮೀ.ರಂತೆ** | **76,000-00** |
| 2. | **ಒಟ್ಟು ಮೌಲ್ಯ (ಅ+ಆ+ಇ)** | **2,89,97,959-00** |

**(ರೂ.ಎರಡು ಕೋಟಿ ಎಂಭತ್ತೊಂಭತ್ತು ಲಕ್ಷದ ತ್ತೊಂಭತ್ತೇಳು ಸಾವಿರದ ಒಂಭೈನೂರ ಐವತ್ತೊಂಭತ್ತು ಮಾತ್ರ)**

ಪ್ರಸ್ತಾಪಿತ ಸ್ವತ್ತುಗಳನ್ನು ಪ್ರಸ್ತಾಪಿತ ಉದ್ದೇಶಕ್ಕೆ ಭೂಸ್ವಾಧೀನಪಡಿಸಿಕೊಳ್ಳುವುದು ತುಂಬಾ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಡಲಾಗಿದೆ. ಆದ್ದರಿಂದ, ಮೇಲ್ಕಂಡ ವೆಚ್ಚವನ್ನು ಭರಿಸಿ 1894 ರ ಭೂಸ್ವಾಧೀನ ಕಾಯ್ದೆಯ ಅಡಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಮತ್ತು ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸರ್ಕಾರದ ಅನುಮೋದನೆ ಕೋರಲು ಹಾಗೂ ಇದಕ್ಕೆ ತಗಲುವ ವೆಚ್ಚ ಸುಮಾರು **2,89,97,959-00 (ಎರಡು ಕೋಟಿ ಎಂಭತ್ತೊಂಭತ್ತು ಲಕ್ಷದ ತ್ತೊಂಭತ್ತೇಳು ಸಾವಿರದ ಒಂಭೈನೂರ ಐವತ್ತೊಂಭತ್ತು)** ಗಳನ್ನು ಪಾಲಿಕೆಯ 2010-11 ನೇ ಸಾಲಿನ ಆಯವ್ಯಯದಿಂದ ಭರಿಸಲು ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:25-10-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15-11-2010 ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15-11-2010 ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28-12-2010 ರ ನಿರ್ಣಯಗಳನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.........................4

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:15–11–2010 ರ ನಿರ್ಣಯ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:28–12–2010 ರ ನಿರ್ಣಯಗಳನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್. ಕೆ. ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

## ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ವಿಷಯ

### ವಿಷಯದ ಸಂಖ್ಯೆ: 12 (184)/2010-11

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಾಮಾನ್ಯ ನಾಗರೀಕರಿಗೆ ಉತ್ತಮ ರೀತಿಯ ಮೂಲಭೂತ ಸೌಲಭ್ಯಗಳನ್ನು ಅಂದರೆ ನೀರು, ಸೂರು, ರಸ್ತೆ ಮತ್ತು ನಗರದ ನೈರ್ಮಲ್ಯೀಕರಣ ಹಾಗೂ ಉತ್ತಮ ವೈದ್ಯಕೀಯ ಸೇವೆಯನ್ನು ಒದಗಿಸಿಕೊಡುವುದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆದ್ಯ ಕರ್ತವ್ಯವಾಗಿರುತ್ತದೆ. ಹಾಲಿ ಉತ್ತರಹಳ್ಳಿಯಲ್ಲಿ ಈಗಿರುವ ಒಂದು ಚಿಕ್ಕ ಕೊಠಡಿಯಿರುವ ಆಸ್ಪತ್ರೆಯಲ್ಲಿ ಒಬ್ಬ ವೈದ್ಯಾಧಿಕಾರಿ, ಒಬ್ಬ ಸ್ಟಾಫ್‌ನರ್ಸ್ ಹಾಗೂ ಒಬ್ಬ ಕಾವಲುಗಾರ ಮಾತ್ರ ಇದ್ದು, ಈ ಆಸ್ಪತ್ರೆಯಲ್ಲಿ ಗುಣಮಟ್ಟದ ಔಷಧಿಗಳು ಲಭ್ಯವಿರದೇ ಇರುವುದರಿಂದ ಸಾಮಾನ್ಯ ನಾಗರೀಕರು ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರೆ ಗುಣವಾಗುವ ನಂಬಿಕೆಯನ್ನೇ ಕಳೆದುಕೊಂಡಿರುತ್ತಾರೆ. ಈ ನಿಟ್ಟಿನಲ್ಲಿ ಹೊಸದಾಗಿ ಸೇರ್ಪಡೆಯಾದ ಪ್ರದೇಶಗಳಲ್ಲಿ ಪಾಲಿಕೆಯ/ಸರ್ಕಾರಿ ಸ್ಥಳಗಳನ್ನು ಗುರುತಿಸಿ ನಾಗರೀಕ ಸೌಲಭ್ಯಕ್ಕಾಗಿ ಉತ್ತಮ ರೀತಿಯ ಆಸ್ಪತ್ರೆಗಳನ್ನು ನಿರ್ಮಿಸುವ ದೃಷ್ಟಿಯಿಂದ ಬೃಹತ್ ಬೆಂಗಳೂರು ಮಹಾನಗರ .ಪಾಲಿಕೆಯ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಉತ್ತರಹಳ್ಳಿ ಪ್ರದೇಶದಲ್ಲಿ ಉತ್ತಮ ಗುಣಮಟ್ಟದ ಆಸ್ಪತ್ರೆಯನ್ನು ನಿರ್ಮಿಸಲು ಉದ್ದೇಶಿಸಿದ್ದು, ಸದರಿ ನಿರ್ಮಿಸಲು ಉದ್ದೇಶಿಸಿರುವ ಸಾರ್ವಜನಿಕ ಆಸ್ಪತ್ರೆಯು 125 ಹಾಸಿಗೆಗಳನ್ನೊಳಗೊಂಡ ಆಸ್ಪತ್ರೆಯಾಗಬಹುದಾಗಿರುತ್ತದೆ.

ಮೇಲಿನಂತೆ ಉತ್ತಮ ಗುಣಮಟ್ಟದ ಆಸ್ಪತ್ರೆಯ ನಿರ್ಮಾಣದ ಬಗ್ಗೆ ಸಾರ್ವಜನಿಕ ಸೌಲಭ್ಯಗಳನ್ನೊಳಗೊಂಡಂತೆ ಪಾಲಿಕೆಯ ವತಿಯಿಂದ ಸಾರ್ವಜನಿಕ ಆಸ್ಪತ್ರೆಯನ್ನು ನಿರ್ಮಿಸುವ ಸಂಬಂಧ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರು ಉತ್ತರಹಳ್ಳಿಯ ಬಸ್ ನಿಲ್ದಾಣದ ಎದುರಿನಲ್ಲಿರುವ ಪಾಲಿಕೆಯ ಸ್ವತ್ತಿನಲ್ಲಿ ಆಸ್ಪತ್ರೆಯನ್ನು ನಿರ್ಮಿಸಲು ಕೋರಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಟ್ಟಡಗಳು ಮತ್ತು ವಿನ್ಯಾಸ ವಿಭಾಗದಲ್ಲಿ ಎಂಪ್ಯಾನಲ್ ಆದ ಹಾಗೂ ಅನೇಕ ಖಾಸಗಿ ಮತ್ತು ಸಾರ್ವಜನಿಕ ಆಸ್ಪತ್ರೆಗಳ ನಕ್ಷೆ ಮತ್ತು ವಿನ್ಯಾಸಗಳನ್ನು ಕೈಗೊಂಡ ಮೆ.ನಂದೀಶ್ ಅಸೋಸಿಯೇಟ್ಸ್ ರವರನ್ನು ಕೋರಲಾಗಿ, ಸದರಿ ಸಲಹೆಗಾರರು ಉತ್ತರಹಳ್ಳಿಯ ಬಸ್ ನಿಲ್ದಾಣದ ಎದುರಿನಲ್ಲಿರುವ ಸುಮಾರು 4585.25 ಚ.ಮೀ ವಿಸ್ತೀರ್ಣದ ಪಾಲಿಕೆಯ ಸ್ವತ್ತಿನಲ್ಲಿ ತಳ, ನೆಲ, 1ನೇ ಅಂತಸ್ತು ಮತ್ತು 2ನೇ ಅಂತಸ್ತುಗಳನ್ನೊಳಗೊಂಡ ಆಸ್ಪತ್ರೆಯ ವಿನ್ಯಾಸ ಹಾಗೂ ನಕ್ಷೆಗಳೊಂದಿಗೆ ಯೋಜನಾ ವರದಿಯನ್ನು ಸಲ್ಲಿಸಿರುತ್ತಾರೆ. ಹಾಗೂ ಈ ಯೋಜನೆಯ ವೆಚ್ಚ ರೂ.1352.00 ಲಕ್ಷಗಳಾಗುತ್ತವೆ.

ಮೇಲಿನಂತೆ, ಯೋಜನಾ ವರದಿಯನ್ನು ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಿದ ಸಮಯದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತಗಾರರು ಪಾಲಿಕೆಯ ಆರೋಗ್ಯ ವಿಭಾಗದಿಂದ ಆಸ್ಪತ್ರೆಗೆ ಬೇಕಾಗುವ ವೈದ್ಯಕೀಯ ಉಪಕರಣಗಳು ಮತ್ತು ಆಸ್ಪತ್ರೆಯ ಸಿಬ್ಬಂದಿಗಳನ್ನೊಳಗೊಂಡ ಪ್ರಸ್ತಾವನೆಯನ್ನು ಮಂಡಿಸುವಂತೆ ಸೂಚಿಸಿರುತ್ತಾರೆ.

ಮಾನ್ಯ ಆಡಳಿತಗಾರರ ಆದೇಶದ ಮೇರೆಗೆ ಆರೋಗ್ಯ ವಿಭಾಗದಿಂದ ಸದರಿ ಸಾರ್ವಜನಿಕ ಆಸ್ಪತ್ರೆಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ವೈದ್ಯಕೀಯ ಸಿಬ್ಬಂದಿಗಳನ್ನೊಳಗೊಂಡ ಮಾಹಿತಿಯನ್ನು ಕೋರಲಾಗಿ, ಆರೋಗ್ಯ ವಿಭಾಗದಿಂದ 4 ತಿಂಗಳವರೆಗೂ ಈ ಬಗ್ಗೆ ಸರಿಯಾದ ಮಾಹಿತಿ ಲಭ್ಯವಾಗದಿದ್ದುದರಿಂದ ಸಲಹೆಗಾರರು ಸರ್ಕಾರದ ಆರೋಗ್ಯ ಇಲಾಖೆಯಿಂದ ಸಂಬಂಧಿಸಿದ ವಿವರಗಳನ್ನು ಪಡೆದು ಯೋಜನಾ ವರದಿಯಲ್ಲಿ ಅಳವಡಿಸಿ ಸಲ್ಲಿಸಿರುತ್ತಾರೆ.

ಸದರಿ ಯೋಜನಾ ವರದಿಯನ್ನು ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಲಾಗಿ ಯೋಜನೆಯ ಪ್ರಸ್ತಾವನೆಗೆ ಮಾನ್ಯ ಆಡಳಿತಗಾರರ ವಿಷಯದ ಸಂಖ್ಯೆ:241/2009-10, ದಿ:16-01-2010 ರಲ್ಲಿ ಅನುಮೋದನೆಯನ್ನು ನೀಡಿರುತ್ತಾರೆ.

.........................2

ಪ್ರಸ್ತಾವನೆಯನ್ನು ಅನುಮೋದಿಸುವ ಸಂದರ್ಭದಲ್ಲಿ ಸಲಹೆಗಾರರು ಎಲ್ಲಾ ಮಾಹಿತಿಗಳನ್ನೊಳಗೊಂಡ ಯೋಜನಾ ವರದಿಯನ್ನು ಸಲ್ಲಿಸುವಲ್ಲಿ ವಿಫಲರಾಗಿರುವ ಕಾರಣ ಸದರಿ ಸಲಹೆಗಾರರಿಗೆ ಇನ್ನು ಮುಂದೆ ಪಾಲಿಕೆಯಲ್ಲಿ ಯಾವುದೇ ಕೆಲಸ ಕಾರ್ಯಗಳನ್ನು ವಹಿಸದಂತೆ ಆದೇಶಿಸಿರುತ್ತಾರೆ.

ಆದರೆ, ಪಾಲಿಕೆಯ ಆರೋಗ್ಯ ಇಲಾಖೆಯಿಂದ ವಿವರಗಳು ಬರುವುದು ತಡವಾದ್ದರಿಂದ ಸಲಹೆಗಾರರು ಪಾಲಿಕೆಯ ಅಧಿಕಾರಿಗಳ ಸೂಚನೆಯಂತೆ ವೈದ್ಯಕೀಯ ಸಿಬ್ಬಂದಿ ಹಾಗೂ ವೈದ್ಯಕೀಯ ಉಪಕರಣಗಳ ವಿವರಗಳನ್ನು ಒದಗಿಸಿ ಯೋಜನಾ ವರದಿಯನ್ನು ತಯಾರಿಸಿ ಸಲ್ಲಿಸಿದ್ದು, ಈ ಯೋಜನಾ ವರದಿಯನ್ನು ಮಾನ್ಯ ಆಡಳಿತಗಾರರ ಅನುಮೋದನೆಗೆ ಸಲ್ಲಿಸಲಾಗಿತ್ತು.

ಸಲಹೆಗಾರರು ಸಲ್ಲಿಸಿದ ಹಾಗೂ ಆಡಳಿತಗಾರರು ಕೋರಿರುವ ವರದಿಯನ್ನೊಳಗೊಂಡ ಯೋಜನಾ ವರದಿಯನ್ನು ಈಗಾಗಲೇ ಘನ ಸರ್ಕಾರದ ಅನುಮೋದನೆಗಾಗಿ ದಿನಾಂಕ:05-02-2010 ರಲ್ಲಿ ಸಲ್ಲಿಸಲಾಗಿರುತ್ತದೆ.

ವೈದ್ಯಕೀಯ ಸಿಬ್ಬಂದಿಯನ್ನು ನೇಮಕ ಮಾಡುವುದು ಹಾಗೂ ವೈದ್ಯಕೀಯ ಉಪಕರಣಗಳನ್ನು ಖರೀದಿಸುವುದು ಪಾಲಿಕೆಯ ಆಡಳಿತ ಹಾಗೂ ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ವಿಷಯವಾದ್ದರಿಂದ, ಮೂಲ ಅಂದಾಜಿನಲ್ಲಿ ಇವುಗಳ ವೆಚ್ಚವನ್ನು ಅಳವಡಿಸಲಾಗಿರುವುದಿಲ್ಲ.

ವಿಷಯ ಸಂಖ್ಯೆ:241/2009-10 ರಲ್ಲಿನ ಮಾನ್ಯ ಆಡಳಿತಗಾರರ ಆದೇಶದಂತೆ ಸಲಹೆಗಾರರಾದ ಮೆ:ನಂದೀಶ್ ಅಸೋಸಿಯೇಟ್ಸ್ ರವರಿಂದ ವಿವರಣೆಯನ್ನು ಕೋರಿ, ಪಾಲಿಕೆಯ ವತಿಯಿಂದ ದಿನಾಂಕ:15-02-2010 ರಲ್ಲಿ ನೋಟೀಸನ್ನು ಜಾರಿ ಮಾಡಲಾಗಿತ್ತು. ಈ ಸಂಬಂಧ ಸಲಹೆಗಾರರಾದ ಮೆ:ನಂದೀಶ್ ಅಸೋಸಿಯೇಟ್ಸ್‌ರವರು ಪೂಜ್ಯ ಮಹಾಪೌರರು ಹಾಗೂ ಯೋಜನಾ ವಿಭಾಗದ ಮುಖ್ಯ ಅಭಿಯಂತರರಿಗೆ ಪತ್ರವನ್ನು ಸಲ್ಲಿಸಿ, ಈಗಾಗಲೇ ಹಲವಾರು ವರ್ಷಗಳಿಂದ ಪಾಲಿಕೆಯಲ್ಲಿ ಅನೇಕ ಕಾಮಗಾರಿಗಳಿಗೆ ಯೋಜನಾ ವರದಿಯನ್ನು ಅವಶ್ಯಕ ವಿನ್ಯಾಸಗಳನ್ನು ನೀಡಿದ್ದು ಹಾಗೂ ಖಾಸಗಿ ವಲಯದಲ್ಲಿ ಅನೇಕ ಆಸ್ಪತ್ರೆ, ಕ್ರೀಡಾಂಗಣ ಹಾಗೂ ಇತರೆ ಕಟ್ಟಡಗಳ ನಿರ್ಮಾಣಕ್ಕಾಗಿ ಅವಶ್ಯಕ ಯೋಜನಾ ವರದಿಯನ್ನು ಸಲ್ಲಿಸಿದ್ದು ಹಾಗೂ ಮೇಲಿನ ಆಸ್ಪತ್ರೆಯ ಕಾಮಗಾರಿಗೆ ತಾವು ಸಮರ್ಪಕವಾಗಿ ಯೋಜನಾ ವರದಿಯನ್ನು ಸಲ್ಲಿಸಿರುವುದರಿಂದ ತಮ್ಮ ವಿರುದ್ಧ ಯಾವುದೇ ಕ್ರಮವನ್ನು ಜರುಗಿಸದಂತೆ ಪತ್ರವನ್ನು ಸಲ್ಲಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ಪೂಜ್ಯ ಮಹಾಪೌರರು ಕೂಲಂಕುಷವಾಗಿ ಪರಿಶೀಲಿಸಿ, ಮೇಲ್ಕಂಡ ಯೋಜನಾ ವರದಿಯನ್ನು ತಯಾರಿಸಲಾಗಿರುವ ಸಂಬಂಧ ಅವಶ್ಯಕ ಶುಲ್ಕವನ್ನು ಸಲಹೆಗಾರರಿಗೆ ಮಂಜೂರು ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಸದರಿ ವಿಷಯಕ್ಕೆ ಸಂಬಂಧಪಟ್ಟ ಪ್ರಸ್ತಾವನೆಯನ್ನು ಪಾಲಿಕೆಯ ಸಭೆಯ ಮುಂದೆ ಮಂಡಿಸುವಂತೆ ಆದೇಶಿಸಿರುತ್ತಾರೆ.

ಮೆ:ನಂದೀಶ್ ಅಸೋಸಿಯೇಟ್ಸ್ ರವರು ಪಾಲಿಕೆಯ ಹಲವಾರು ಯೋಜನೆಗಳಿಗೆ ಯೋಜನಾ ವರದಿಯನ್ನು ಸಲ್ಲಿಸಿದ್ದು, ಪರಿಣಿತಿ ಹೊಂದಿರುವ ಸಲಹೆಗಾರರಾಗಿರುತ್ತಾರೆ. ಸದರಿ ಉತ್ತರಹಳ್ಳಿ ಆಸ್ಪತ್ರೆಯ ನಿರ್ಮಾಣಕ್ಕಾಗಿ ಪಾಲಿಕೆಯ ಅಧಿಕಾರಿಗಳ ಕೋರಿಕೆಯಂತೆ ಹಾಗೂ ಮಾನ್ಯ ಆಡಳಿತಗಾರರು ನಿರ್ದೇಶಿಸಿದ ರೀತ್ಯಾ ಯೋಜನಾ ವರದಿಯನ್ನು ಸಲ್ಲಿಸಿದ್ದು, ಪಾಲಿಕೆಯ ವತಿಯಿಂದ ಈವರೆಗೆ ನಂದೀಶ್ ಅಸೋಸಿಯೇಟ್ಸ್ ರವರಿಗೆ ಯಾವುದೇ ಮೊತ್ತವನ್ನು ಪಾವತಿಸಿರುವುದಿಲ್ಲ.

ಪೂಜ್ಯ ಮಹಾಪೌರರು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಪಾಲಿಕೆಯ ಸಭೆಯ ಮುಂದೆ ಮಂಡಿಸಲು ಆದೇಶಿಸಿರುವ ಹಿನ್ನಲೆಯಲ್ಲಿ ಟಿಪ್ಪಣಿಯನ್ನು ತಯಾರಿಸಿ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಲಾಗಿರುತ್ತದೆ.

.........................3

1. ದಿನಾಂಕ:16–01–2010 ರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:241/2009–10 ರಲ್ಲಿ ಮೆ:ನಂದೀಶ್ ಅಸೋಸಿಯೇಟ್ಸ್ ರವರಿಗೆ ಪಾಲಿಕೆಯಲ್ಲಿ ಇನ್ನು ಮುಂದೆ ಯಾವುದೇ ಕೆಲಸ ಕಾರ್ಯಗಳನ್ನು ವಹಿಸದಂತೆ ಆದೇಶಿಸಲಾದ ತೀರ್ಮಾನವನ್ನು ಕೈಬಿಡುವ ಬಗ್ಗೆ.
2. ಕೆ.ಟಿ.ಟಿ.ಪಿ ಕಾಯ್ದೆ 28 (ಇ) ರ ಅನ್ವಯ ಸಲಹೆಗಾರರೊಂದಿಗೆ ಒಪ್ಪಂದ ಮಾಡಿಕೊಂಡು ಸಲಹೆಗಾರರಿಗೆ ಹಣವನ್ನು ಪಾವತಿಸಲು ಅನುಮೋದನೆ ಹಾಗೂ ಸದರಿ ಸಲಹೆಗಾರರಿಂದ ಯೋಜನಾ ವರದಿಯನ್ನು ಪಡೆದಿರುವ ಬಗ್ಗೆ ಸ್ಥಿರೀಕರಣಕ್ಕಾಗಿ ಆದೇಶ ಕೋರಿದೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30–12–2010 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:30–12–2010 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:30–12–2010ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)

ಮಹಾಪೌರರು

# ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 196/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಓಕಳಿಪುರಂ ಜಂಕ್ಷನ್‌ನಲ್ಲಿ 8 ಪಥಗಳ ಕಾರಿಡಾರ್ ಸುರಂಗಮಾರ್ಗ ನಿರ್ಮಿಸಲು ಉದ್ದೇಶಿಸಿರುವ ಯೋಜನೆಗೆ ಅವಶ್ಯವಿರುವ ಜಾಗವನ್ನು ರೈಲ್ವೆ ಇಲಾಖೆಯಿಂದ ಪಡೆದು ಇದಕ್ಕೆ ಬದಲಾಗಿ ಬಿನ್ನಿಮಿಲ್ ಪಕ್ಕದಲ್ಲಿರುವ 300x130 ಅಡಿಗಳ ಜಾಗವನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ಶ್ರೀ. ಎಸ್.ಸುರೇಶ್ ಕುಮಾರ್, ಮಾನ್ಯ ನಗರಾಭಿವೃದ್ಧಿ ಸಚಿವರವರ ಸಮ್ಮುಖದಲ್ಲಿ ದಿನಾಂಕ:13-12-2010 ರಂದು ನಡೆದ ಸಭೆಯಲ್ಲಿ ಓಕಳಿಪುರಂ ಜಂಕ್ಷನ್‌ನಲ್ಲಿ ಕೈಗೊಳ್ಳಲಾಗುತ್ತಿರುವ ಅಂಡರ್ ಪಾಸ್ ನಿರ್ಮಾಣ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅಗತ್ಯವಿರುವ ಜಾಗವನ್ನು ರೈಲ್ವೆ ಇಲಾಖೆಯಿಂದ ವಶಪಡಿಸಿಕೊಳ್ಳಬೇಕಾಗಿರುವ ಅಗತ್ಯ ಜಾಗಕ್ಕೆ ಪರ್ಯಾಯವಾಗಿ ಬಿನ್ನಿಮಿಲ್ ಪಕ್ಕದಲ್ಲಿರುವ ಪಾಲಿಕೆ ಜಾಗವನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸುವಂತೆ ನಿರ್ಧರಿಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪಶ್ಚಿಮ ವಲಯ ವ್ಯಾಪ್ತಿಯಲ್ಲಿರುವ ಬಿನ್ನಿಮಿಲ್ ಪಕ್ಕದಲ್ಲಿರುವ CTS No.548 ರಲ್ಲಿರುವ 330x130 ಅಡಿಗಳ ಜಾಗವನ್ನು ಇಂದ್ರಸೇನ್ ಮಹಾದೇವ್ ದಾಸ್ ಎಂಬುವವರಿಗೆ ದಿನಾಂಕ:25-03-1979 ರಿಂದ 20 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದ್ದು, ಈ ಗುತ್ತಿಗೆ ಅವಧಿಯು ದಿನಾಂಕ:24-03-1999 ಕ್ಕೆ ಅಂತ್ಯಗೊಂಡಿರುತ್ತದೆ. ತದನಂತರ ಸದರಿ ಜಾಗವನ್ನು ತೆರವುಗೊಳಿಸುವಂತೆ ಸದರಿ ಗುತ್ತಿಗೆದಾರರಿಗೆ ನಿಯಮಾನುಸಾರ ಪಾಲಿಕೆಯಿಂದ ನೋಟಿಸ್ ಜಾರಿ ಮಾಡಲಾಗಿರುತ್ತದೆ. ತತ್ಸಂಬಂಧ ಸದರಿ ಗುತ್ತಿಗೆದಾರರು ನ್ಯಾಯಾಲಯದ ಮೊರೆ ಹೋಗಿದ್ದು, ನ್ಯಾಯಾಲಯದಲ್ಲಿ ಪಾಲಿಕೆ ಪರವಾಗಿ ಅಂತಿಮ ತೀರ್ಪು ಹೊರಬಂದಿದ್ದು, ಈ ಜಾಗವನ್ನು ತಕ್ಷಣವೇ ಪಾಲಿಕೆ ವಶಕ್ಕೆ ಪಡೆಯಲು ಕಾಮಗಾರಿ ಇಲಾಖೆಗೆ ಸೂಚಿಸಲಾಗಿರುತ್ತದೆ.

ಮಾನ್ಯ ನಗರಾಭಿವೃದ್ಧಿ ಸಚಿವರ ಸೂಚನೆಯಂತೆ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಉದ್ದೇಶಿತ ಯೋಜನೆಯ ಸುಗಮ ನಿರ್ವಹಣೆಗಾಗಿ ಮೇಲೆ ಪ್ರಸ್ತಾಪಿಸಿರುವ, ಬಿನ್ನಿಮಿಲ್ ಪಕ್ಕದಲ್ಲಿರುವ CTS No.548 ರಲ್ಲಿರುವ 330x130 ಅಡಿಗಳ ಜಾಗವನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸುವಂತೆ ಸಮಿತಿಯು ತೀರ್ಮಾನಿಸಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ಮೇಲ್ಕಂಡ ಉಲ್ಲೇಖದ ಸಂಖ್ಯೆಯಡಿಯಲ್ಲಿ ಒಪ್ಪಿಗೆ ನೀಡಿ ಸದರಿ ಪ್ರಸ್ತಾವನೆಗೆ ಪಾಲಿಕೆ ಕೌನ್ಸಿಲ್ ಸಭೆಯ ಮುಂದೆ ಮಂಡಿಸಿ ತೀರ್ಮಾನ ತೆಗೆದುಕೊಳ್ಳಲು ನಿರ್ಣಯಿಸಲಾಗಿದೆ.

ಈ ಹಿನ್ನಲೆಯಲ್ಲಿ, ಮಾನ್ಯ ನಗರಾಭಿವೃದ್ಧಿ ಸಚಿವರ ಸೂಚನೆಯಂತೆ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಬಿನ್ನಿಮಿಲ್ ಪಕ್ಕದಲ್ಲಿರುವ ಪಾಲಿಕೆ ಜಾಗದ CTS No.548 ರಲ್ಲಿರುವ 330x130 ಅಡಿಗಳ ಜಾಗವನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ತೀರ್ಮಾನ ತೆಗೆದುಕೊಂಡು ಈ ಕೆಳಕಂಡ ಅಂಶಗಳಿಗೆ ಪಾಲಿಕೆ ಸಭೆಯ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13-01-2011 ರ ಟಿಪ್ಪಣಿ.

..........................2

1. ಸದರಿ ಯೋಜನೆಗೆ ಸಂಬಂಧಿಸಿದಂತೆ, ಬಿನ್ನಿಮಿಲ್ ಪಕ್ಕದಲ್ಲಿರುವ ಪಾಲಿಕೆ ಜಾಗದ CTS No.548 ರಲ್ಲಿರುವ 330x130 ಅಡಿಗಳ ಜಾಗವನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸುವುದು ಮತ್ತು ಅನುಮೋದನೆ ಕೋರಿ ಘನ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ.
2. ಬೃಹತ್ ಸಾರ್ವಜನಿಕರ ಕಾಮಗಾರಿ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆ:25/2010-11, ದಿನಾಂಕ:28-12-2010 ರಂದು ನಡೆಯಲಾದ ಸಭೆಯ ನಿರ್ಣಯದಂತೆ ಬಿನ್ನಿಮಿಲ್ ಪಕ್ಕದಲ್ಲಿರುವ ಪಾಲಿಕೆ ಜಾಗದ CTS No.548 ರಲ್ಲಿರುವ 330x130 ಅಡಿಗಳ ಜಾಗವನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ಘನ ಸರ್ಕಾರದ ಅನುಮೋದನೆ ನಿರೀಕ್ಷಿಸಿ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರಿಂದ ರೈಲ್ವೆ ಇಲಾಖೆಗೆ ಹಿಂಬರಹ ನೀಡುವ ಬಗ್ಗೆ ಆದೇಶ ಕೋರಿದೆ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

**"ಆಯುಕ್ತರವರ ದಿನಾಂಕ:13-01-2011 ರ ಟಿಪ್ಪಣಿಯನ್ನು ಒಪ್ಪುವುದು".**

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:13-01-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)

ಮಹಾಪೌರರು

# ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 1 (185)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪ್ರೊ॥ ಸಿ.ವಿ.ವಿಶ್ವೇಶ್ವರ ರವರ ಕೋರಿಕೆಯ ಮೇರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:7, ಯಶವಂತಪುರ ಪೋಲಿಸ್ ಠಾಣೆಯಿಂದ (ವೃತ್ತದಿಂದ) ಪ್ರಾರಂಭಗೊಂಡು ಮಲ್ಲೇಶ್ವರಂ 6ನೇ ಅಡ್ಡರಸ್ತೆಯವರೆಗಿನ ಮಲ್ಲೇಶ್ವರಂ 8ನೇ ಮುಖ್ಯರಸ್ತೆಗೆ "ಪದ್ಮಶ್ರೀ ಸಿ.ಕೆ.ವೆಂಕಟರಾಮಯ್ಯ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ದಿನಾಂಕ:13-11-2009 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:404/09-10 ರಲ್ಲಿ "ಪದ್ಮಶ್ರೀ ಸಿ.ಕೆ.ವೆಂಕಟರಾಮಯ್ಯ ರಸ್ತೆ" ಎಂದು ನಾಮಕರಣ ಮಾಡಲು ನಿರ್ಣಯಿಸಿರುತ್ತಾರೆ. ಸದರಿ ನಿರ್ಣಯಕ್ಕೆ ಸರ್ಕಾರದ ಅನುಮೋದನೆ ಕೋರಿ, ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ರವರಿಗೆ ದಿನಾಂಕ:23-11-2009 ರಂದು ಪತ್ರವನ್ನು ಕಳುಹಿಸಿಕೊಡಲಾಗಿತ್ತು.

ಸರ್ಕಾರದ ಪತ್ರ ಸಂಖ್ಯೆ: ನಅಇ 226 ಎಂಎನ್‌ಜಿ 2009, ದಿನಾಂಕ:09-12-2010 ರಲ್ಲಿ ಮಾನ್ಯ ವಿಧಾನಸಭಾ ಸದಸ್ಯರಾದ ಡಾ॥ ಅಶ್ವಥ್ ನಾರಾಯಣ್.ಸಿ.ಎನ್. ರವರು ವಾರ್ಡ್ ಸಂಖ್ಯೆ:7, ಯಶವಂತಪುರ ಪೋಲಿಸ್ ಠಾಣೆಯಿಂದ (ವೃತ್ತದಿಂದ) ಪ್ರಾರಂಭಗೊಂಡು ಮಲ್ಲೇಶ್ವರಂ 6ನೇ ಅಡ್ಡರಸ್ತೆಯವರೆಗಿನ ಮಲ್ಲೇಶ್ವರಂ 8ನೇ ಮುಖ್ಯರಸ್ತೆಗೆ "ಕೆನರಾ ಯೂನಿಯಾನ್ ರಸ್ತೆ" ಎಂದು ನಾಮಕರಣ ಮಾಡಲು ಕೋರಿರುತ್ತಾರೆ ಹಾಗೂ ಮೊ॥ ಎಸ್.ಆರ್.ಲೀಲಾ, ಮಾನ್ಯ ವಿಧಾನ ಪರಿಷತ್ ಸದಸ್ಯರು ಸಹ ಇದೇ ರಸ್ತೆಗೆ "ಪದ್ಮಶ್ರೀ ಸಿ.ಕೆ.ವೆಂಕಟರಾಮಯ್ಯ ರಸ್ತೆ" ಎಂದು ನಾಮಕರಣ ಮಾಡಲು ಕೋರಿರುತ್ತಾರೆ. ಮುಂದುವರೆದಂತೆ, ಈ ವಿಷಯವನ್ನು ಪುನ: ಪರಿಶೀಲಿಸಿ, ವಾರ್ಡ್ ಸಂಖ್ಯೆ:7 ರ ಮಲ್ಲೇಶ್ವರಂ 8ನೇ ಮುಖ್ಯರಸ್ತೆಗೆ ಯಾವ ಹೆಸರನ್ನು ಇಡಬೇಕೆಂಬುದರ ಬಗ್ಗೆ ಪಾಲಿಕೆಯ ಸ್ಪಷ್ಟವಾದ ಅಭಿಪ್ರಾಯವನ್ನು ತಿಳಿಸುವಂತೆ ಸೂಚಿಸಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಳೆಯ ವಾರ್ಡ್ ಸಂಖ್ಯೆ:7, ಯಶವಂತಪುರ ಪೋಲಿಸ್ ಠಾಣೆಯಿಂದ (ವೃತ್ತದಿಂದ) ಪ್ರಾರಂಭಗೊಂಡು ಮಲ್ಲೇಶ್ವರಂ 6ನೇ ಅಡ್ಡರಸ್ತೆಯವರೆಗಿನ ಮಲ್ಲೇಶ್ವರಂ 8ನೇ ಮುಖ್ಯರಸ್ತೆಗೆ "ಕೆನರಾ ಯೂನಿಯನ್ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 31 ಮಂದಿ, ವಿರೋಧವಾಗಿ ಯಾರು ಸಹಿ ಮಾಡದೇ ಇರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976, 293 ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರ ಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು ಕನಿಷ್ಟ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ.

..........................2

ಮೇಲಿನ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:7, ಯಶವಂತಪುರ ಪೋಲಿಸ್ ಠಾಣೆಯಿಂದ (ವೃತ್ತದಿಂದ) ಪ್ರಾರಂಭಗೊಂಡು ಮಲ್ಲೇಶ್ವರಂ 6ನೇ ಅಡ್ಡರಸ್ತೆಯವರೆಗಿನ ಮಲ್ಲೇಶ್ವರಂ 8ನೇ ಮುಖ್ಯರಸ್ತೆಗೆ "ಪದ್ಮಶ್ರೀ ಸಿ.ಕೆ.ವೆಂಕಟರಾಮಯ್ಯ ರಸ್ತೆ" ಅಥವಾ "ಕೆನರಾ ಯೂನಿಯನ್ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:06–01–2011 ರ ಟಿಪ್ಪಣಿ ಹಾಗೂ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ (1) ಮಲ್ಲೇಶ್ವರಂನ 8ನೇ ಮುಖ್ಯರಸ್ತೆಗೆ "ಕೆನರಾ ಯೂನಿಯನ್ ರಸ್ತೆ" ಎಂದು ಹಾಗೂ (2) ಮಲ್ಲೇಶ್ವರಂನ ಮಾರ್ಗೋಸಾ ರಸ್ತೆಗೆ "ಪದ್ಮಶ್ರೀ ಸಿ.ಕೆ.ವೆಂಕಟರಾಮಯ್ಯ ರಸ್ತೆ" ಎಂದು ನಾಮಕರಣ ಮಾಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11–01–2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11–01–2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11–01–2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

## ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

### ವಿಷಯದ ಸಂಖ್ಯೆ: 2 (186)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆಯನ್ನು ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನಾಗಿ ಮರು ನಾಮಕರಣ ಮಾಡಿ ಆದೇಶ ಹೊರಡಿಸಿದ ನಂತರ ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 7 CMC, 1 TMC ಹಾಗೂ 110 ಹಳ್ಳಿಗಳು ಸೇರ್ಪಡೆಯಾಗಿ ಸುಮಾರು 800 ಚ.ಕಿ.ಮೀ ವಿಸ್ತೀರ್ಣವುಳ್ಳ ಪ್ರದೇಶವಾಗಿ ವಿಸ್ತಾರಗೊಂಡಿರುತ್ತದೆ.

ಬೆಂಗಳೂರು ನಗರವು ತೀವ್ರವಾಗಿ ನಗರೀಕರಣಗೊಳ್ಳುತ್ತಿದ್ದು, ನಿರಂತರವಾಗಿ ಹೆಚ್ಚುತ್ತಿರುವ ಜನಸಂಖ್ಯೆಗನುಗುಣವಾಗಿ ನಗರದ ರಸ್ತೆಗಳಲ್ಲಿ ವಾಹನ ಸಂಚಾರವು ಮತ್ತಷ್ಟು ಹೆಚ್ಚಿ, ಇಡೀ ಸಂಚಾರದ ವ್ಯವಸ್ಥೆಯು ಅಸ್ತವ್ಯಸ್ತವಾಗಿರುತ್ತದೆ. ಈಗ ತ್ವರಿತಗತಿಯಲ್ಲಿ ಹೆಚ್ಚುತ್ತಿರುವ ಸಂಚಾರ ವ್ಯವಸ್ಥೆಯಿಂದ ವಾಹನ ಸಂಚಾರಕ್ಕೆ ತೀವ್ರ ತೊಂದರೆಯುಂಟಾಗಿರುತ್ತದೆ. ಈ ನಿಟ್ಟಿನಲ್ಲಿ ಸುಗಮ ಸಂಚಾರಕ್ಕಾಗಿ ಈಗಾಗಲೇ ಸಿಬಿಡಿ ಪ್ರದೇಶದಲ್ಲಿ ಗುರುತಿಸಿರುವ ವಾಹನ ದಟ್ಟಣೆಯಿರುವ ಪ್ರಮುಖ ರಸ್ತೆಗಳನ್ನು ಅಗಲೀಕರಣಗೊಳಿಸುವುದು, ಹೊಸ ವಲಯಗಳಲ್ಲಿನ ರಸ್ತೆಗಳ ಜಾಲವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವುದು ಅತ್ಯವಶ್ಯಕವಾಗಿರುತ್ತದೆ. ಈಗಾಗಲೇ ಹೊಸ 5 ವಲಯಗಳಲ್ಲಿ ರಸ್ತೆಗಳ ಪ್ರಮುಖ ಜಾಲಗಳನ್ನು ಗುರುತಿಸಿದ್ದು, ಅವುಗಳನ್ನು, ಸಂಪೂರ್ಣವಾಗಿ ಸರ್ವೇಕ್ಷಣೆ ಮಾಡಿದ್ದು, ಸಂಚಾರ ಸಾಂದ್ರತೆಗನುಗುಣವಾಗಿ, ಮತ್ತೆ ಮುಂದೆ ನಗರದ ಸಂಚಾರ ದಟ್ಟಣೆ ಹಾಗೂ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು, ಸುಗಮ ಸಂಚಾರಕ್ಕಾಗಿ ಅಗಲೀಕರಣಗೊಳಿಸಿ, ಪುನಶ್ಚೇತನಗೊಳಿಸುವುದು ಅತ್ಯವಶ್ಯಕವಾಗಿರುತ್ತದೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬಿಡಿ ಪ್ರದೇಶದಲ್ಲಿ ಅತೀ ಪ್ರಮುಖ 7 ರಸ್ತೆಗಳನ್ನು ಗುರುತಿಸಿ ಅವುಗಳನ್ನು ಸಿಗ್ನಲ್ ಮುಕ್ತ ಸಂಚಾರಕ್ಕೆ ಅನುವು ಮಾಡಿಕೊಡಲು ಯೋಜನೆ ರೂಪಿಸಿದ್ದು, ಪ್ರಮುಖ ಜಂಕ್ಷನ್‌ಗಳಲ್ಲಿ ಅಂಡರ್‌ಪಾಸ್, flyover ಗಳನ್ನು ನಿರ್ಮಿಸಲು ಯೋಜನೆ ಹಮ್ಮಿಕೊಳ್ಳಲಾಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾಹನ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡು ಸಮಸ್ಯೆಯ ಪರಿಹಾರಕ್ಕಾಗಿ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಲು 2009-12 ರವರೆಗಿನ ಸಮಗ್ರ ಮೂಲಭೂತ ಸೌಕರ್ಯಗಳ ಅನುಷ್ಠಾನಕ್ಕಾಗಿ, ಬಂಡವಾಳ ಹೂಡಿಕೆ ಯೋಜನೆಯ ಅನುಷ್ಠಾನದ ಬಗ್ಗೆ ನೀಲಿನಕ್ಷೆಯನ್ನು ತಯಾರಿಸಲಾಗಿದ್ದು, ಆದ್ಯತೆಯ ಮೇರೆಗೆ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳ ಸಮಗ್ರ ಅಭಿವೃದ್ಧಿಗೆ ಹಾಗೂ ಸಿಗ್ನಲ್ ಮುಕ್ತ ರಸ್ತೆಗಳಿಗೆ ಯೋಜನಾ ವರದಿಗಳನ್ನು ಸಹ ತಯಾರಿಸಲಾಗಿದ್ದು, ಹಾಗೂ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿಶೇಷ ಅನುದಾನದಲ್ಲಿ ಬರುವ ಕಾಮಗಾರಿಗಳನ್ನು ಸಹ ಅನುಷ್ಠಾನಗೊಳಿಸಬೇಕಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ರಸ್ತೆಗಳ ವಾಹನ ಸಾಂದ್ರತೆ ದಟ್ಟಣೆಯ ನಡುವೆ ವಾಹನ ನಿಲುಗಡೆ ಸಮಸ್ಯೆಯೂ ಸಹ ಉಲ್ಬಣಗೊಂಡಿರುತ್ತದೆ. ಇದಕ್ಕಾಗಿ ಈಗಾಗಲೇ ನಗರದಲ್ಲಿ ಸುಮಾರು 25 ಸ್ಥಳಗಳನ್ನು ಗುರುತಿಸಿ ಬಹುಮಹಡಿ ವಾಹನ ನಿಲುಗಡೆ ಮತ್ತು ಸ್ವಯಂ ಚಾಲಿತ ವಾಹನ ನಿಲುಗಡೆಯ ನಿರ್ಮಾಣಕ್ಕಾಗಿ ಪಿಪಿಪಿ ಆಧಾರದಲ್ಲಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಯೋಜಿಸಲಾಗಿರುತ್ತದೆ. ಹಾಗೂ ಪಾದಚಾರಿಗಳ ಸುರಕ್ಷತೆಯ ಹಿತದೃಷ್ಟಿಯಿಂದ 54 ಸ್ಥಳಗಳನ್ನು ಗುರುತಿಸಿ ಪಿಪಿಪಿ ಆಧಾರದಲ್ಲಿ ನೂತನವಾಗಿ Sky walk ಗಳನ್ನು ನಿರ್ಮಾಣ ಮಾಡಲೂ ಸಹ ಯೋಜಿಸಲಾಗಿರುತ್ತದೆ. ಮತ್ತು ನಗರದ ಪ್ರಮುಖ ರಸ್ತೆಗಳಲ್ಲಿ ಡಾಂಬರೀಕರಣವಾಗಿರುವ ರಸ್ತೆಯ ಮೇಲೆ

..............................2

ಕಾಂಕ್ರೀಟ್ ಮೇಲ್ಪದರವನ್ನು (White topping) ಅಳವಡಿಸುವ ನೂತನ ಯೋಜನೆಯನ್ನು ಸಹ ಅನುಷ್ಠಾನಗೊಳಿಸಲು ಯೋಜನೆ ರೂಪಿಸಲಾಗುತ್ತಿದೆ.

ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 4 ಪ್ರಮುಖ ಕಣಿವೆಗಳಾದ ವೃಷಭಾವತಿ, ಕೋರಮಂಗಲ, ಹೆಬ್ಬಾಳ ಹಾಗೂ ಚಲಘಟ್ಟ ನೀರುಗಾಲುವೆಗಳನ್ನು ಪುನರ್ ನವೀಕರಿಸಲು ನರ್ಮ್ ಯೋಜನೆ ಅಡಿಯಲ್ಲಿ ಹಂತ ಹಂತವಾಗಿ ಸಮಗ್ರವಾಗಿ ಅಭಿವೃದ್ಧಿಪಡಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಕರ್ನಾಟಕ ಸರ್ಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಕೆರೆಗಳನ್ನು ಪುನಶ್ಚೇತನಗೊಳಿಸುವುದು ಹಾಗೂ ಸಮಗ್ರವಾಗಿ ಅಭಿವೃದ್ಧಿಗೊಳಿಸಲು ಈಗಾಗಲೇ ನೀಲಿನಕ್ಷೆ ತಯಾರಿಸಿ ಯೋಜನಾ ವರದಿಗಳನ್ನು ಸಹ ತಯಾರಿಸಿದ್ದು, ಅವುಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ ಮತ್ತು ವಿಲೇವಾರಿಯನ್ನು ವೈಜ್ಞಾನಿಕ ತಳಹದಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿದ್ದು, ಈ ಯೋಜನೆಯನ್ನು ಬಿಬಿಎಂಪಿ/ಖಾಸಗಿ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಪಟ್ಟ ಎಲ್ಲಾ ಕಟ್ಟಡಗಳ ನಿರ್ಮಾಣ ಮತ್ತು ಉಸ್ತುವಾರಿ ಹಾಗೂ ವಾಣಿಜ್ಯ ಸಂಕೀರ್ಣ ಪುನರ್ ನವೀಕರಣ ಹಾಗೂ ನಿರ್ಮಾಣ, ಮಾರುಕಟ್ಟೆಗಳ ನಿರ್ಮಾಣ ನಿರ್ವಹಣೆ, ಆಟದ ಮೈದಾನಗಳ ನಿರ್ಮಾಣ ನಿರ್ವಹಣೆ, ಈ ಎಲ್ಲಾ ಯೋಜನೆಗಳನ್ನು ಸಮಗ್ರವಾಗಿ ಅನುಷ್ಠಾನಗೊಳಿಸಬೇಕಾಗಿರುತ್ತದೆ.

ಈ ಎಲ್ಲಾ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಸಂದರ್ಭದಲ್ಲಿ ಯೋಜನಾ ವರದಿಗಳ ಪರಿಶೀಲನೆ, ಯೋಜನೆಗಳನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಗುಣಮಟ್ಟ ಕಾಪಾಡುವ ಬಗ್ಗೆ, ತಾಂತ್ರಿಕ ಹಾಗೂ ಜಾಗೃತಿ ಕೋಶವನ್ನು ಸಹ ಬಲಪಡಿಸಬೇಕಾಗಿರುತ್ತದೆ.

ಈ ಮೇಲ್ಕಂಡ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಕೇಂದ್ರ ಕಛೇರಿಯಲ್ಲಿಯೇ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲು ನುರಿತ ಅನುಭವಸ್ಥ ಹಾಗೂ ಸಮರ್ಪಣಾ ಮನೋಭಾವ ಹೊಂದಿರುವಂತಹ ಅಭಿಯಂತರರುಗಳ ತಂಡವನ್ನು ರಚಿಸುವುದು ಅತ್ಯವಶ್ಯಕವಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಮೇಲ್ಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲು 4 ಪ್ರತ್ಯೇಕ ಮುಖ್ಯ ಅಭಿಯಂತರರುಗಳ ಮುಖಂಡತ್ವದಲ್ಲಿ ಹಾಗೂ ವಿಶೇಷ ಆಯುಕ್ತರು (ಯೋಜನೆ) ರವರ ಅಧೀನದಲ್ಲಿ ಒಂದು ಯೋಜನಾ ಅನುಷ್ಠಾನ ಘಟಕವನ್ನು (Project Implementation Unit) ವಿಶೇಷವಾಗಿ ರೂಪಿಸಿ, ಬೃಹತ್ ಕಾಮಗಾರಿಗಳ ಸ್ಥಾಯಿ ಸಮಿತಿಯ ಅಧೀನದಲ್ಲಿ ಕಾರ್ಯನಿರ್ವಹಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸುವಂತೆ ಯೋಜಿಸಲಾಗಿದೆ. ಆದುದರಿಂದ, ಸದರಿ ಯೋಜನೆಗಳ ಅನುಷ್ಠಾನಕ್ಕೆ ಈ ಕೆಳಕಂಡಂತೆ 4 ಪ್ರತ್ಯೇಕ ಮುಖ್ಯ ಅಭಿಯಂತರರುಗಳಿಗೆ ಯೋಜನೆಗಳನ್ನು ಹಂಚಿಕೆ ಮಾಡಲು ಉದ್ದೇಶಿಸಲಾಗಿರುತ್ತದೆ.

(1) ಮುಖ್ಯ ಅಭಿಯಂತರರು (ಬೃಹತ್ ರಸ್ತೆ ಹಾಗೂ ಮೂಲಭೂತ ಸೌಕರ್ಯಗಳು)
(2) ಮುಖ್ಯ ಅಭಿಯಂತರರು (ಬೃಹತ್ ನೀರುಗಾಲುವೆ)
(3) ಮುಖ್ಯ ಅಭಿಯಂತರರು (ಪರಿಸರ ಮತ್ತು ಕೆರೆಗಳು)
(4) ಮುಖ್ಯ ಅಭಿಯಂತರರು (ಗುಣ ನಿಯಂತ್ರಣ ಹಾಗೂ ಪಿಪಿಇಡಿ)

............................3

ಈ ಮೇಲ್ಕಂಡಂತೆ ಯೋಜನೆಗಳನ್ನು ಶಿಸ್ತು ಬದ್ಧವಾಗಿ ಹಾಗೂ ಗುಣಾತ್ಮಕವಾಗಿ ನಿಗಧಿತ ಅವಧಿಯೊಳಗೆ ಅನುಷ್ಠಾನಗೊಳಿಸುವ ಮೂಲ ಉದ್ದೇಶದಿಂದ ಹಾಲಿ ಕೇಂದ್ರ ಕಛೇರಿಯಲ್ಲಿರುವ ಯೋಜನಾ ವಲಯಗಳನ್ನು ಪುನರ್ ವ್ಯವಸ್ಥೆ (Re-organise) ಮಾಡಲು ಹಾಗೂ ವಲಯ ಮಟ್ಟದಲ್ಲಿರುವ ಕಾರ್ಯಪಾಲಕ ಅಭಿಯಂತರರ ಯೋಜನೆ ವಿಭಾಗಗಳನ್ನು ಕೇಂದ್ರ ಕಛೇರಿ ಯೋಜನಾ ವಲಯದೊಂದಿಗೆ ವಿಲೀನಗೊಳಿಸಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಮೇಲಿನ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತರಲು ಮತ್ತು ಹಾಲಿ ಇರುವ ಕೇಂದ್ರ ಯೋಜನಾ ವಲಯಗಳನ್ನು Re – organize ಮಾಡಲು ಕೋರಿ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24–12–2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:12–01–2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:12–01–2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಮುಖ್ಯ ಅಭಿಯಂತರರು (ಪರಿಸರ ಮತ್ತು ಕೆರೆಗಳು) ರವರು ತೋಟಗಾರಿಕೆ ಸ್ಥಾಯಿ ಸಮಿತಿಯ ಅಧೀನದಲ್ಲಿ ಕಾರ್ಯನಿರ್ವಹಿಸುವುದೆಂಬ ಮಾರ್ಪಾಡಿನೊಂದಿಗೆ ಸಮಿತಿಯ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:12–01–2011 ರ ನಿರ್ಣಯವನ್ನು ಭಾಗಶ: ಒಪ್ಪುತ್ತಾ, ಮುಖ್ಯ ಅಭಿಯಂತರರು (ಪರಿಸರ ಮತ್ತು ಕೆರೆಗಳು) ರವರು ತೋಟಗಾರಿಕೆ ಸ್ಥಾಯಿ ಸಮಿತಿಯ ಅಧೀನದಲ್ಲಿ ಕಾರ್ಯನಿರ್ವಹಿಸುವುದೆಂಬ ಮಾರ್ಪಾಡಿನೊಂದಿಗೆ ಸಮಿತಿಯ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ : 4 (188)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಪಾಲಿಕೆಯ ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡದ 23 ಮತ್ತು 24 ನೇ ಮಹಡಿಯನ್ನು ಬೋಸ್ ಇನ್ಫ್ರಾ ಎನರ್ಜಿ ಪ್ರೈವೇಟ್ ಲಿಮಿಟೆಡ್, ನಂ.135/ಎ35, 9ನೇ ಮುಖ್ಯ ರಸ್ತೆ, ಆರ್.ಎಂ.ವಿ. ಎಕ್ಸ್‌ಟೆನ್‌ಷನ್, ಬೆಂಗಳೂರು ರವರು ಮನವಿ ಸಲ್ಲಿಸಿ ಕಛೇರಿ ಉಪಯೋಗಕ್ಕಾಗಿ ನೀಡಬೇಕೆಂದು ಕೋರಿರುತ್ತಾರೆ.

ಈ ಮೇರೆಗೆ ಪರಿಶೀಲಿಸಲಾಗಿ, ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡದ 24ನೇ ಮಹಡಿಯಲ್ಲಿರುವ 3300 ಚದರ ಅಡಿ ಜಾಗವನ್ನು ಮೆ.ಟಾಪ್ ಕಾಫಿ ಇನ್‌ವೆಸ್ಟ್‌ಮೆಂಟ್‌ರವರಿಗೆ ನೀಡಲಾಗಿತ್ತು. ತದನಂತರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ:11(51), ದಿನಾಂಕ:26-10-2004 ರ ನಿರ್ಣಯದಲ್ಲಿ ಸದರಿ ಮಳಿಗೆಯನ್ನು ಪಾಲಿಕೆಗೆ ವಾಪಸ್ಸು ಪಡೆದುಕೊಂಡು ಟೆಂಡರ್ ಮೂಲಕ ಹಂಚಿಕೆ ಮಾಡಬೇಕೆಂದು ತೀರ್ಮಾನಿಸಲಾದ ಹಿನ್ನಲೆಯಲ್ಲಿ, ಮಳಿಗೆಯನ್ನು ಪಾಲಿಕೆಯ ವಶಕ್ಕೆ ತೆಗೆದುಕೊಳ್ಳಲಾಗಿದೆ. ಇದೇ ರೀತಿ ಸದರಿ ಕಟ್ಟಡದ 23ನೇ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ರೈಲ್ವೇ ಇಲಾಖೆಯ ಕಛೇರಿಯನ್ನು ಅವರ ಸ್ವಂತ ಕೋರಿಕೆಯ ಮೇರೆಗೆ 8ನೇ ಮಹಡಿಗೆ ಸ್ಥಳಾಂತರಿಸಲಾಗಿದೆ.

ಮುಂದುವರೆದು, ಸದರಿ ಕಟ್ಟಡದಲ್ಲಿ 23 ಮತ್ತು 24ನೇ ಮಹಡಿಗಳು ಖಾಲಿ ಇದ್ದು, ಇವುಗಳ ಒಟ್ಟು ವಿಸ್ತೀರ್ಣ 3300x2=6600 ಚದರ ಅಡಿ ಇರುತ್ತದೆ. ಈ ಕಟ್ಟಡಕ್ಕೆ ಚದರ ಒಂದಕ್ಕೆ ಮಾನ್ಯ ಆಡಳಿತಗಾರರು ನೆಲ ಮಹಡಿಗೆ ರೂ.30.00 ಗಳು, ಒಂದನೇ ಮಹಡಿಗೆ ರೂ.20.00 ಗಳು ಮತ್ತು ಮೇಲಿನ ಸರ್ಕಾರಿ ಮಳಿಗೆಗೆ ರೂ.15.00 ಗಳನ್ನು ನಿಗಧಿಪಡಿಸಿರುತ್ತಾರೆ. ಆದರೆ, ಈ ಹಿಂದೆ ಟೆಂಡರ್ ಕಂ ಹರಾಜಿನಲ್ಲಿ 19ನೇ ಮಹಡಿಯನ್ನು ಹಂಚಿಕೆ ಮಾಡಿದ್ದು, ಸದರಿ ಅಂತಸ್ತಿಗೆ ಚದರ ಅಡಿಗೆ ರೂ.27.27 ರಂತೆ ಟೆಂಡರ್‌ನಲ್ಲಿ ದರ ಬಂದಿರುತ್ತದೆ. ಆದರೆ, 23 ಮತ್ತು 24 ಮಹಡಿಯನ್ನು ಹಂಚಿಕೆ ಮಾಡಬೇಕಾದಲ್ಲಿ ಹಾಲಿ ಇರುವ ವ್ಯವಸ್ಥೆಯಂತೆ ಟೆಂಡರ್ ಕಂ ಹರಾಜಿನ ಮೂಲಕ ಹಂಚಿಕೆ ಮಾಡಬೇಕಾಗಿರುತ್ತದೆ.

ಆದ್ದರಿಂದ, ನೇತಾಜಿ ಸುಭಾಷ್ ಚಂದ್ರ ಬೋಸ್ ಕಟ್ಟಡದ 23 ಮತ್ತು 24 ಮಹಡಿಯನ್ನು ಟೆಂಡರ್ ಕಂ ಹರಾಜಿನ ಮೂಲಕ ಹಂಚಿಕೆ ಮಾಡುವ ಬಗ್ಗೆ ಅಥವಾ ಬೋಸ್ ಇನ್ಫ್ರಾ ಎನರ್ಜಿ ಪ್ರೈ.ಲಿ. ನಂ.135/ಎ35, 9ನೇ ಮುಖ್ಯ ರಸ್ತೆ, ಆರ್.ಎಂ.ವಿ. ಎಕ್ಸ್‌ಟೆನ್‌ಷನ್ ಬೆಂಗಳೂರು ರವರಿಗೆ ದರ ನಿಗಧಿಪಡಿಸಿ ಹಂಚಿಕೆ ಮಾಡುವ ಬಗ್ಗೆ ತೀರ್ಮಾನಕ್ಕಾಗಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26-07-2010 ರ ಟಿಪ್ಪಣಿ ಹಾಗೂ ಪೂಜ್ಯ ಮಹಾಪೌರರು ದಿನಾಂಕ:25-10-2010 ರಂದು ನೀಡಿರುವ ಟಿಪ್ಪಣಿಯಂತೆ ನೇತಾಜಿ ಸುಭಾಷ್‌ಚಂದ್ರ ಬೋಸ್ ಕಟ್ಟಡದ 23 ಮತ್ತು 24ನೇ ಮಹಡಿಯನ್ನು ಗಣೇಶ್ ಕ್ರಿಯೇಷನ್ಸ್ ಸಂಸ್ಥೆಯ ಮಾಲೀಕರಾದ ಶ್ರೀ. ಕೆ.ಗಣೇಶ್ ರವರಿಗೆ ಆಹಾರ ಮಳಿಗೆ Food court ಸ್ಥಾಪಿಸಲು ಚದರ ಅಡಿ ಒಂದಕ್ಕೆ ಮಾಸಿಕ ರೂ.30/- ರಂತೆ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವ ಮಾರ್ಪಡಿನೊಂದಿಗೆ ಆಯುಕ್ತರ ದಿನಾಂಕ:26-07-2010 ರ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-10-2010 ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ಮಾರುಕಟ್ಟೆ ಸ್ಥಾಯಿ ಸಮಿತಿಯ ದಿನಾಂಕ:07-01-2011 ರ ನಿರ್ಣಯ.

.........................2

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-10-2010 ರ ನಿರ್ಣಯ ಹಾಗೂ ಮಾರುಕಟ್ಟೆ ಸ್ಥಾಯಿ ಸಮಿತಿಯ ದಿನಾಂಕ:07-01-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-10-2010 ರ ನಿರ್ಣಯ ಹಾಗೂ ಮಾರುಕಟ್ಟೆ ಸ್ಥಾಯಿ ಸಮಿತಿಯ ದಿನಾಂಕ:07-01-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 3 (187)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:118 ರ ಹೆಚ್.ಸಿದ್ದಯ್ಯ ರಸ್ತೆಯಲ್ಲಿನ ನಗರ ಪಾಲಿಕೆಯ 113+103/2*54+53/2 ಚ.ಅಡಿಗಳ ನಿವೇಶನವನ್ನು ಮೆ॥ ಲಯನ್ಸ್ ಕ್ಲಬ್ ಆಫ್ ಬೆಂಗಳೂರು ವೆಸ್ಟ್‌ರವರಗೆ 35 ವರ್ಷಗಳ ಅವಧಿಗೆ ಮಾಸಿಕ ಗುತ್ತಿಗೆ ಮೊತ್ತ ರೂ.50.00 ರಂತೆ ಗುತ್ತಿಗೆ ಆಧಾರದ ಮೇಲೆ ನಗರ ಪಾಲಿಕೆಯ ಮಾನ್ಯ ಆಡಳಿತಗಾರರ ದಿನಾಂಕ:09-06-1975 ರ ನಿರ್ಣಯದಂತೆ ಮೂರು ವರ್ಷಗಳ ಅವಧಿಯ ಒಳಗಾಗಿ ಸದರಿ ಸ್ಥಳದಲ್ಲಿ ಸಮುದಾಯ ಭವನವನ್ನು ಕಟ್ಟುವ ನಿಬಂಧನೆ ಮೇರೆಗೆ, ನೀಡಲು ತೀರ್ಮಾನಿಸಲಾಗಿದೆ. ಆಡಳಿತಗಾರರ ನಡವಳಿಕೆಗೆ ಸರ್ಕಾರದ ಆದೇಶ ಸಂಖ್ಯೆ:ಹೆಚ್.ಎಂ.ಎ/259/ಎಂ.ಎನ್.ಜಿ.75, ದಿನಾಂಕ:10-12-1975 ರ ಆದೇಶದಲ್ಲಿ ಸರ್ಕಾರವು ಅನುಮೋದನೆ ನೀಡಿದ್ದು, ಈ ಸಂಬಂಧವಾಗಿ ದಿನಾಂಕ:17-01-1976 ರಂದು ಗುತ್ತಿಗೆ ಕರಾರು ಕತ್ರ ನೊಂದಾಯಿಸಿ ಕೊಡಲಾಗಿರುತ್ತದೆ.

ಆದರೆ, ಗುತ್ತಿಗೆದಾರರ ಸಂಸ್ಥೆಯವರು ಸ್ಥಳದಲ್ಲಿ ಸಮುದಾಯ ಭವನವನ್ನು ಕಟ್ಟದೇ ಗುತ್ತಿಗೆ ಕರಾರನ್ನು ಉಲ್ಲಂಘಿಸಿ, ಆ ಸ್ಥಳದಲ್ಲಿ ಕಣ್ಣಿನ ಆಸ್ಪತ್ರೆ ಮತ್ತು ಕನ್ನಡಕಗಳ ಮಾರಾಟ ಮಳಿಗೆಯನ್ನು ನಿರ್ಮಿಸಿದ್ದು, ಈ ರೀತಿ ಗುತ್ತಿಗೆ ಕರಾರು ಉಲ್ಲಂಘಿಸಲಾಗಿರುವ ಹಿನ್ನಲೆಯಲ್ಲಿ ಗುತ್ತಿಗೆಯನ್ನು ಏತಕ್ಕೆ ರದ್ದು ಪಡಿಸಬಾರದೆಂದು ಕೆ.ಪಿ.ಪಿ. ಕಾಯ್ದೆ ಅನ್ವಯ ದಿನಾಂಕ:11-08-1993 ರಂದು ಗುತ್ತಿಗೆ ರದ್ದತಿ ನೋಟೀಸನ್ನು ಹೊರಡಿಸಲಾಗಿದೆ.

ಅದಕ್ಕೆ, ಉತ್ತರವಾಗಿ ಗುತ್ತಿಗೆದಾರರ ಸಂಸ್ಥೆಯವರು ತಾವು ಸ್ಥಳದಲ್ಲಿ ಸುಸಜ್ಜಿತವಾದ ಕಣ್ಣಿನ ಆಸ್ಪತ್ರೆ ನಡೆಸುತ್ತಿರುವುದಾಗಿಯೂ ಹಾಗೂ ಯಾವುದೇ ಲಾಭದ ಉದ್ಯಮವನ್ನು ನಡೆಸುತ್ತಿಲ್ಲವೆಂದು ತಿಳಿಸಿ, ಪ್ರಸ್ತುತ ಸ್ವತ್ತಿಗೆ ಸ್ಥಳದಲ್ಲಿ ಚ.ಅ.1 ಕ್ಕೆ ರೂ.2000.00 ಗಳ ಮಾರುಕಟ್ಟೆ ದರವಿದ್ದು, ಆದರೆ, ರಿಯಾಯಿತಿ ದರದಲ್ಲಿ ಸದರಿ ಸ್ವತ್ತನ್ನು ಲಯನ್ಸ್ ಸಂಸ್ಥೆಗೆ ವಿಲೇವಾರಿ ಮಾಡಲು ಕೋರಿದ್ದರ ಮೇರೆಗೆ, ಸ್ಥಾಯಿ ಸಮಿತಿಗಳು ಹಾಗೂ ನಗರಪಾಲಿಕೆ ಸಭೆ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ದಿನಾಂಕ:17-12-1994 ರಲ್ಲಿನ ವಿಷಯದ ಸಂಖ್ಯೆ:258 ರಲ್ಲಿ ಪ್ರಸ್ತುತ ಸ್ವತ್ತನ್ನು ಗುತ್ತಿಗೆ ಆಧಾರದ ಮೇಲೆ ಮುಂದುವರೆಸಲು ಹಾಗೂ ಗುತ್ತಿಗೆ ಅವಧಿಯನ್ನು ಮೊದಲು ನೀಡಲಾಗಿದ್ದ 35 ವರ್ಷಗಳಿಂದ 40 ವರ್ಷಗಳಿಗೆ ವಿಸ್ತರಿಸಲು ನಿರ್ಣಯ ಕೈಗೊಂಡಿರುತ್ತದೆ. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ದಿನಾಂಕ:21-04-1995 ರಂದು ವಿಷಯದ ಸಂಖ್ಯೆ:658 ರಲ್ಲಿ ಆಯುಕ್ತರವರ ಪ್ರಸ್ತಾವನೆಯನ್ನು ಒಪ್ಪಿದೆ ಎಂದು ನಿರ್ಣಯ ಕೈಗೊಂಡಿದೆ. ಅನಂತರ, ಅಂದಿನ ನಗರ ಪಾಲಿಕೆಯ ಆಡಳಿತಗಾರರ ಸಭೆ ದಿನಾಂಕ:17-10-1995 ರ ವಿಷಯದ ಸಂಖ್ಯೆ:227 ರಲ್ಲಿ ಆಯುಕ್ತರವರ ಟಿಪ್ಪಣಿಯನ್ನು ಒಪ್ಪಿದೆ ಎಂದು ನಿರ್ಣಯಿಸಲಾಗಿರುತ್ತದೆ.

ಆಡಳಿತಗಾರರ ನಿರ್ಣಯ ದಿನಾಂಕ:17-10-1995 ರ ವಿಷಯದ ಸಂಖ್ಯೆ:227 ರ ನಿರ್ಣಯಕ್ಕೆ ಸರ್ಕಾರದ ಅನುಮೋದನೆಯನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸುಧೀರ್ಘ ಪತ್ರ ವ್ಯವಹಾರದ ನಂತರ ದಿನಾಂಕ:10-04-2003 ರ ಪತ್ರದ ಸಂಖ್ಯೆ:ನ.ಅ.ಇ176/ಎಂ.ಎನ್.ಜಿ/2000 ರ ಪತ್ರದಲ್ಲಿ ವಿಷಯವು 7 ವರ್ಷಗಳಷ್ಟು ಹಿಂದಿನ ಆಡಳಿತಗಾರರ ನಿರ್ಣಯಕ್ಕೆ ಒಳಪಟ್ಟಿದೆಯಾದ್ದರಿಂದ ಪ್ರಸಕ್ತ ನಗರ ಪಾಲಿಕೆಯ ಅಭಿಪ್ರಾಯವನ್ನು ಪಡೆದು ಸಲ್ಲಿಸಲು ನಿರ್ದೇಶಿಸಿದೆ.

..........................2

ಅಂದಿನ ಪ್ರಸಕ್ತ ಮಾರುಕಟ್ಟೆ ದರವು ಚ.ಅ.1ಕ್ಕೆ ವಾಣಿಜ್ಯಕ್ಕೆ ರೂ.2500-00 ಗಳಾಗಿದ್ದು, ಸ್ವತ್ತಿನ ಮೌಲ್ಯ 5778*2500=ರೂ.1,44,45,000-00 ಗಳಾಗುತ್ತದೆ. ಸರ್ಕಾರದ ಮಾರ್ಗಸೂಚಿಯಂತೆ ಶೇ.20 ರಷ್ಟು ಹೆಚ್ಚಿಸಿದಾಗ ಒಟ್ಟು ಮೌಲ್ಯ ರೂ.1,73,34,000-00 ಗಳಾಗುತ್ತದೆ.

ಸರ್ಕಾರದ ನಿರ್ದೇಶನದಂತೆ ಸ್ವತ್ತನ್ನು ಪ್ರಸಕ್ತ ಮಾರುಕಟ್ಟೆ ದರದ ಮೇಲೆ ವಿಲೇವಾರಿ ಮಾಡಲು ಅಭಿಪ್ರಾಯಿಸಿ, ಸ್ಥಾಯಿ ಸಮಿತಿಗಳು ಹಾಗೂ ಪಾಲಿಕೆ ಸಭೆ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ದಿನಾಂಕ:28-07-2003 ರಂದು ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ದಿನಾಂಕ:03-09-03 ರಂದು ನಗರ ಪಾಲಿಕೆಯು ದಿನಾಂಕ:22-09-04 ರಂದು ಪ್ರಸ್ತಾವನೆಯನ್ನು ಒಪ್ಪಿರುತ್ತದೆ. ನಗರ ಪಾಲಿಕೆಯು ಪ್ರಸಕ್ತ ಮಾರುಕಟ್ಟೆ ದರದಲ್ಲಿ ವಿಲೇವಾರಿ ಮಾಡುವಲ್ಲಿ ಅರ್ಜಿದಾರರ ಸಂಸ್ಥೆಯು ವರಮಾನ ತೆರಿಗೆಯಡಿಯಲ್ಲಿ ನೊಂದಾಯಿತ ಸಂಸ್ಥೆ ಆಗಿರುವ ಕಾರಣ ಸರ್ಕಾರದ ಮಾರ್ಗಸೂಚಿಯಂತೆ ಶೇ.50 ರಂತೆ ರಿಯಾಯಿತಿ ಮಾಡಲು ಹಾಗೂ ಕ್ರಯದ ಮೊಬಲಗನ್ನು 10 ವರ್ಷಗಳ ವಾರ್ಷಿಕ ಸಮಕಂತುಗಳಲ್ಲಿ ವಸೂಲು ಮಾಡಲು ನಿರ್ಣಯಿಸಿದೆ.

ಸರ್ಕಾರದ ಮಾರ್ಗಸೂಚಿ ಆದೇಶ ಸಂಖ್ಯೆ:ನ.ಅ.ಇ/120/ಎ.ಎಂ.ಟಿ/02, ದಿನಾಂಕ:02-06-2003 ರ ಆದೇಶದಲ್ಲಿ ಲಯನ್ಸ್ ಕ್ಲಬ್‌ಗಳು ನಡೆಸಲಾಗುತ್ತಿರುವ ಚಟುವಟಿಕೆಗಳಿಗೆ ಶೇ.50 ರಷ್ಟು ಮಾರುಕಟ್ಟೆ ದರಕ್ಕೆ ನಗರ ಪಾಲಿಕೆ ಸ್ವತ್ತುಗಳನ್ನು ವಿಲೇವಾರಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಸದರಿ ಸ್ವತ್ತು ಹೆಚ್.ಸಿದ್ದಯ್ಯ ರಸ್ತೆ (ಮಾವಳ್ಳಿ ಟ್ಯಾಂಕ್‌ಬಂಡ್ ರಸ್ತೆ) ಯಲ್ಲಿರುವ ಮೂಲೆ ಸ್ವತ್ತಾಗಿರುತ್ತದೆ. 2004 ನೇ ಸಾಲಿನ ಮಾರ್ಗಸೂಚಿಗಳನ್ವಯ ಮಾರುಕಟ್ಟೆ ದರದ ಸ್ಪಷ್ಟೀಕರಣವನ್ನು ಜಿಲ್ಲಾ ನೊಂದಾಣಾಧಿಕಾರಿಗಳಿಗೆ ಪತ್ರ ಬರೆದು ಕೋರಲಾಗಿ, ಸದರಿಯವರು ಪ್ರಸ್ತುತ ಸ್ವತ್ತಿಗೆ ಚ.ಅ.1 ಕ್ಕೆ ರೂ.1000-00 ಗಳ ಮಾರುಕಟ್ಟೆ ದರವೆಂದು ದೃಢೀಕರಿಸಿರುತ್ತಾರೆ. ಸದರಿ ನಿವೇಶನವು ಮೂಲೆ ನಿವೇಶನವಾಗಿರುವುದರಿಂದ ಶೇ.10 ರಂತೆ ಮಾರುಕಟ್ಟೆ ದರಕ್ಕೆ ಹೆಚ್ಚುವರಿ ಸೇರಿಸಲಾಗಿ ರೂ.1100-00 ಗಳಾಗುತ್ತದೆ. ಸರ್ಕಾರದ ಮಾರ್ಗಸೂಚಿಯ ಮೇರೆಗೆ, ಶೇ.40 ರಷ್ಟು ಹೆಚ್ಚುವರಿ ವಸತಿಯೇತರ ಬಾಬ್ತು ಪರಿಗಣಿಸಲಾಗಿ ಸ್ವತ್ತಿನ ಬೆಲೆ ಚ.ಅ.1 ಕ್ಕೆ ರೂ.1450.00 ಗಳಾಗುತ್ತದೆ. ಅಧಿಕ ಮಾರುಕಟ್ಟೆ ಬೆಲೆ ಬಾಬ್ತು ಶೇ.20 ರಷ್ಟು ಸೇರಿಸಲಾಗಿ ಚ.ಅ.1 ಕ್ಕೆ ರೂ.1848.00 ಗಳಾಗಿರುತ್ತದೆ. ಸ್ಥಳದಲ್ಲಿ ಸ್ವತ್ತಿನ ಅಳತೆ ವಿಸ್ತೀರ್ಣ 5989 ಅಡಿಗಳಿರುವ ಕಾರಣ ಸ್ವತ್ತಿನ ಮಾರುಕಟ್ಟೆ ಬೆಲೆ ರೂ.1,10,67,672.00 ಗಳಾಗುತ್ತದೆ. ಶೇ.50 ರಷ್ಟು ದರಕ್ಕೆ ರಿಯಾಯಿತಿ ಮಾಡಿದ್ದಲ್ಲಿ, ಸ್ವತ್ತಿನ ಬೆಲೆ ರೂ.55,33,836.00 ಗಳಾಗುತ್ತದೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗೆ ಮಂಡಿಸಿದ್ದು, ಈ ಬಗ್ಗೆ ಸರ್ಕಾರದ ದಿನಾಂಕ:17-03-2007 ರ ಪತ್ರದಲ್ಲಿ ಸದರಿ ಸ್ವತ್ತನ್ನು ಕ್ರಯಕ್ಕೆ ನೀಡಿದರೆ, ಸ್ವತ್ತನ್ನು ಪಡೆದ ಕೂಡಲೇ ಮನವಿದಾರರ ಸಂಸ್ಥೆಯು ತನ್ನ ಧ್ಯೇಯವನ್ನು ಬದಿಗೊತ್ತಿ ಸ್ವಾರ್ಥ ಉದ್ದೇಶಗಳಿಗೆ ಸದರಿ ಸ್ವತ್ತನ್ನು ಬಳಸಿಕೊಳ್ಳಬಹುದು. ಆದುದರಿಂದ, ಸ್ವತ್ತನ್ನು ಕ್ರಯಕ್ಕೆ ನೀಡುವ ಬದಲು ಮತ್ತೇ 30 ವರ್ಷಗಳಿಗೆ ಅದೇ ದರದಲ್ಲಿ ಗುತ್ತಿಗೆಯನ್ನು ನವೀಕರಿಸಬಹುದಾಗಿದ್ದು, ಕ್ರಯಕ್ಕೆ ನೀಡುವ ಪ್ರಸ್ತಾವನೆಯನ್ನು ಪರಿಗಣಿಸದಿರಲು ಸರ್ಕಾರವು ಆಲೋಚಿಸುತ್ತಿದೆ. ಸದರಿ ನಿರ್ಣಯದ ಬಗ್ಗೆ ಅಭಿಪ್ರಾಯವನ್ನು ತಿಳಿಸುವಂತೆ ನಿರ್ದೇಶಿಸಲಾಗಿರುತ್ತದೆ.

ಈ ಸ್ವತ್ತಿನ ಗುತ್ತಿಗೆ ಅವಧಿಯು ದಿನಾಂಕ:16-01-2011 ಕ್ಕೆ ಮುಕ್ತಾಯಗೊಳ್ಳುತ್ತದೆ. ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ಚದರ ಅಡಿ ಒಂದಕ್ಕೆ ವಸತಿಯೇತರ ದರ ರೂ.4900.00 ಗಳಿದ್ದು, ಸ್ವತ್ತಿನ ವಿಸ್ತೀರ್ಣ 5778 ಚದರಡಿಗಳಿರುತ್ತದೆ. ಅದರಂತೆ, ಲೆಕ್ಕಾಚಾರ ಮಾಡಿದಾಗ 5778*4900=ರೂ.2,83,12,200.00 ಗಳಾಗುತ್ತದೆ. ಅದರಲ್ಲಿ ಶೇ.10 ರಂತೆ ಪರಿಗಣಿಸಲಾಗಿ ವಾರ್ಷಿಕ

.........................3

ಗುತ್ತಿಗೆ ಮೊತ್ತ ರೂ.28,31,220.00 ಗಳಾಗುತ್ತದೆ. ಮಾಸಿಕ ಗುತ್ತಿಗೆ ಮೊತ್ತ ರೂ.2,35,935.00 ಗಳಾಗುತ್ತದೆ. ಸರ್ಕಾರದ ಮಾರ್ಗಸೂಚಿ ಆದೇಶ ಸಂಖ್ಯೆ:ನ.ಅ.ಇ/120/ಟಿ.ಎಂ.ಟಿ.2002, ದಿನಾಂಕ:02-06-2003 ರಲ್ಲಿ ಲಯನ್ಸ್ ಕ್ಲಬ್ ಸಂಸ್ಥೆಗಳಿಗೆ ನೀಡುವ ಜಾಗದ ಗುತ್ತಿಗೆ ಹಣವನ್ನು ಶೇ.50 ಕ್ಕೆ ನೀಡಲು ಅವಕಾಶ ನೀಡಿರುವುದರಿಂದ ಮಾಸಿಕ ಗುತ್ತಿಗೆ ಹಣವನ್ನು ರೂ.1,17,982.00 ಗಳಿಗೆ ನಿಗಧಿಪಡಿಸಬಹುದಾಗಿರುತ್ತದೆ.

ಆದ್ದರಿಂದ, ಸದರಿ ನಿವೇಶನದ ಗುತ್ತಿಗೆಯ ಅವಧಿಯನ್ನು ದಿನಾಂಕ:17-01-2011 ರಿಂದ ಮುಂದಿನ 30 ವರ್ಷಗಳ ಅವಧಿಗೆ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ದಿನಾಂಕ:18-07-2007 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಾನ್ಯ ಆಡಳಿತಗಾರರ ಮುಂದೆ ಟಿಪ್ಪಣಿ ಮಂಡಿಸಲಾಗಿದ್ದು, ದಿನಾಂಕ:29-09-2007 ರಂದು ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:164/07-08 ರಲ್ಲಿ "ಆಯುಕ್ತರವರ ದಿನಾಂಕ:06-08-2007 ರ ಟಿಪ್ಪಣಿಯನ್ನು ಒಪ್ಪಿದೆ ಎಂದು ತೀರ್ಮಾನಿಸಿರುತ್ತಾರೆ".

ಶ್ರೀ.ಎಸ್.ಸಿ.ಬಿ.ಪಾಟೀಲ್ ರವರು ದಿನಾಂಕ:13-09-2010 ರಂದು ಆಯುಕ್ತರಿಗೆ ಆಕ್ಷೇಪಣೆ ಸಲ್ಲಿಸಿ ಈ ಸಂಸ್ಥೆ ಬಡವರಿಗೆ ಸಹಾಯ ಮಾಡುತ್ತಿಲ್ಲಾ ಎಂಬುದಾಗಿ, ಗುತ್ತಿಗೆ ನವೀಕರಿಸಬಾರದೆಂದು ತಿಳಿಸುತ್ತಾ, ಸದರಿ ನಿವೇಶನವನ್ನು ಸಾರ್ವಜನಿಕ ಹರಾಜು ಮೂಲಕ ನೀಡಬೇಕೆಂದು ತಿಳಿಸಿರುತ್ತಾರೆ. ಸ್ಥಳೀಯ ಕಂದಾಯ ಅಧಿಕಾರಿಗಳು ತಮ್ಮ ವರದಿಯಲ್ಲಿ ಸದರಿ ಕಣ್ಣಿನ ಆಸ್ಪತ್ರೆಯಲ್ಲಿ ಉಚಿತವಾಗಿ ಹಾಗೂ ರಿಯಾಯಿತಿ ದರದಲ್ಲಿ ಸೇವೆ ಸಲ್ಲಿಸುತ್ತಿರುವುದಾಗಿ ಶೇ.25% ರಷ್ಟು ಮಾತ್ರ ಮಧ್ಯಮ ವರ್ಗದ ರೋಗಿಗಳಿಗೆ ದರ ವಿಧಿಸಲಾಗುತ್ತಿದೆ ಎಂಬುದಾಗಿ ವರದಿ ನೀಡಿರುತ್ತಾರೆ.

ಪ್ರಸಕ್ತ ಸಾಲಿನ ದರದ ಆಧಾರ ಪ್ರಸ್ತಾವನೆ ಮೇರೆಗೆ 5778 ಚ.ಅಡಿ ಜಾಗವನ್ನು ಪ್ರಸಕ್ತ ಮಾರುಕಟ್ಟೆ ದರ ರೂ.3,11,43,420.00 ಕ್ಕೆ ಶೇ.25 ರಷ್ಟನ್ನು ಅಂದರೆ ರೂ.77,85,855.00 (ಎಪ್ಪತ್ತೇಳು ಲಕ್ಷದ ಎಂಭತ್ತೈದು ಸಾವಿರದ ಎಂಟು ನೂರ ಐವತ್ತೈದು ರೂಪಾಯಿಗಳು ಮಾತ್ರ) ಗಳನ್ನು ಒಂದೇ ಕಂತಿನಲ್ಲಿ ಪಾವತಿಸುವಂತೆ ಹಾಗೂ ಸದರಿ ಸ್ವತ್ತಿನಲ್ಲಿ ಸಾರ್ವಜನಿಕರಿಗೆ ಅದರಲ್ಲೂ ಬಡವರಿಗೆ ಕಣ್ಣಿನ ಚಿಕಿತ್ಸೆ ನಡೆಸಲು ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯನ್ನು ಮಾತ್ರ ನಡೆಸುವ ಷರತ್ತಿಗೊಳಪಟ್ಟು ಲಯನ್ಸ್ ಕ್ಲಬ್, ಬೆಂಗಳೂರು ವೆಸ್ಟ್ ಟ್ರಸ್ಟ್‌ಗೆ ಕ್ರಯಕ್ಕೆ ನೀಡಲು ಅನುಮೋದನೆಯನ್ನು ಸರ್ಕಾರವು ಸಂಖ್ಯೆ:ನ.ಅ.ಇ.22/ಎಂ.ಎನ್.ಜಿ/2005, ದಿನಾಂಕ:20-11-2010 ರಲ್ಲಿ ನೀಡಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸಿದ್ಧಯ್ಯ ರಸ್ತೆಯಲ್ಲಿನ ಪಾಲಿಕೆಯ ಸ್ವತ್ತನ್ನು ಲಯನ್ಸ್ ಕ್ಲಬ್‌ಗೆ ಕ್ರಯಕ್ಕೆ ನೀಡುವ ಬಗೆಗಿನ ಸರ್ಕಾರದ ಆದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ದಾಖಲಾತಿಗಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:31-12-2010 ರ ಟಿಪ್ಪಣಿ. ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:31-12-2010 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:31-12-2010 ರ ಟಿಪ್ಪಣಿಯನ್ನು ಒಪ್ಪುವುದು".

..........................4

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:31–12–2010ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

## ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

### ವಿಷಯದ ಸಂಖ್ಯೆ: 5 (189)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಳೆ ವಲಯಗಳ ಒಟ್ಟು 30 ಟೆಂಡರ್ ಪ್ಯಾಕೇಜ್ ಅನ್ನು 2007 ರ ಮಾರ್ಚ್ 15 ರಿಂದ 3 ವರ್ಷದ ಅವಧಿಗೆ ಗುತ್ತಿಗೆ ನೀಡಿದ್ದು, ಸದರಿ ಟೆಂಡರ್ ಗುತ್ತಿಗೆಯು ಮಾರ್ಚ್ 14, 2010 ರಂದು ಅಂತ್ಯಗೊಂಡಿದ್ದು, ಬದಲೀ ವ್ಯವಸ್ಥೆಗಾಗಿ ಜಾಗತಿಕ ಟೆಂಡರ್ ಕರೆದಿದ್ದು, ಇದಕ್ಕೆ ಮಾನ್ಯ ಉಚ್ಚ ನ್ಯಾಯಾಲಯವು W.P.No.30417/2009 ರಲ್ಲಿ ತಡೆಯಾಜ್ಞೆ ನೀಡಿದ್ದರಿಂದ, ಸದರಿ ಗುತ್ತಿಯನ್ನು 3 ತಿಂಗಳ ಅವಧಿಗೆ ಮುಂದುವರೆಸಲಾಗಿತ್ತು. ಸದರಿ ಗುತ್ತಿಗೆ ಅವಧಿ ದಿನಾಂಕ:19-06-2010 ಕ್ಕೆ ಮುಗಿಯಲಿರುವುದನ್ನು ಮನಗಂಡು ಹಾಗೂ ಸದರಿ ರಿಟ್ ಅರ್ಜಿಯ ವಿಲೇವಾರಿ ವಿಳಂಭಗೊಂಡಿದ್ದರಿಂದ, ಸದರಿ ಜಾಗತಿಕ ಟೆಂಡರ್ ಅಧಿಸೂಚನೆಗಳನ್ನು ಹಿಂದಕ್ಕೆ ಪಡೆದು ಹೊಸದಾಗಿ ಟೆಂಡರ್ ಕರೆಯುವುದಾಗಿ ನ್ಯಾಯಾಲಯಕ್ಕೆ ತಿಳಿಸಿದ ಮೇರೆಗೆ ದಿನಾಂಕ:17-06-2010 ರಂದು ಘನ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಿಲೇವಾರಿ ಮಾಡಿದೆ. ಈ ನಿಟ್ಟಿನಲ್ಲಿ ಸದರಿ ಗುತ್ತಿಗೆಯ ಅವಧಿಯನ್ನು ದಿನಾಂಕ:20-06-2010 ರಿಂದ 3 ತಿಂಗಳ ಅವಧಿಗೆ ಮುಂದುವರೆಸಲು ಪಾಲಿಕೆ ಸಭೆಯ ಅನುಮೋದನೆ ಪಡೆಯಲಾಗಿದೆ ಮತ್ತು ಪಾಲಿಕೆಯ ಸಭೆಯ ಅನುಮೋದನೆ ನಿರೀಕ್ಷಿಸಿ, ದಿನಾಂಕ:20-09-2010 ರಿಂದ 3 ತಿಂಗಳ ಅವಧಿಯವರೆಗೂ ಮುಂದುವರೆಸಲಾಗಿದೆ.

ಈ ಸಂದರ್ಭದಲ್ಲಿ ಹೊಸ ವಲಯಗಳಲ್ಲೂ ಕೂಡ ಹಾಲಿ ನಿರ್ವಹಿಸುತ್ತಿದ್ದ ಸ್ವಚ್ಚತಾ ಟೆಂಡರ್ ಅವಧಿಯು ಮುಗಿದಿರುವುದರಿಂದ ಹೊಸದಾಗಿ ಎಲ್ಲಾ ವಲಯಗಳಲ್ಲಿ ಟೆಂಡರ್ ಕರೆಯಲು ನಿರ್ಧರಿಸಲಾಯಿತು ಹಾಗೂ ಪ್ರತಿ ವಲಯದಲ್ಲಿ ಅವಶ್ಯಕತೆಯಿರುವ ಪ್ರಮುಖ ರಸ್ತೆಗಳಿಗೆ ಮೆಕಾನಿಕಲ್ ಸ್ವೀಪಿಂಗ್ ಕಾರ್ಯಕ್ಕಾಗಿ ಪ್ರತ್ಯೇಕವಾಗಿ ವಲಯವಾರು ಟೆಂಡರ್ ಕರೆಯಲು ನಿರ್ಧರಿಸಲಾಯಿತು.

ಸದರಿ ಮೂಲಭೂತ ಸೌಕರ್ಯಗಳನ್ನು ಅತ್ಯಗತ್ಯವಾಗಿ ತೆಗೆದುಕೊಳ್ಳಬೇಕಾಗಿದ್ದು, ಈ ನಿಟ್ಟಿನಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ಟೆಂಡರ್ ದಸ್ತಾವೇಜನ್ನು ತಯಾರಿಸಲು ತಾಂತ್ರಿಕ ಸಮಿತಿಯನ್ನು ರಚಿಸಲಾಯಿತು.

ದಿನಾಂಕ:15-09-2010 ರಂದು ಸದರಿ ತಾಂತ್ರಿಕ ಸಮಿತಿಯ ಸಭೆಯಲ್ಲಿ ಚರ್ಚಿಸಿದಂತೆ ಈ ಕೆಳಕಂಡ ಪ್ರಮುಖ ಅಂಶಗಳನ್ನು ಒಳಗೊಂಡ ಟೆಂಡರ್ ದಸ್ತಾವೇಜನ್ನು ತಯಾರಿಸಲಾಗಿದೆ.

- ಮನೆ ಮನೆಯಿಂದ ಉತ್ಪತ್ತಿಯಾಗುವ ಹಸಿ ಮತ್ತು ಒಣ ತ್ಯಾಜ್ಯವನ್ನು ಮೂಲದಲ್ಲಿಯೇ ಪ್ರತ್ಯೇಕವಾಗಿ ಸಂಗ್ರಹಿಸಿ ನಿಗಧಿತ ಸ್ಥಳಕ್ಕೆ ಸಾಗಿಸುವುದು.
- ರಸ್ತೆ ಗುಡಿಸುವುದು, ಪಾದಚಾರಿ ರಸ್ತೆ ಸ್ವಚ್ಚತೆ, ಚರಂಡಿ ಸ್ವಚ್ಚತೆ ಹಾಗೂ ಕಟ್ಟಡ ಅವಶೇಷಗಳನ್ನು ಉತ್ಪತ್ತಿಯಾದ ಸ್ಥಳದಿಂದ ನಿಗಧಿತ ಸ್ಥಳಕ್ಕೆ ಸಾಗಿಸುವುದು.
- ದೊಡ್ಡ ಪ್ರಮಾಣದ ಉತ್ಪಾದಕರಿಂದ ಘನತ್ಯಾಜ್ಯವನ್ನು ಸಂಗ್ರಹಿಸಿ ನಿಗಧಿತ ಸ್ಥಳಕ್ಕೆ ಸಾಗಿಸುವುದು.
- ಇದಲ್ಲದೇ ಇನ್ನಿತರ ರೂಪುರೇಷುಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ಅಳವಡಿಸಿಕೊಳ್ಳಲಾಗಿದೆ.

........................2

198 ವಾರ್ಡ್‌ಗಳಿಗೆ ಸ್ವಚ್ಚತಾ ಟೆಂಡರ್ ಮತ್ತು ವಲಯವಾರು ಮೆಕಾನಿಕಲ್ ಸ್ವೀಪಿಂಗ್ ಕಾರ್ಯಗಳಿಗೆ 2010-11ನೇ ಸಾಲಿನ ಆಯವ್ಯಯದಲ್ಲಿ ಸ್ವಚ್ಚತೆ ಮತ್ತು ಕಸ ಸಾಗಾಣಿಕೆ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುದಾನವಿರುತ್ತದೆ.

ಸದರಿ ಪ್ರಕ್ರಿಯೆಗಳಿಗೆ ಟೆಂಡರ್ ಕರೆಯಲು ಪಾಲಿಕೆ ಸಭೆಯ ವಿಷಯ ಸಂಖ್ಯೆ:4(147)/10-11, ದಿನಾಂಕ:27-11-2010 ರಲ್ಲಿ ಸರ್ಕಾರದ ಅನುಮೋದನೆ ನಿರೀಕ್ಷಿಸಿ, ಈ ಕೆಳಕಂಡ ಮಾರ್ಪಾಡುಗಳೊಂದಿಗೆ ಟೆಂಡರ್ ಕರೆಯಲು ಪಾಲಿಕೆಯ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು.

- ಮೆಕ್ಯಾನಿಕಲ್ ಸ್ವೀಪಿಂಗ್‌ಗಳನ್ನು ಹೊರತುಪಡಿಸುವುದು.
- ಸಹಾಯಕ ಕಾರ್ಯಪಾಲಕ ಅಭಿಯಂತರರ ಉಪ ವಿಭಾಗದ ಮಟ್ಟದಲ್ಲಿ ಪ್ಯಾಕೇಜುಗಳನ್ನು ರಚಿಸುವುದು.
- ಉಪ ವಿಭಾಗದ ಮಟ್ಟದ ಪ್ಯಾಕೇಜುಗಳಲ್ಲಿ ಪ್ರತಿಯೊಂದು ವಾರ್ಡಿಗೂ ಪ್ರತ್ಯೇಕ ಸಂಖ್ಯೆಯ ಕಾರ್ಮಿಕರು, ಸಲಕರಣೆಗಳು ಮತ್ತು ವಾಹನಗಳನ್ನು ನಮೂದಿಸಿ ನಿರ್ವಹಿಸುವುದು.
- ಪ್ರತಿಯೊಬ್ಬ ಬಿಡ್ಡುದಾರರು ಒಂದು ಉಪ ವಿಭಾಗದ ಪ್ಯಾಕೇಜ್‌ನಲ್ಲಿ ಮಾತ್ರ ಕೆಲಸ ನಿರ್ವಹಿಸುವುದು.
- ಒಂದು ವಿಧಾನ ಸಭಾ ಕ್ಷೇತ್ರದಲ್ಲಿ 09 ವಾರ್ಡ್‌ಗಳು ಇರುವ ಕಡೆ ಮಾತ್ರ ಪ್ರತ್ಯೇಕವಾಗಿ 3 ವಾರ್ಡ್‌ಗಳಿಗೆ ಒಂದು ಪ್ಯಾಕೇಜಿನಂತೆ ಕಾರ್ಯನಿರ್ವಹಿಸುವುದು.

ಆದರೆ, ದಿನಾಂಕ:11-12-2010 ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಟೆಂಡರ್ ದಸ್ತಾವೇಜಿನಲ್ಲಿ ಈ ಕೆಳಕಂಡಂತೆ ಮಾರ್ಪಾಡುಗಳ ಬಗ್ಗೆ ಕೆಲವು ಸಲಹೆಗಳು ಮೂಡಿಬಂದವು.

- ಗುತ್ತಿಗೆ ಅವಧಿಯನ್ನು 3 ವರ್ಷದ ಬದಲು 2 ವರ್ಷದ ಅವಧಿಗೆ ನಿಗಧಿಪಡಿಸುವುದು ಹಾಗೂ ಉಪ ವಿಭಾಗದಲ್ಲಿ 2 ರಿಂದ 3 ವಾರ್ಡ್‌ಗಳಿಗೆ ಒಂದು ಪ್ಯಾಕೇಜಿನಂತೆ ನಿಗಧಿಪಡಿಸುವುದು.
- ಗುತ್ತಿಗೆದಾರನು ಕಂಪನಿ ನಿಯಮ ಪ್ರಕಾರ ನೊಂದಾಯಿತರಾಗಿರಬೇಕು.
- ಹೊಸದಾಗಿ ಕಂಪನಿ ನಿಯಮ ಪ್ರಕಾರ ನೊಂದಾಯಿತರಾದ ಗುತ್ತಿಗೆದಾರನಿಗೆ ಆರ್ಥಿಕ ಸಾಮರ್ಥ್ಯದಲ್ಲಿ ವಿನಾಯಿತಿ ನೀಡುವುದು.
- ಟೆಂಡರ್ ದಸ್ತಾವೇಜಿನಲ್ಲಿ ದಂಡ ಜುಲ್ಮಾನೆಗಳ ನಿಬಂಧನೆಯಲ್ಲಿ ಕನಿಷ್ಠ 10% ರಿಂದ 25% ವರೆಗೂ ವಿಧಿಸುವುದು.
- ಗುತ್ತಿಗೆದಾರನು ಪಾಲಿಕೆಯ ವಿರುದ್ಧ ನ್ಯಾಯಾಲಯಕ್ಕೆ ಹೋಗುವ ಸಂದರ್ಭದಲ್ಲಿ ಠೇವಣಿ ಮೊತ್ತವನ್ನು ಪಾಲಿಕೆಗೆ ಜಮಾ ಮಾಡುವುದು.
- ಪಾಲಿಕೆ ಸದಸ್ಯರಿಂದ ಅನುಸರಣಾ ಪ್ರಮಾಣ ಪತ್ರ ಪಡೆಯುವ ನಿಬಂಧನೆಯನ್ನು ತೆಗೆದು ಹಾಕುವುದು.

ಮೇಲೆ ತಿಳಿಸಿದ ಅಂಶಗಳನ್ನು ಅಳವಡಿಸಿಕೊಂಡು ಟೆಂಡರ್‌ನಲ್ಲಿ ಮಾರ್ಪಾಡು ಮಾಡಲು ಹಾಗೂ ಈ ಬಗ್ಗೆ ಅಭಿಪ್ರಾಯವನ್ನು ನೀಡಲು ಮೆ॥ ಐಡೆಕ್ ಸಂಸ್ಥೆರವರನ್ನು ಕೋರಿದ್ದು, ಅದರಂತೆ ಮೆ॥ ಐಡೆಕ್ ಸಂಸ್ಥೆರವರು ಟೆಂಡರ್ ದಸ್ತಾವೇಜಿನಲ್ಲಿ ಮಾರ್ಪಾಡು ಮಾಡಿದ್ದು, ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

.........................3

- ಟೆಂಡರ್ ದಸ್ತಾವೇಜಿನಲ್ಲಿ ಗುತ್ತಿಗೆ ಅವಧಿಯನ್ನು 3 ವರ್ಷದ ಬದಲು 2 ವರ್ಷದ ಅವಧಿಗೆ ಮಾರ್ಪಾಡು ಮಾಡಲಾಗಿರುತ್ತದೆ.
- ಗುತ್ತಿಗೆದಾರನು ಕಂಪನಿ ನಿಯಮ ಪ್ರಕಾರ ನೊಂದಾಯಿತರಾಗಿರಬೇಕು ಹಾಗೂ ಈ ನಿಬಂಧನೆಯಂತೆ ಏಕವ್ಯಕ್ತಿ, ಸಹಭಾಗಿತ್ವ ಸಂಸ್ಥೆಗಳು ಮತ್ತು ಟ್ರಸ್ಟ್‌ಗಳು ಟೆಂಡರ್‌ನಲ್ಲಿ ಭಾಗವಹಿಸಲು ಸಾಧ್ಯವಿರುವುದಿಲ್ಲ.
- ಕಂಪನಿ ನಿಯಮ ಪ್ರಕಾರ ನೊಂದಾಯಿತ ಗುತ್ತಿಗೆದಾರನಿಗೆ ತಾಂತ್ರಿಕ ಮತ್ತು ಹಣಕಾಸಿನ ಸಾಮರ್ಥ್ಯದಲ್ಲಿ ಯಾವುದೇ ವಿನಾಯಿತಿ ನೀಡಲು ಬರುವುದಿಲ್ಲ.
- ಟೆಂಡರ್ ದಸ್ತಾವೇಜಿನಲ್ಲಿ ದಂಡ ಜುಲ್ಮಾನೆಗಳ ನಿಬಂಧನೆಯನ್ನು ಮಾರ್ಪಾಡು ಮಾಡಿದ್ದು ಮತ್ತು ಪಾಲಿಕೆ ಸದಸ್ಯರಿಂದ ಅನುಸರಣಾ ಪ್ರಮಾಣ ಪತ್ರ ಪಡೆಯುವ ನಿಬಂಧನೆಯನ್ನು ತೆಗೆದುಹಾಕಲಾಗಿರುತ್ತದೆ.

ಸದರಿ ವಿಷಯದ ಬಗ್ಗೆ ದಿನಾಂಕ:21-12-2010 ರಂದು ಉಪ ಮಹಾಪೌರರ ಅಧ್ಯಕ್ಷತೆಯಲ್ಲಿ ನಡೆದ PMU ಸಭೆಯಲ್ಲಿ ಆಡಳಿತ ಪಕ್ಷದ ನಾಯಕರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷರು ಮತ್ತು ಮಾನ್ಯ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರೊಂದಿಗೆ ಚರ್ಚಿಸಿದಂತೆ ಟೆಂಡರ್‌ನಲ್ಲಿ ಭಾಗವಹಿಸಲು ಕಂಪನಿ ನಿಯಮ ಪ್ರಕಾರ ನೊಂದಾಯಿತ ಗುತ್ತಿಗೆದಾರರೊಂದಿಗೆ ಸಹಭಾಗಿತ್ವ (Consortium) ಸಂಸ್ಥೆಗಳನ್ನು ಕೂಡ ಗಣನೆಗೆ ತೆಗೆದುಕೊಳ್ಳಲು ನಿರ್ಧರಿಸಲಾಯಿತು ಹಾಗೂ ಈ ನಿಟ್ಟಿನಲ್ಲಿ ಮಾರ್ಪಾಡು ಮಾಡಿದ ಟೆಂಡರ್ ದಸ್ತಾವೇಜಿಗೆ ಪಾಲಿಕೆ ಸಭೆಯು ಅನುಮೋದನೆ ನಿರೀಕ್ಷಿಸಿ ಅಲ್ಪಾವಧಿ ಟೆಂಡರ್ ಕರೆಯಲು ಸೂಚಿಸಲಾಯಿತು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. ಮೇಲ್ಕಂಡ ಅಂಶಗಳ ಮೇರೆಗೆ, ಸದರಿ ಮಾರ್ಪಾಡುಗಳನ್ನು ಅಳವಡಿಸಿಕೊಂಡು ಪಾಲಿಕೆ ಸಭೆಯ ಅನುಮೋದನೆ ನಿರೀಕ್ಷಿಸಿ ಅಲ್ಪಾವಧಿ ಟೆಂಡರ್ ಕರೆಯಲು ವಲಯಗಳಿಗೆ ಸೂಚಿಸಲು ಹಾಗೂ
2. ಪಾಲಿಕೆಯ ಸಭೆಯ ಅನುಮೋದನೆ ನೀಡಿದ ನಂತರ, ಟೆಂಡರ್ ದಸ್ತಾವೇಜನ್ನು ಸರ್ಕಾರದ ಮಟ್ಟದಲ್ಲಿ ರಚಿಸಲಾಗಿರುವ ಅಧಿಕಾರಯುಕ್ತ ಸಮಿತಿಯ ಪರಿಶೀಲನೆಗೆ ಕಳುಹಿಸಲು ಅನುಮೋದನೆ.

ಮೇಲ್ಕಂಡ ಎರಡು ಅಂಶಗಳಿಗೆ ಅನುಮೋದನೆ ಕೋರಿ, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27-12-2010 ರ ಟಿಪ್ಪಣಿ ಹಾಗೂ ಆಯುಕ್ತರ ದಿನಾಂಕ:27-12-2010 ರ ಟಿಪ್ಪಣಿಯನ್ನು ಈ ಕೆಳಕಂಡ ಮಾರ್ಪಾಡಿನೊಂದಿಗೆ ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:07-01-2011 ರ ನಿರ್ಣಯ.

**ಮಾರ್ಪಾಡು:**

ಬೆಂಗಳೂರು ನಗರ ಐ.ಟಿ.ಬಿ.ಟಿ ನಗರವಾಗಿರುವ ಹಿನ್ನಲೆಯಲ್ಲಿ, ನಗರದ ಮುಖ್ಯ ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುವುದರಿಂದ ಮುಖ್ಯ ರಸ್ತೆಗಳಲ್ಲಿ ಪೌರ ಕಾರ್ಮಿಕರಿಂದ ಕಸ ಗುಡಿಸುವ ಕೆಲಸವನ್ನು ನಿರ್ವಹಿಸಲು ಕಷ್ಟವಾಗುವುದರಿಂದ ಹಾಗೂ ನೌಕರರ ಪ್ರಾಣಾಪಾಯದ ದೃಷ್ಟಿಯಿಂದ

........................4

ವಾಣಿಜ್ಯ ಪ್ರದೇಶಗಳನ್ನು ಒಳಗೊಂಡಂತೆ ಮೆಕ್ಯಾನಿಕಲ್ ಸ್ವೀಪಿಂಗ್ ವಾಹನದಿಂದ ಮುಖ್ಯ ರಸ್ತೆಯ ಸ್ವಚ್ಚತೆಯನ್ನು ನಿರ್ವಹಿಸುವ ಸಂಬಂಧ ವಲಯದ ರಸ್ತೆಯ ಉದ್ದಗಲವನ್ನು ಪರಿಗಣಿಸಿ ಅವಶ್ಯಕತೆಗೆ ತಕ್ಕಂತೆ ಎಂಟು ವಲಯಗಳಿಗೆ ಮೆಕ್ಯಾನಿಕಲ್ ಸ್ವೀಪರ್ ಯಂತ್ರ ಅಳವಡಿಸಿಕೊಂಡು ಪ್ರತ್ಯೇಕವಾದ ಟೆಂಡರ್ ಕರೆಯಲು ತೀರ್ಮಾನಿಸಲಾಯಿತು.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:07-01-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**<u>ನಿರ್ಣಯ</u>:** "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:07-01-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

## ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

### ವಿಷಯದ ಸಂಖ್ಯೆ: 6 (190)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸಾರ್ವಜನಿಕ ಆರೋಗ್ಯ ಹಿತದೃಷ್ಟಿಯಿಂದ ಈಗಾಗಲೇ 6 ರೆಫರಲ್ ಆಸ್ಪತ್ರೆಗಳು, 24 ಹೆರಿಗೆ ಆಸ್ಪತ್ರೆಗಳು, 29 ಆರೋಗ್ಯ ಕೇಂದ್ರಗಳು, 16 ಔಷಧಾಲಯಗಳು, 19 ಕುಟುಂಬ ಕಲ್ಯಾಣ ಕೇಂದ್ರ ಮತ್ತು 3 ಸಂಚಾರಿ ಔಷಧಾಲಯಗಳನ್ನು ನಡೆಸಲಾಗುತ್ತಿದೆ. ಸಾರ್ವಜನಿಕರಿಗೆ ಇನ್ನೂ ಹೆಚ್ಚಿನ ರೀತಿಯ ಆರೋಗ್ಯ ಸೇವೆಯನ್ನು ವಿಸ್ತರಿಸುವ ಸಲುವಾಗಿ ಈ ಕೆಳಕಂಡ ಸ್ಥಳಗಳಲ್ಲಿ 5 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 8 ಔಷಧಾಲಯಗಳ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ಇವುಗಳನ್ನು ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಪ್ರಾರಂಭಿಸಲು ಭಾರತೀಯ ಸಾರ್ವಜನಿಕ ಆರೋಗ್ಯ ಗುಣಮಟ್ಟದ ರೀತ್ಯಾ (ಐ.ಪಿ.ಹೆಚ್.ಎಸ್) ಸಿಬ್ಬಂದಿ ಮತ್ತು ಸಲಕರಣೆಗಳ ಅವಶ್ಯಕತೆ ಇದ್ದು, ಈ ಸೌಲಭ್ಯವನ್ನು ಕಲ್ಪಿಸಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ಅಗತ್ಯವಾಗಿದೆ. ಅದರಂತೆ ಈ ಕೆಳಕಂಡಂತೆ ಪ್ರಸ್ತಾವನೆ ಸಲ್ಲಿಸಿದೆ.

### 5 - ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿಳಾಸ:

| | | | |
|---|---|---|---|
| 1 | ಮೂಡಲಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರ,<br>ಭೈರವೇಶ್ವರ ನಗರ,<br>ಮೂಡಲಪಾಳ್ಯ, ಬೆಂಗಳೂರು-72. | 3 | ಮಹಾಲಕ್ಷ್ಮೀ ಲೇಔಟ್ ಪ್ರಾಥಮಿಕ ಆರೋಗ್ಯ ಕೇಂದ್ರ,<br>(ಗೆಳೆಯರ ಬಳಗ), 2ನೇ ಕ್ರಾಸ್,<br>3ನೇ ಮುಖ್ಯ ರಸ್ತೆ, ಚೇರ್‌ಮೆನ್ ಚಿನ್ನಪ್ಪ ಆಸ್ಪತ್ರೆ,<br>ಗಣೇಶ ದೇವಸ್ಥಾನದ ಎದುರು,<br>ಗೆಳೆಯರ ಬಳಗ,<br>ಬೆಂಗಳೂರು-86. |
| 2 | ಮಂಜುನಾಥನಗರ ಪ್ರಾಥಮಿಕ ಆರೋಗ್ಯ ಕೇಂದ್ರ,<br>1ನೇ ಮುಖ್ಯರಸ್ತೆ, ವಾರ್ಡ್-15,<br>ಮಂಜುನಾಥನಗರ, ರಾಜಾಜಿನಗರ,<br>ಬೆಂಗಳೂರು-10. | 4 | ಆಡುಗೋಡಿ ಪ್ರಾಥಮಿಕ ಆರೋಗ್ಯ ಕೇಂದ್ರ,<br>ಆಡುಗೋಡಿ ಆರೋಗ್ಯ ಕೇಂದ್ರದ ಮೇಲೆ,<br>ಕೋರಮಂಗಲ ಮುಖ್ಯ ರಸ್ತೆ,<br>ಆಡುಗೋಡಿ ಕೋರ್ಟ್, ಬೆಂಗಳೂರು-30. |
| 5 | ತಾವರೆಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರ,<br>ತಾವರೆಕೆರೆ ಆರೋಗ್ಯ ಕೇಂದ್ರದ ಪಕ್ಕದಲ್ಲಿ,<br>ತಾವರೆಕೆರೆ ಮುಖ್ಯ ರಸ್ತೆ,<br>ಮುಖ್ಯ ಬಸ್ ನಿಲ್ದಾಣದ ಹಿಂಭಾಗ,<br>ಬೆಂಗಳೂರು. | | |

**ಪ್ರಾಥಮಿಕ ಆರೋಗ್ಯ ಕೇಂದ್ರದ ನಿರ್ವಹಣೆಗೆ ಈ ಕೆಳಕಂಡಂತೆ ಸಿಬ್ಬಂದಿ, ಔಷಧಿಗಳು ಹಾಗೂ ಯಂತ್ರೋಪಕರಣ ಮತ್ತು ಪೀಠೋಪಕರಣಗಳ ಅಗತ್ಯತೆ ಇರುತ್ತದೆ.**

.........................2



| ಕ್ರ.ಸಂ. | ಹುದ್ದೆಯ ಹೆಸರು | ಒಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಹುದ್ದೆಗಳ ಸಂಖ್ಯೆ | ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗೆ ತಗಲುವ ಅಂದಾಜು ವೆಚ್ಚ (ಪ್ರತಿ ವರ್ಷ) | 5 ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಒಟ್ಟು ಹುದ್ದೆಗಳ ಸಂಖ್ಯೆ | 5 ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗೆ ತಗಲುವ ಅಂದಾಜು ವೆಚ್ಚ (ಪ್ರತಿ ವರ್ಷ) |
|---|---|---|---|---|---|
| **1** | **2** | **3** | **4** | **5** | **6** |
| 1 | ಸಹಾಯಕ ಶಸ್ತ್ರ ಚಿಕಿತ್ಸಕರು | 02 | 566952 | 10 | 2834760 |
| 2 | ಆಯುರ್ವೇದ ವೈದ್ಯರು | 01 | 283476 | 5 | 1417380 |
| 3 | ಅಕೌಂಟ್ಸ್ ಮ್ಯಾನೇಜರ್ | 01 | 202800 | 5 | 1014000 |
| 4 | ಫಾರ್ಮಸಿಸ್ಟ್ | 02 | 253800 | 10 | 1269000 |
| 5 | ಸ್ಟಾಫ್ ನರ್ಸ್ | 05 | 816000 | 25 | 4080000 |
| 6 | ಆರೋಗ್ಯ ಕಾರ್ಯಕರ್ತರು (ಮಹಿಳೆ) | 01 | 128340 | 5 | 641700 |
| 7 | ಆರೋಗ್ಯ ಶಿಕ್ಷಕರು | 01 | 128340 | 5 | 641700 |
| 8 | ಆರೋಗ್ಯ ಸಹಾಯಕರು (ಒಬ್ಬ ಪುರುಷ, ಒಬ್ಬ ಮಹಿಳೆ) | 02 | 256680 | 10 | 1283400 |
| 9 | ಗುಮಾಸ್ತರು | 02 | 235872 | 10 | 1179360 |
| 10 | ಲ್ಯಾಬ್ ಟೆಕ್ನಿಷಿಯನ್ | 02 | 294648 | 10 | 1473240 |
| 11 | ಚಾಲಕರು (Optional) | 01 | 120936 | 5 | 604680 |
| 12 | ನಾಲ್ಕನೇ ದರ್ಜೆ ನೌಕರರು (Contractual) | 04 | 404064 | 20 | 2020320 |
| | **ಒಟ್ಟು ಮೊತ್ತ** | **24** | **3691908** | **120** | **18459540** |
| 13 | ಔಷಧಿಗಳು | - | 300000 | - | 1500000 |
| 14 | ಯಂತ್ರೋಪಕರಣ ಮತ್ತು ಪೀಠೋಪಕರಣಗಳು | | 1341500 | | 6707500 |
| | **ನಿವ್ವಳ ಮೊತ್ತ** | | **5333408** | | **26667040** |

.........................3

## 8 – ಔಷಧಾಲಯಗಳ ವಿಳಾಸ:

| | | | |
|---|---|---|---|
| 1 | ಕಮಲ ನಗರ ಔಷಧಾಲಯ,<br>ವಾರ್ಡ್ ಕಛೇರಿಯ ಹತ್ತಿರ,<br>ಶಂಕರ್‌ನಾಗ್ ಬಸ್ ನಿಲ್ದಾಣ,<br>ಬೆಂಗಳೂರು. | 5 | ಸಂಜಯನಗರ ಔಷಧಾಲಯ,<br>ವಿಜಯ ಬ್ಯಾಂಕ್ ಎದುರು,<br>ಸಂಜಯನಗರ ಬಸ್ ನಿಲ್ದಾಣ,<br>ಆರ್.ಎಮ್.ವಿ. 2ನೇ ಹಂತ, ಬೆಂಗಳೂರು–94. |
| 2 | ಚೋಳೂರು ಪಾಳ್ಯ ಔಷಧಾಲಯ,<br>ವಾರ್ಡ್ ಕಛೇರಿಯ ಹತ್ತಿರ, ಪೈಪ್ ಲೈನ್ ರಸ್ತೆ, ಚೋಳೂರುಪಾಳ್ಯ, ವಿಜಯನಗರ,<br>ಬೆಂಗಳೂರು–40. | 6 | ಭಾಷ್ಯಂ ನಗರ ಔಷಧಾಲಯ,<br>9ನೇ ಮುಖ್ಯ ರಸ್ತೆ,<br>ಶ್ರೀರಾಮ್‌ಪುರ ಪೊಲೀಸ್ ಠಾಣೆ ಹಿಂಭಾಗ,<br>ಬೆಂಗಳೂರು–21. |
| 3 | ಪಂಚಶೀಲ ನಗರ ಔಷಧಾಲಯ,<br>ಪ್ರಮೀಳಾ ಬಾಯಿ ಮನೆ ಆಸ್ಪತ್ರೆ,<br>1ನೇ ಮುಖ್ಯ ರಸ್ತೆ, ಪಂಚಶೀಲ ನಗರ,<br>ಬೆಂಗಳೂರು. | 7 | ಆನಂದಪುರಂ ಔಷಧಾಲಯ,<br>ಮೈಸೂರು ರಸ್ತೆ, ಆನಂದಪುರಂ,<br>ಬೆಂಗಳೂರು. |
| 4 | ಪೀಣ್ಯ ಔಷಧಾಲಯ,<br>ವಾರ್ಡ್ ಕಛೇರಿಯ ಹತ್ತಿರ, 1ನೇ ಹಂತ, ಪೀಣ್ಯ,<br>ಬೆಂಗಳೂರು. | 8 | ವಸಂತನಗರ ಔಷಧಾಲಯ,<br>1ನೇ ಮುಖ್ಯ ರಸ್ತೆ, ವಸಂತನಗರ,<br>ಬೆಂಗಳೂರು – 52. |

**ಔಷಧಾಲಯಗಳ ನಿರ್ವಹಣೆಗೆ ಈ ಕೆಳಕಂಡಂತೆ ಸಿಬ್ಬಂದಿ, ಔಷಧಿಗಳು ಮತ್ತು ಯಂತ್ರೋಪಕರಣ ಮತ್ತು ಪೀಠೋಪಕರಣಗಳ ಅಗತ್ಯತೆ ಇರುತ್ತದೆ.**

| ಕ್ರ.ಸಂ. | ಹುದ್ದೆಯ ಹೆಸರು | ಒಂದು ಔಷಧಾಲಯಕ್ಕೆ ಅಗತ್ಯವಿರುವ ಹುದ್ದೆಗಳ ಸಂಖ್ಯೆ | 8 ಔಷಧಾಲಯಗಳಿಗೆ ಸಿಬ್ಬಂದಿಗೆ ತಗಲುವ ಅಂದಾಜು ವೆಚ್ಚ (ಪ್ರತಿ ವರ್ಷ) | 8 ಔಷಧಾಲಯಗಳಿಗೆ ಅಗತ್ಯವಿರುವ ಒಟ್ಟು ಹುದ್ದೆಗಳ ಸಂಖ್ಯೆ | 8 ಔಷಧಾಲಯಗಳ ಸಿಬ್ಬಂದಿಗೆ ತಗಲುವ ಅಂದಾಜು ವೆಚ್ಚ (ಪ್ರತಿ ವರ್ಷ) |
|---|---|---|---|---|---|
| **1** | **2** | **3** | **4** | **5** | **6** |
| 1 | ಸಹಾಯಕ ಶಸ್ತ್ರ ಚಿಕಿತ್ಸಕರು | 1 | 283476 | 8 | 2267808 |
| 2 | ಎ.ಎನ್.ಎಮ್. | 2 | 253800 | 16 | 2030400 |
| 3 | ಪ್ರಥಮ ದರ್ಜೆ ಸಹಾಯಕರು | 1 | 147324 | 8 | 1178592 |
| 4 | ದ್ವಿತೀಯ ದರ್ಜೆ ಸಹಾಯಕರು | 1 | 117936 | 8 | 943488 |
| 5 | ಲ್ಯಾಬ್ ಟೆಕ್ನಿಷಿಯನ್ | 1 | 147324 | 8 | 1178592 |

.........................4

| | | | | | |
|---|---|---|---|---|---|
| 6 | ಜವಾನರು (To carry out Tappal duties) | 2 | 196032 | 16 | 1568256 |
| 7 | ಆಯಾ (Contractual Services) | 2 | 196032 | 16 | 1568256 |
| | **ಒಟ್ಟು ಮೊತ್ತ** | **10** | **1341924** | **80** | **10735392** |
| 8 | ಔಷಧಿಗಳು | – | 100000 | – | 800000 |
| 9 | ಯಂತ್ರೋಪಕರಣ ಮತ್ತು ಪೀಠೋಪಕರಣಗಳು | | 585300 | | 4682400 |
| 10 | ಲೆನಿನ್ ಸಾಮಗ್ರಿಗಳು | | 66750 | | 534000 |
| | **ನಿವ್ವಳ ಮೊತ್ತ** | | **2093974** | | **16751792** |

5 ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ವಹಣೆಗೆ ಅಗತ್ಯವಾದ ಸಿಬ್ಬಂದಿ ಮತ್ತು ಇತರೆ ಸೌಲಭ್ಯಗಳಿಗೆ ವಾರ್ಷಿಕ ರೂ.2,66,67,040/– ಅಂದಾಜು ವೆಚ್ಚ ಮತ್ತು 8 ಔಷಧಾಲಯಗಳ ನಿರ್ವಹಣೆಗೆ ಅಗತ್ಯವಾದ ಸಿಬ್ಬಂದಿ ಮತ್ತು ಇತರೆ ಸೌಲಭ್ಯಗಳಿಗೆ ವಾರ್ಷಿಕ ರೂ.1,67,51,792/– ಅಂದಾಜು ವೆಚ್ಚದಂತೆ ಒಟ್ಟಾರೆ ರೂ.4,34,18,832/– ಗಳು ಅಂದಾಜು ವೆಚ್ಚವಾಗುತ್ತದೆ.

ತತ್ಸಂಬಂಧ, ಮೇಲ್ಕಂಡ ಅಂಶಗಳನ್ನು ಅವಗಾಹನೆಗೆ ತರುತ್ತಾ, ಪ್ರಸ್ತಾಪಿತ ಪ್ರಸ್ತಾವನೆಗೆ ಅಗತ್ಯವಿರುವ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಲು ಮತ್ತು ಅಗತ್ಯವಿರುವ ಅಂದಾಜು ಮೊತ್ತವಾದ ರೂ.4,34,18,832/– ಗಳನ್ನು 2010–11 ನೆ ಸಾಲಿನ ಆಯವ್ಯಯದಲ್ಲಿ ಬಳಸಿಕೊಳ್ಳಲು ಅನುಮೋದನೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಔಷಧಾಲಯಗಳನ್ನು ಪ್ರಾರಂಭಿಸಲು ಮತ್ತು ಪ್ರತಿ ವರ್ಷ ಇದಕ್ಕೆ ಅಗತ್ಯವಿರುವ ವೆಚ್ಚವನ್ನು ಆಯವ್ಯಯದಲ್ಲಿ ಕಾಯ್ದಿರಿಸಿಕೊಳ್ಳಲು ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11–10–2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26–10–2010 ರ ನಿರ್ಣಯ ಹಾಗೂ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:07–01–2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:07–01–2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

........................5

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** **"**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:07–01–2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು**"**.

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

# ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 7 (191)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಈಗಾಗಲೇ ಭಾರತದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ಲಾಸ್ಟಿಕ್ ಬಳಕೆಯಿಂದ ಪರಿಸರಕ್ಕೆ ಉಂಟಾಗುವ ನಾನಾ ಸಮಸ್ಯೆಗಳನ್ನು ಎದುರಿಸಲು ಅನೇಕ ಪ್ರಾಂತ್ಯಗಳಲ್ಲಿ ಪ್ಲಾಸ್ಟಿಕ್ ನಿರ್ಮೂಲನೆ ಮಾಡಬೇಕೆಂದು ಸತತ ಪ್ರಯತ್ನ ಮಾಡಲಾಗುತ್ತಿದೆ. ಆದರೆ, ಪ್ರತಿ ಜನರ ಜೀವನದಲ್ಲಿ ಪ್ಲಾಸ್ಟಿಕ್ ಬಳಕೆಯು ಕೈಬಿಡಲಾಗದಂತ ಸಮಸ್ಯೆಯಾಗಿದೆ. ಈ ನಿಟ್ಟಿನಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಕೈಬಿಡಲು ಸಾಕಷ್ಟು ಪ್ರಯತ್ನಗಳು ನಡೆಯುತ್ತಿದ್ದು, ಪ್ಲಾಸ್ಟಿಕ್ ಬಳಕೆಗೆ ಪರ್ಯಾಯವಾಗಿ ಸೂಕ್ತ ಪರಿಹಾರ ದೊರಕಿರುವುದಿಲ್ಲ. ಇದು ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ.

ಈ ದಿಕ್ಕಿನಲ್ಲಿ ಶಾಶ್ವತ ಪರಿಹಾರ ಕಂಡುಕೊಳ್ಳಲೇಬೇಕಾದ ಸಮಯ ಎದುರಾಗಿದೆ. ಈ ಸಂದರ್ಭದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಈಗಾಗಲೇ ಕೆಲವು ನಗರಗಳು ಮತ್ತು ಹಲವಾರು ಪ್ರಾಂತ್ಯದಲ್ಲಿ ಮತ್ತು ನಮ್ಮ ರಾಜ್ಯದ ಮಾಲಿನ್ಯ ನಿಯಂತ್ರಣ ಮಂಡಳಿಯು (20 ಮೈಕ್ರಾನ್ಸ್) ಸಹ ಪ್ಲಾಸ್ಟಿಕ್ ಬಳಕೆಯನ್ನು ಸೂಕ್ತ ಕಾನೂನಿನ ಮೂಲಕ ರದ್ದುಪಡಿಸಿದ್ದರೂ ಸಹ ಈ ಮಾರ್ಗದಲ್ಲಿ ಸಂಪೂರ್ಣ ಯಶಸ್ವಿಯು ಕಂಡುಬಂದಿರುವುದಿಲ್ಲ.

ಈ ಹಿನ್ನಲೆಯಲ್ಲಿ, ಈಗಾಗಲೇ ಭಾರತದಲ್ಲಿ ನಿರುಪಯುಕ್ತ ಪ್ಲಾಸ್ಟಿಕ್ ಮೂಲಕ ತೈಲ ಉತ್ಪಾದನೆಯನ್ನು ಪ್ರಾರಂಭಿಸಿ ಕೆಲವು ಮಹಾನಗರಗಳಲ್ಲಿ ಯಶಸ್ವಿಯಾಗಿರುತ್ತಾರೆ ಹಾಗೂ ಆ ಮಹಾನಗರದ ರಾಜ್ಯ ಸರ್ಕಾರ, ನಗರ ಸಭೆ, ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಮಿನಿಸ್ಟ್ರಿ ಆಫ್ ನಾನಾ ಕನ್ವವೆಂನಷನಲ್ ಎನರ್ಜಿ ಮತ್ತು ಮಿನಿಸ್ಟ್ರಿ ಆಫ್ ಪೆಟ್ರೋಲಿಯಂ ಅಂಡ್ ಪೆಟ್ರೋಕೆಮಿಕಲ್ಸ್ ಇಲಾಖೆಗಳು ಈ ಯೋಜನೆಗೆ ಅನುಮೋದನೆಯನ್ನು ನೀಡಿದ್ದು, ಸಾಕಷ್ಟು ನಗರಗಳಲ್ಲಿ ಈ ಪದ್ಧತಿ ಈಗಾಗಲೇ ಜಾರಿಯಲ್ಲಿರುತ್ತದೆ. ಕರ್ನಾಟಕದಲ್ಲಿ ಈಗಾಗಲೇ ಮೈಸೂರಿನಲ್ಲಿ ಈ ಘಟಕವನ್ನು ಸ್ಥಾಪಿಸಲು ಟೆಂಡರ್ ಅನ್ನು ಆಹ್ವಾನಿಸಿ ರಾಜ್ಯ ಸರ್ಕಾರದ ಮಟ್ಟದಲ್ಲಿ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಈ ಸಂದರ್ಭದಲ್ಲಿ ಪ್ಲಾಸ್ಟಿಕ್ ಬಳಕೆಯು ರದ್ದುಗೊಳಿಸುವ ನಿರ್ಧಾರ ದೀರ್ಘ ಕಾಲದ ಯೋಜನೆಯಾಗಿದ್ದು, ಈ ಮಾರ್ಗದಲ್ಲಿ ಸಾಕಷ್ಟು ಜನರಲ್ಲಿ ಅರಿವು ಮೂಡಿಸಿ ಯಶಸ್ವಿಯನ್ನು ಕಾಣಬೇಕಾಗಿರುತ್ತದೆ ಹಾಗೂ ಇದಕ್ಕೆ ತಕ್ಕಂತೆ ಕಾನೂನನ್ನು ಜಾರಿಗೊಳಿಸಬೇಕಾಗಿರುತ್ತದೆ. ಆದರೆ, ಈಗಾಗಲೇ ಉಪಯೋಗದಲ್ಲಿರುವ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಿಸಲು ಮೇಲೆ ಸೂಚಿಸಿರುವ ಘಟಕವನ್ನು ಸ್ಥಾಪಿಸಿದ್ದಲ್ಲಿ ಪ್ಲಾಸ್ಟಿಕ್ ಬಳಕೆಯಿಂದ ಪರಿಸರಕ್ಕೆ ಉಂಟಾಗುವ ಹಾನಿಯನ್ನು ತಡೆಗಟ್ಟಬಹುದಾಗಿರುತ್ತದೆ.

ಲಭ್ಯವಿರುವ ಮಾಹಿತಿಗಳ ಪ್ರಕಾರ 10 ಟನ್ ಪ್ಲಾಸ್ಟಿಕನ್ನು ಕಚ್ಚಾ ತೈಲವಾಗಿ ಮಾರ್ಪಡಿಸುವ ಸಾಮರ್ಥ್ಯವಿರುವ ಘಟಕವನ್ನು ಅನೇಕ ನಗರಗಳಲ್ಲಿ 5 ಎಕರೆ ಜಮೀನನ್ನು ಲ್ಯಾಂಡ್‌ಫಿಲ್ ಸೈಟಿನಲ್ಲಿ 25 ವರ್ಷಕ್ಕೆ ಲೀಸ್ ಮೂಲಕ ನೀಡಿ, ಚೆನ್ನೈ ಮತ್ತು ಕೊಚ್ಚಿನ್ ಮಹಾನಗರದಲ್ಲಿ ಈಗಾಗಲೇ ಕಾರ್ಯರೂಪಕ್ಕೆ ತರಲಾಗಿದೆ. ಈ ಷರತ್ತಿನಲ್ಲಿ ಕೇವಲ ಪಾಲಿಕೆ ಜಾಗವನ್ನು ನೀಡಿದ್ದಲ್ಲಿ ಬಿಡ್ಡುದಾರರು ಟಿಪ್ಪಿಂಗ್ ಫೀ ಪಡೆದುಕೊಳ್ಳದೆ ಪ್ಲಾಸ್ಟಿಕ್ ವಿಲೇವಾರಿಯನ್ನು ಮಾಡುತ್ತಿರುತ್ತಾರೆ ಮತ್ತು ತೈಲ ಉತ್ಪಾದನೆಯಲ್ಲಿ ಬಿಡ್ಡುದಾರರು ಶೇ.2% ರಾಯಲ್ಟಿಯನ್ನು ಹಾಗೂ ಶೇ.20% ಸಿ.ಡಿ.ಎಂ. ಗ್ರಾಂಟ್ಸ್ ಅನ್ನು ಅಲ್ಲಿನ ಪಾಲಿಕೆಗೆ ನೀಡಿರುತ್ತಾರೆ. ಇದರ ಮೂಲಕ ಚಿಂದಿ ಆಯುವ ಮಂದಿಗೆ ಉದ್ಯೋಗಾವಕಾಶ ದೊರಕಿರುತ್ತದೆ ಮತ್ತು

.........................2

ಆ ಮಂದಿಗಳಿಗೆ ಸಮವಸ್ತ್ರ (uniform) ವನ್ನು ಸಹ ನೀಡಲಾಗಿರುತ್ತದೆ. ಈ ಘಟಕದಲ್ಲಿ 1 ಟನ್ ಪ್ಲಾಸ್ಟಿಕ್‌ನಿಂದ 1000 ಲೀಟರ್ ಕಚ್ಚಾ ತೈಲವನ್ನು ಉತ್ಪಾದಿಸಲಾಗುತ್ತಿದೆ. ಇದರಲ್ಲಿ ಉತ್ಪಾದನೆಯಾಗುವ 200 ಲೀಟರ್ ಕಚ್ಚಾ ತೈಲವನ್ನು ಈ ಘಟಕದ ಚಾಲನೆಗೆ ಮರು ಬಳಕೆ ಮಾಡಲಾಗುತ್ತಿದೆ ಹಾಗೂ 800 ಲೀಟರ್ ತೈಲವನ್ನು ತೈಲ ಸಂಸ್ಕರಿಸುವ ಘಟಕಗಳಿಗೆ ಬಿಡ್ಡುದಾರರು ಮಾರಾಟ ಮಾಡುತ್ತಾರೆ. ಈ ಘಟಕದಿಂದ ಪರಿಸರಕ್ಕೆ ಯಾವುದೇ ವಿಧವಾದ ಹಾನಿ ಉಂಟಾಗುವುದಿಲ್ಲ. ಈ ಯೋಜನೆಯಿಂದ ಪಾಲಿಕೆಗೆ ಯಾವುದೇ ಆರ್ಥಿಕ ಹೊರೆಯು ಇರುವುದಿಲ್ಲ ಹಾಗೂ ಇದಕ್ಕೆ ಯಾವುದೇ ವೆಚ್ಚವು ತಗಲದಿರುವ ಕಾರಣ, ಆಯವ್ಯಯದಲ್ಲಿ ಅನುದಾನ ಕಲ್ಪಿಸಬೇಕಾದ ಅವಶ್ಯಕತೆ ಇರುವುದಿಲ್ಲ.

ಮೇಲೆ ತಿಳಿಸಿರುವ ಅಂಶಗಳ ಮೇರೆಗೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಹ ಈ ಮಾರ್ಗದಲ್ಲಿ ಪ್ಲಾಸ್ಟಿಕ್‌ನಿಂದ ಕಚ್ಚಾ ತೈಲ ಉತ್ಪಾದನೆ ಮಾಡಲು, ಈ ಕೆಳಗಿನ ಅಂಶಗಳಿಗೆ ಅನುಮೋದನೆ ಕೋರಿದೆ.

1. ಸರ್ವೆ ನಂ.155 ರ ಮಂಡೂರು ಪ್ರದೇಶದಲ್ಲಿ 5 ಎಕರೆ ಜಮೀನನ್ನು ಲೀಸ್ ಆಧಾರದ ಮೇಲೆ ನೀಡಲು ಅನುಮೋದನೆ.
2. ಈ ಘಟಕ ಸ್ಥಾಪಿಸಲು ಟೆಂಡರ್ ಆಹ್ವಾನಿಸಲು ಅನುಮೋದನೆ ಕೋರಿದೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ, ಸ್ಥಾಯಿ ಸಮಿತಿಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:27-08-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26-10-2010 ರ ನಿರ್ಣಯ ಹಾಗೂ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:07-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:07-01-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:07-01-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

## ದಿನಾಂಕ:13–01–2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

### ವಿಷಯದ ಸಂಖ್ಯೆ :8 (192)/2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯಗಳಲ್ಲಿ ಮಾರ್ಚ್ 2007 ರಲ್ಲಿ ಮೂರು ವರ್ಷಗಳ ಅವಧಿಗೆ ಕಸ ಸಂಗ್ರಹಿಸಿ ಸಾಗಣೆ ಮಾಡುವ ಸೇವಾ ಗುತ್ತಿಗೆಯನ್ನು 30 ಪ್ಯಾಕೇಜುಗಳಲ್ಲಿ ವಿವಿಧ ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಈ ಅವಧಿಯು ದಿನಾಂಕ: 15–03–2010 ಕ್ಕೆ ಮುಕ್ತಾಯಗೊಂಡಿರುತ್ತದೆ.

ಪ್ರಸ್ತಾಪಿತ ವಿಷಯದಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮುಂಗಡವಾಗಿ ದಿನಾಂಕ:30–09–2009 ರಂದು ದಿನಾಂಕ:16–03–2010 ರಿಂದ ಹೊಸ ಗುತ್ತಿಗೆ ಕೆಲಸ ಪ್ರಾರಂಭಿಸುವ ಸಲುವಾಗಿ ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 08 ಪ್ಯಾಕೇಜ್‌ಗಳಂತೆ ಎರಡು ಜಾಗತಿಕ ಟೆಂಡರ್‌ಗಳನ್ನು ಕರೆಯಲಾಗಿತ್ತು.

ಹಲವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ.30417/09 ರಂತೆ ದಾವೆ ಹೂಡಿದ್ದರ ಮೇರೆಗೆ, ನ್ಯಾಯಾಲಯವು ದಿನಾಂಕ: 20–10–2009 ರಂದು ಸದರಿ ಟೆಂಡರ್‌ಗಳಿಗೆ ತಡೆಯಾಜ್ಞೆ ಆದೇಶ ನೀಡಿತ್ತು.

ಜಾಗತಿಕ ಟೆಂಡರ್‌ಗಳಿಗೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದ್ದುದರಿಂದ ಹಾಗೂ ಹಾಲಿ 30 ಸೇವಾ ಪ್ಯಾಕೇಜ್‌ಗಳ ಗುತ್ತಿಗೆ ಅವಧಿ ದಿನಾಂಕ:15–03–2010 ರಂದು ಮುಗಿಯಲಿರುವುದನ್ನು ಮನಗಂಡು ದಿನಾಂಕ:06–03–2010 ರಂದು ಸರ್ಕಾರಕ್ಕೆ ಪತ್ರ ಬರೆದು ಹಾಲಿ ಸೇವಾ ಗುತ್ತಿಗೆಗಳನ್ನು 03 (ಮೂರು) ತಿಂಗಳ ಅವಧಿಗೆ ವಿಸ್ತರಿಸಲು ಕೋರಿದ ಮೇರೆಗೆ ಸರ್ಕಾರವು ಸಂಖ್ಯೆ:ನಅಇ 292 ಎಂಎನ್‌ವೈ 2006 ರಂತೆ ದಿನಾಂಕ:09–04–2010 ರಂದು ಘನತ್ಯಾಜ್ಯ ವಸ್ತುಗಳ ವಿಲೇವಾರಿ ಸಂಬಂಧ ಈಗಿರುವ ಗುತ್ತಿಗೆದಾರರನ್ನೇ ಮತ್ತೇ ಮೂರು ತಿಂಗಳ ಅವಧಿಗೆ ಅಥವಾ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:30417/2009 ಇತ್ಯರ್ಥವಾಗುವವರೆಗೆ ಯಾವುದು ಮೊದಲೋ, ಅಲ್ಲಿಯವರೆಗೆ ಮುಂದುವರೆಸಲು ಸರ್ಕಾರವು ತನ್ನ ಅನುಮೋದನೆಯನ್ನು ನೀಡಿತ್ತು.

ಸದರಿ ಪ್ರಸ್ತಾವನೆಗೆ ದಿನಾಂಕ: 06–03–2010 ರಲ್ಲಿ ವಿಷಯ ಸಂಖ್ಯೆ: 646/2009–10 ರಲ್ಲಿ ಮಾನ್ಯ ಆಡಳಿತಗಾರರಿಂದ ಅನುಮೋದನೆ ಪಡೆಯಲಾಗಿತ್ತು.

ಹಾಲಿ ಗುತ್ತಿಗೆದಾರರುಗಳಿಂದ ಸ್ವಚ್ಛತಾ ಸೇವೆಯನ್ನು ದಿನಾಂಕ: 20–03–2010 ರಿಂದ ಮುಂದಿನ 03 (ಮೂರು) ತಿಂಗಳ ಅವಧಿಗೆ ಅಥವಾ ಬದಲಿ ವ್ಯವಸ್ಥೆ / ಟೆಂಡರ್ ಪ್ರಕ್ರಿಯೆ ಆಗುವವರೆಗೆ ಮುಂದುವರಿಸಲು ಸೂಚಿಸಲಾಗಿತ್ತು.

ಇತ್ತೀಚೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ ನಡೆದ ನಂತರ ಹೊಸದಾಗಿ ಆಯ್ಕೆಯಾದ ಹಲವಾರು ಸದಸ್ಯರು ಹಾಲಿ ಕಸ ವಿಲೇವಾರಿ ಬಗ್ಗೆ ಕೆಲವೊಂದು ಬದಲಾವಣೆಗಳನ್ನು ಸೂಚಿಸಿದ್ದು, ಕಸ ವಿಲೇವಾರಿ ಸುಸೂತ್ರವಾಗಿ ನಡೆಯಬೇಕಾದರೆ ಕೂಡಲೇ ಟೆಂಡರ್ ಕರೆಯಲು ಇಂಗಿತ ವ್ಯಕ್ತಪಡಿಸಿರುತ್ತಾರೆ.

............................2

ಈ ಹಿನ್ನಲೆಯಲ್ಲಿ ದಿನಾಂಕ: 16-06-2010 ರಂದು ಸದರಿ ಜಾಗತಿಕ ಟೆಂಡರ್‌ಗಳ ಅಧಿಸೂಚನೆಗಳನ್ನು ಹಿಂದಕ್ಕೆ ಪಡೆಯುವುದಾಗಿ, ಉಚ್ಚ ನ್ಯಾಯಾಲಯಕ್ಕೆ ಮೆಮೊ ಸಲ್ಲಿಸಿದ ಮೇರೆಗೆ, ಘನ ಉಚ್ಚ ನ್ಯಾಯಾಲಯವು ದಿನಾಂಕ: 17-06-2010 ರಂದು ರಿಟ್ ಸಂಖ್ಯೆ: 30417/2009 ಅನ್ನು ವಿಲೇವಾರಿ ಮಾಡಿರುತ್ತದೆ.

ಹಾಲಿ 30 ಸೇವಾ ಪ್ಯಾಕೇಜ್‌ಗಳ ಗುತ್ತಿಗೆ ವಿಸ್ತರಣಾ ಅವಧಿಯು ದಿನಾಂಕ:19-06-2010 ರಂದು ಮುಗಿಯಲಿರುವುದನ್ನು ಮನಗಂಡು ದಿನಾಂಕ:20-06-2010 ರಿಂದ ಮತ್ತೆ ಮುಂದುವರೆಸುವ ಅಗತ್ಯವಿದ್ದುದರಿಂದ, ಪಾಲಿಕೆಯ ಸಭೆಯ ಅನುಮೋದನೆ ನಿರೀಕ್ಷಿಸಿ ಮತ್ತೆ 02 (ಎರಡು) ತಿಂಗಳವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ, ಅಲ್ಲಿಯವರೆಗೆ ಹಾಲಿ ಗುತ್ತಿಗೆದಾರರ ಸೇವಾ ಗುತ್ತಿಗೆಗಳನ್ನು ಮುಂದುವರೆಸಲು ದಿನಾಂಕ:17-06-2010 ರಂದು ಆದೇಶಿಸಲಾಗಿತ್ತು.

ದಿನಾಂಕ:18-06-2010 ರಂದು ಆಯುಕ್ತರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಹೊಸದಾಗಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಮಾಡಲು ಟೆಂಡರ್ ಕರೆಯಬೇಕಾಗಿರುವ ಹಾಗೂ ಟೆಂಡರ್ ರೂಪುರೇಷೆಗಳ ಬಗ್ಗೆ ಚರ್ಚಿಸಿ, ಅಂತಿಮವಾಗಿ ಟೆಂಡರ್ ಕರೆಯಲು ತೀರ್ಮಾನಿಸಿ ಅಗತ್ಯವಾದ ಟೆಂಡರ್ ದಾಖಲೆಗಳನ್ನು ಸಿದ್ಧಪಡಿಸಿ ಪಾಲಿಕೆ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಲು ಸೂಚಿಸಲಾಗಿತ್ತು.

ಸದರಿ 30 ಸೇವಾ ಪ್ಯಾಕೇಜ್ ಗುತ್ತಿಗೆಗಳನ್ನು ಮುಂದುವರೆಸಲು ದಿನಾಂಕ: 14-09-2010 ರಂದು ಆಯುಕ್ತರು ತೆಗೆದುಕೊಂಡ ಕ್ರಮವನ್ನು ಸ್ಥಿರೀಕರಿಸಲು ದಿನಾಂಕ:29-09-2010 ರ ಆಯುಕ್ತರ ಟಿಪ್ಪಣಿಯನ್ನು ಪಾಲಿಕೆಯ ಸಭೆಯ ಮುಂದೆ ಮಂಡಿಸಲಾಗಿ, ದಿನಾಂಕ:29-10-2010 ರಂದು ನಡೆದ ಪಾಲಿಕೆಯ ಸಭೆಯಲ್ಲಿ ವಿಷಯ ಸಂಖ್ಯೆ: 6 (130)/2010-11 ರಲ್ಲಿ ಮತ್ತೆ 03 (ಮೂರು) ತಿಂಗಳವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಸದರಿ 30 ಸೇವಾ ಪ್ಯಾಕೇಜ್ ಗುತ್ತಿಗೆಗಳನ್ನು ಮುಂದುವರೆಸಲು ಅನುಮೋದನೆ ಪಡೆಯಲಾಗಿತ್ತು.

ದಿನಾಂಕ: 16-09-2010 ರಂದು ಆಯುಕ್ತರು ಆದೇಶಿಸಿರುವಂತೆ, ಸದರಿ ಸ್ವಚ್ಛತಾ ಸೇವೆಯನ್ನು ದಿನಾಂಕ: 29-10-2010 ರಿಂದ ಮುಂದಿನ 03 (ಮೂರು) ತಿಂಗಳವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸಲು ಸೂಚಿಸಲಾದ ಅವಧಿ ದಿನಾಂಕ:19-12-2010 ರಂದು ಮುಗಿಯಲಿರುವುದನ್ನು ಮನಗಂಡು ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಹೊಸದಾಗಿ ಟೆಂಡರ್ ಕರೆಯಲು ಸಿದ್ಧಪಡಿಸಲಾಗುತ್ತಿರುವ ಟೆಂಡರ್ ದಸ್ತಾವೇಜು ರೂಪುರೇಷೆಗಳ ಪ್ರಸ್ತಾವನೆಯನ್ನು ದಿನಾಂಕ:06-07-2010 ರ ಸರ್ಕಾರದ ಆದೇಶದಂತೆ ಸರ್ಕಾರದ ಮಟ್ಟದ ಅಧಿಕಾರಯುಕ್ತ ಸಮಿತಿಯ ಮುಂದೆ ಮಂಡಿಸಿ ಒಪ್ಪಿಗೆ ಪಡೆದು ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲು ಸುಮಾರು 1 ರಿಂದ 2 ತಿಂಗಳ ಕಾಲಾವಕಾಶ ಅಗತ್ಯವಿರುವುದರಿಂದ, ಪಾಲಿಕೆ ಸಭೆಯ ಅನುಮೋದನೆ ನಿರೀಕ್ಷಿಸಿ ಮತ್ತೆ 02 (ಎರಡು) ತಿಂಗಳವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಹಾಲಿ ಗುತ್ತಿಗೆದಾರರ ಸೇವಾ ಗುತ್ತಿಗೆಗಳನ್ನು ಮುಂದುವರೆಸಲು ದಿನಾಂಕ: 14-12-2010 ರಂದು ಆದೇಶಿಸಲಾಗಿತ್ತು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪಾಲಿಕೆ ಸಭೆಯ ಅನುಮೋದನೆ ನಿರೀಕ್ಷಿಸಿ ಮತ್ತೇ 02 (ಎರಡು) ತಿಂಗಳವರೆಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯಗಳಲ್ಲಿನ ಸದರಿ 30 ಸೇವಾ ಪ್ಯಾಕೇಜ್ ಗುತ್ತಿಗೆಗಳನ್ನು

..........................3

ಮುಂದುವರೆಸಲು ದಿನಾಂಕ:14-12-2010 ರಂದು ಆಯುಕ್ತರು ತೆಗೆದುಕೊಂಡ ಕ್ರಮವನ್ನು ಸ್ಥಿರೀಕರಿಸಲು ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-12-2010 ರ ಟಿಪ್ಪಣಿ ಹಾಗೂ ಸಮಿತಿಯು ಕಡತವನ್ನು ಸಂಪೂರ್ಣವಾಗಿ ಪರಿಶೀಲಿಸಿ ಆಯುಕ್ತರ ದಿನಾಂಕ:23-12-2010 ರ ಟಿಪ್ಪಣಿಯನ್ನು ಈ ಕೆಳಕಂಡ ಮಾರ್ಪಾಡಿನೊಂದಿಗೆ ಒಪ್ಪಿರುವ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯ ದಿನಾಂಕ:07-01-2011 ರ ನಿರ್ಣಯ.

**ಮಾರ್ಪಾಡುಗಳು:**

ಸ್ವಚ್ಛತಾ ಕೆಲಸದ ಬಗ್ಗೆ ವಿಷಯ ಸಂಖ್ಯೆ.9 (45)/2010-11, ದಿನಾಂಕ:29-06-2010 ರಂದು ನಡೆದ ಪಾಲಿಕೆ ಸಭೆಯಲ್ಲಿ "ಆಯುಕ್ತರವರ ದಿನಾಂಕ: 21-06-2010 ರ ಟಿಪ್ಪಣಿಯನ್ನು ಮಾರ್ಪಡಿಸುತ್ತಾ, ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಎಂಟು ವಲಯಗಳಲ್ಲಿ ಘನತ್ಯಾಜ್ಯ ವಿಲೇವಾರಿ ಕೆಲಸವನ್ನು ಗುತ್ತಿಗೆಗೆ ನೀಡಿದ್ದು, ಈ ಗುತ್ತಿಗೆ ಅವಧಿ ಮುಗಿದಿರುವ ಕೆಲಸಗಳನ್ನು 3 ತಿಂಗಳವರೆವಿಗೆ ಅಥವಾ ಬದಲಿ ವ್ಯವಸ್ಥೆ ಆಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಹಾಲಿ ಗುತ್ತಿಗೆದಾರರ ಮನವಿಯಂತೆ, ಪೆಟ್ರೋಲ್ ಮತ್ತು ಡೀಸೆಲ್ ದರಗಳು ಹೆಚ್ಚಳವಾಗಿರುವುದರಿಂದ ಹಾಲಿ ನೀಡಲಾಗುತ್ತಿರುವ ದರಗಳಿಗೆ ಶೇ.5 ರಷ್ಟು ಹೆಚ್ಚಿಸಿ, ಗುತ್ತಿಗೆಯನ್ನು ಮುಂದುವರೆಸುವುದೆಂದು ಹಾಗೂ ವಿಷಯ ಸಂಖ್ಯೆ.6 (130)/2010-11 ದಿನಾಂಕ:29-10-2010 ರಂದು ನಡೆದ ಪಾಲಿಕೆ ಸಭೆಯಲ್ಲಿ "ಆಯುಕ್ತರವರ ದಿನಾಂಕ:29-09-2010 ರ ಟಿಪ್ಪಣಿಯನ್ನು ಒಪ್ಪುತ್ತಾ, ನಿರ್ವಹಣಾ ವೆಚ್ಚವು ಗಣನೀಯವಾಗಿ ಏರಿಕೆಯಾಗಿರುವುದರಿಂದ ಈಗಾಗಲೇ ದಿನಾಂಕ: 29-06-2010 ರಂದು ಪಾಲಿಕೆ ಸಭೆಯಲ್ಲಿ ನಿರ್ಣಯಿಸಿರುವಂತೆ ನಿಗದಿತ ದರಗಳಿಗೆ ಶೇಕಡ 5 ರಷ್ಟು ಹೆಚ್ಚಿಸಿ ಗುತ್ತಿಗೆ ಮೊತ್ತವನ್ನು ಪಾವತಿಸುವುದೆಂದು ತೀರ್ಮಾನಿಸಿರುವಂತೆ ಹಾಗೂ ಉಪ ಆಯುಕ್ತರು (ಆರೋಗ್ಯ) ರವರ ಆದೇಶ ಸಂಖ್ಯೆ: DC(H)/PR/2/45/05-06, ದಿನಾಂಕ:23-02-2006 ರಂತೆ ಹಾಗೂ ದಿನಾಂಕ:28-01-2006 ರಂದು ನಡೆದ Pre-bid ನ ನಿರ್ಣಯದ Responses to Bidder's Queries ಕ್ರಮ ಸಂಖ್ಯೆ.32 ರಲ್ಲಿ ಟೆಂಡರ್ ಪ್ರಾರಂಭಿಸಿದ ಒಂದು ವರ್ಷದ ನಂತರ ಟೆಂಡರ್ ಮೊತ್ತಕ್ಕೆ ಶೇ.5 ರ ಹೆಚ್ಚುವರಿ ಮೊತ್ತವನ್ನು ಸೇರ್ಪಡಿಸಿ ಟೆಂಡರ್‌ದಾರರಿಗೆ ಪಾವತಿಸಲು ಕೈಗೊಂಡಿರುವ Pre-bid ನ ನಿರ್ಣಯದಂತೆ ಕ್ರಮ ವಹಿಸಲು ಹಾಗೂ ಟೆಂಡರ್‌ದಾರರಿಂದ ಸ್ವಚ್ಛತಾ ಕೆಲಸವನ್ನು ದಿನಾಂಕ:31-03-2011 ರವರೆಗೆ ಅಥವಾ ಹೊಸದಾಗಿ ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೆ ಮುಂದುವರೆಸಲು ಸಮಿತಿಯು ತೀರ್ಮಾನಿಸಲಾಯಿತು.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ಟಿಪ್ಪಣಿಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯು, ಹಾಲಿ ನೀಡುತ್ತಿರುವ ಗುತ್ತಿಗೆ ದರಗಳಿಗೆ ಶೇ.5 ರಷ್ಟು ಹೆಚ್ಚುವರಿ ಮೊತ್ತವನ್ನು ಸೇರ್ಪಡಿಸಿ, ಗುತ್ತಿಗೆದಾರರಿಗೆ ಪಾವತಿಸಲು ಕೈಗೊಂಡಿರುವ ಸಮಿತಿಯ ದಿನಾಂಕ:07-01-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

........................4

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ಟಿಪ್ಪಣಿಗೆ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಯು, ಹಾಲಿ ನೀಡುತ್ತಿರುವ ಗುತ್ತಿಗೆ ದರಗಳಿಗೆ ಶೇ.5 ರಷ್ಟು ಹೆಚ್ಚುವರಿ ಮೊತ್ತವನ್ನು ಸೇರ್ಪಡಿಸಿ, ಗುತ್ತಿಗೆದಾರರಿಗೆ ಪಾವತಿಸಲು ಕೈಗೊಂಡಿರುವ ಸಮಿತಿಯ ದಿನಾಂಕ:07–01–2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

(ಎಸ್.ಕೆ.ನಟರಾಜ)

ಮಹಾಪೌರರು

# ದಿನಾಂಕ:13-01-2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 9 (193)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮುಖ್ಯ ಅಭಿಯಂತರರು-2 (ಯೋಜನೆ-2) ರವರು ಕೈಗೊಂಡನಹಳ್ಳಿ ಕೆರೆಯ ಹಂತ-2 ರ ಸಮಗ್ರ ಅಭಿವೃದ್ಧಿ ಕಾಮಗಾರಿಯ ಅಂದಾಜು ರೂ.450.00 ಲಕ್ಷಗಳಿಗೆ ತಯಾರಿಸಿ, ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು 2010-11ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ತಯಾರಿಸಲಾಗಿದೆ.

ಕೈಗೊಂಡನಹಳ್ಳಿ ಕೆರೆಯ ಅಭಿವೃದ್ಧಿಯ ಸಲುವಾಗಿ ರೂ.1085 ಲಕ್ಷಗಳ ಯೋಜನಾ ವರದಿಯನ್ನು ಸಲಹೆಗಾರರಾದ ಮೆ॥ ದಿ ಡಿಸೈನರ್ ರವರು ತಯಾರಿಸಿದ್ದು, ಮೊದಲನೇ ಹಂತದಲ್ಲಿ ರೂ.285.00 ಲಕ್ಷಗಳ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ.

ಎರಡನೇ ಹಂತದ ಕಾಮಗಾರಿಯಲ್ಲಿ ಪಾದಚಾರಿ ರಸ್ತೆ ನಿರ್ಮಾಣ, ಪಾದಚಾರಿ ರಸ್ತೆಗೆ ಅಲಂಕಾರಿಕ ಬೇಲಿ ಅಳವಡಿಸುವುದು, ಕಾವಲುಗಾರರ ಕೊಠಡಿ, ಶೌಚಾಲಯಗಳನ್ನು ನಿರ್ಮಿಸುವುದು, ಗಣೇಶ ವಿಗ್ರಹ ವಿಸರ್ಜನೆಯ ಕೊಳ ನಿರ್ಮಾಣ, ಸಿಲ್ಟ್ ಟ್ರಾಪ್ ನಿರ್ಮಿಸುವುದು, ಗೆಜೆಬೊಗಳ ನಿರ್ಮಾಣ, ಪಾದಚಾರಿ ರಸ್ತೆ ಮತ್ತು ಮಕ್ಕಳ ಆಟದ ಮೈದಾನದಲ್ಲಿ ಸೌರಶಕ್ತಿಯ ದೀಪಗಳನ್ನು ಅಳವಡಿಸುವುದು, ಮಕ್ಕಳ ಆಟದ ಪ್ರದೇಶದ ಅಭಿವೃದ್ಧಿ, ಮಕ್ಕಳ ಆಟದ ಉಪಕರಣಗಳನ್ನು ಅಳವಡಿಸುವುದು ಹಾಗೂ ಅಲ್ಲಲ್ಲಿ ಬೆಂಚ್‌ಗಳು ಮತ್ತು ಡಸ್ಟ್ ಬಿನ್‌ಗಳನ್ನು ಅಳವಡಿಸುವ ಸಲುವಾಗಿ ಅಂದಾಜಿನಲ್ಲಿ ಅನುಕೂಲ ಕಲ್ಪಿಸಲಾಗಿದೆ.

ಈ ಹಿನ್ನಲೆಯಲ್ಲಿ, ಕೈಗೊಂಡನಹಳ್ಳಿ ಕೆರೆಯ ಹಂತ-2 ರ ಕಾಮಗಾರಿಯ ಅಂದಾಜು ಮೊತ್ತ ರೂ.450.00 ಲಕ್ಷಗಳ (ರೂ. ನಾಲ್ಕುನೂರ ಐವತ್ತು ಲಕ್ಷಗಳು ಮಾತ್ರ) ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-12-2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:06-01-2011 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:06-01-2011 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

.........................2

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** **"**ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:06-01-2011 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು**"**.

ಎಸ್. ಕೆ. ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು

## ದಿನಾಂಕ:13–01–2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

### ವಿಷಯದ ಸಂಖ್ಯೆ: 10 (194)/2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ: 127, ಮೂಡಲಪಾಳ್ಯ ವಿಭಾಗದ ಜನತಾ ಕಾಲೋನಿ, ಎಸ್.ವಿ.ಜಿ. ನಗರ, ಬೈರವೇಶ್ವರನಗರ, ಪಂಚಶೀಲನಗರ, ಕಲ್ಯಾಣನಗರ ಪ್ರದೇಶಗಳಲ್ಲಿ ನೀರಿನ ವ್ಯವಸ್ಥೆ ಇಲ್ಲದೆ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು, ಈ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ಕೊರೆದು ಪಂಪ್‌ಗಳನ್ನು ಅಳವಡಿಸಿ ನೀರಿನ ವ್ಯವಸ್ಥೆ ಮಾಡಬೇಕಾಗಿ ಸದರಿ ವಾರ್ಡಿನ ಮಹಾನಗರ ಪಾಲಿಕೆ ಸದಸ್ಯರು ಕೋರಿರುತ್ತಾರೆ. ಈ ಸಂಬಂಧ ಪರಿಶೀಲಿಸಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಚಂದ್ರಾ ಬಡಾವಣೆ) ಉಪ ವಿಭಾಗ ರವರು ಸದರಿ ವಾರ್ಡಿನ ಕೆಳಕಂಡ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳನ್ನು ಕೊರೆಸಲು ತಗಲುವ ರೂ.18.00ಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಈ ವೆಚ್ಚವನ್ನು ಶೇಕಡ 22.75ರ ಅನುದಾನದಲ್ಲಿ ಭರಿಸಲು ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ವಿಭಾಗ ರವರು ಶಿಫಾರಸ್ಸು ಮಾಡಿರುತ್ತಾರೆ.

| Sl. No. | Name of Work | Estimate cost (Rs. in lakhs) |
|---|---|---|
| 1 | Sinking, Engineering & Commissioning of 1 no. of new Bore well at Janatha Colony | 3.60 |
| 2 | Sinking, Engineering & Commissioning of 1 no. of new Borewell at S.V.G. Nagar | 3.60 |
| 3 | Sinking, Engineering & Commissioning of 1 no. of new Borewell at Byraveshwara Nagar | 3.60 |
| 4 | Sinking, Engineering & Commissioning of 1 no. of new Borewell at Panchasheela Nagar | 3.60 |
| 5 | Sinking, Engineering & Commissioning of 1 no. of new Borewell at Kalyananagar | 3.60 |

ಮೇಲ್ಕಂಡಂತೆ ವಾರ್ಡ್ 127, ಮೂಡಲಪಾಳ್ಯ ವಿಭಾಗದ 5 ಪ್ರದೇಶಗಳಲ್ಲಿ ಬೋರ್‌ವೆಲ್‌ಗಳನ್ನು ಕೊರೆಸಲು ಪ್ರತಿ ಬೋರ್‌ವೆಲ್‌ಗೆ ರೂ.3.60 ಲಕ್ಷಗಳಂತೆ 5 ಬೋರ್‌ವೆಲ್‌ಗಳಿಗೆ ಒಟ್ಟು ರೂ.18.00 ಲಕ್ಷಗಳನ್ನು "ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541" ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಾಕಿ ಇರುವ ರೂ.1009.05 ಲಕ್ಷಗಳಲ್ಲಿ ಭರಿಸಬಹುದಾಗಿರುತ್ತದೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ವಾರ್ಡ್ 127, ಮೂಡಲಪಾಳ್ಯ ವಿಭಾಗದ ವ್ಯಾಪ್ತಿಯ ಮೇಲ್ಕಂಡ 5 ಪ್ರದೇಶಗಳಲ್ಲಿ ಬೋರ್‌ವೆಲ್‌ಗಳನ್ನು ಕೊರೆಸುವ ಕಾಮಗಾರಿಯನ್ನು ಕೈಗೊಳ್ಳುವ ಸಲುವಾಗಿ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12–01–2011 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

........................2

"ಆಯುಕ್ತರವರ ದಿನಾಂಕ:12-01-2011 ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ವಾರ್ಡಿಗೆ ಹೆಚ್ಚುವರಿಯಾಗಿ 5 ಕೊಳವೆ ಬಾವಿಗಳನ್ನು (ಒಟ್ಟು 10) ಕೊರೆಯಲು ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಿತು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:12-01-2011 ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ವಾರ್ಡಿಗೆ ಹೆಚ್ಚುವರಿಯಾಗಿ 5 ಕೊಳವೆ ಬಾವಿಗಳನ್ನು (ಒಟ್ಟು 10) ಕೊರೆಯಲು ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

# ದಿನಾಂಕ:13–01–2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ಅಧಿಕ ವಿಷಯ

## ವಿಷಯದ ಸಂಖ್ಯೆ: 195/2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಸ್ತೆಗಳಲ್ಲಿ Optical Fibre Cable ಗಳನ್ನು ಅಳವಡಿಸಲು ಹೆಚ್.ಡಿ.ಡಿ. ವಿಧಾನದಲ್ಲಿ ಅನುಮತಿ ನೀಡಲು ಹಾಲಿ ವಿಧಿಸುತ್ತಿರುವ ದರಗಳ ಬದಲಾಗಿ ಹೆಚ್ಚಿನ ಶುಲ್ಕವನ್ನು ವಿಧಿಸುವ ಬಗ್ಗೆ ತೆರೆದ ಗುಂಡಿ ವಿಧಾನದ Protocol ಗಾಗಿ ದಿನಾಂಕ:31–08–2006 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಪ್ರಥಮ ಸಭೆಯನ್ನು ನಡೆಸಿ, ಅದರಲ್ಲಿ ಹೆಚ್.ಡಿ.ಡಿ./ತೆರೆದ ಗುಂಡಿ ಮಾದರಿಗಳಿಗೆ ಅನುಮತಿ ನೀಡಲು ವಿಧಿಸಬೇಕಾದ ಕಟ್ಟುಪಾಡುಗಳನ್ನು, ಶುಲ್ಕದ ವಿವರಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಹಲವಾರು ನಿರ್ಣಯಗಳನ್ನು ಕೈಗೊಳ್ಳಲಾಯಿತು. ಅದರಲ್ಲಿ ಮುಖ್ಯವಾಗಿ, ಎಲ್ಲಾ ಸರ್ಕಾರಿ ಸಂಸ್ಥೆಗಳ ಮತ್ತು ಖಾಸಗಿ ಸಂಸ್ಥೆಗಳ Cable operator ಗಳಿಗೆ ಗುಂಡಿ ಒಂದಕ್ಕೆ ರೂ.10,000/– (ಹಿಂದಿರುಗಿಸಲಾಗದ) ಶುಲ್ಕ ವಿಧಿಸುವುದು. ಬಳಿಕ ಕೆಲಸ ಪೂರ್ಣಗೊಂಡ ನಂತರ ಆ ಸಂಸ್ಥೆಗಳು ಗುಂಡಿಯನ್ನು ತಮ್ಮದೇ ಖರ್ಚಿನಿಂದ ಯಥಾಸ್ಥಿತಿಗೆ ಬರುವಂತೆ ಮಾಡುವುದು. ಮೇಲ್ಕಂಡ ಕಾರ್ಯಸೂಚಿಯಂತೆ ಅಧೀಕ್ಷಕ ಅಭಿಯಂತರರು, ರಸ್ತೆ ಅಗಲೀಕರಣದವರ ವತಿಯಿಂದ ನಿಗಧಿತ ಶುಲ್ಕ ರೂ.10000+500 ಪಡೆದು ತೆರೆದ ಗುಂಡಿ ವಿಧಾನದಲ್ಲಿ ಕಾರ್ಯನಿರ್ವಹಿಸಲು ಅನುಮತಿ ಪತ್ರ ನೀಡಲಾಗುತ್ತಿತ್ತು. ತದನಂತರ ನವೆಂಬರ್ 2007 ರಲ್ಲಿ ತೆರೆದ ಗುಂಡಿ ಕೆಲಸಗಳಿಗಾಗಿ ಅನುಮತಿ ನೀಡಲಿಕ್ಕಾಗಿಯೇ ಡಕ್ಟ್ ವಿಭಾಗವನ್ನು ಸೃಜಿಸಲಾಯಿತು. ಈ ವಿಭಾಗದಿಂದಲೂ ಸಹ ರೂ.10,500/– ಪ್ರತಿ ಗುಂಡಿಗೆ ಅಥವಾ ರೂ.95/–Rmtr (ಯಾವುದೂ ಅಧಿಕವೊ) ರಂತೆ ಮತ್ತು ಶೇ.25 ರಷ್ಟು ಭದ್ರತಾ ಠೇವಣಿ (ಮೂರು ವರ್ಷಗಳ ನಂತರ ಹಿಂತಿರುಗಿಸುವುದು) ಪಾವತಿಸಿಕೊಂಡು ಅನುಮತಿ ಪತ್ರ ನೀಡಲಾಗುತ್ತಿತ್ತು. ತದನಂತರ ಮಾನ್ಯ ಆಯುಕ್ತರ ಆದೇಶ ಸಂಖ್ಯೆ:ಪಿಎಸ್ಆರ್/7511/09–10 ದಿನಾಂಕ:19–02–10 ರಂತೆ ಹಾಗೂ ಮಾನ್ಯ ಅಪರ ಆಯುಕ್ತರು (ಆಡಳಿತ) ರವರ ಆದೇಶ ಪತ್ರ ದಿನಾಂಕ:31–03–10 ರಂತೆ ಆಯಾ ವಲಯದ ಅಪರ/ಜಂಟಿ ಆಯುಕ್ತರ ಮಟ್ಟದಲ್ಲೇ ರಸ್ತೆ ಅಗೆತಕ್ಕೆ ಅನುಮತಿ ನೀಡುವುದು ಸೂಕ್ತವೆಂದು ನಿರ್ಧರಿಸಿ ಉಲ್ಲೇಖಿತ ಪತ್ರದಲ್ಲಿ ಮಾನ್ಯ ಆಯುಕ್ತರು ಅಧಿಕಾರ ಪ್ರತ್ಯಾಯೋಜನೆ ಮಾಡಿರುತ್ತಾರೆ.

ಮುಂದುವರೆದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ರಸ್ತೆಗಳಲ್ಲಿ Optical Fibre Cable ಗಳನ್ನು ಅಳವಡಿಸಲು ಸರ್ಕಾರಿ ಸಂಸ್ಥೆಗಳಾದ ಬಿ.ಎಸ್.ಎನ್.ಎಲ್., ಬೆಸ್ಕಾಂ, ಬಿಡಬ್ಲ್ಯೂ.ಎಸ್.ಎಸ್.ಬಿ., ಕೆ.ಪಿ.ಟಿ.ಸಿ.ಎಲ್ ಮತ್ತು ಖಾಸಗಿ ಸಂಸ್ಥೆಗಳಾದ ಟಾಟಾ ಕಮ್ಯೂನಿಕೇಷನ್ಸ್, ಭಾರತಿ ಏರ್‌ಟೆಲ್, ವೋಡಾಫೋನ್, ರಿಲಾಯನ್ಸ್, ಐಡಿಯಾ, ಟಾಟಾ ಟೆಲಿಸರ್ವಿಸಸ್ ಮತ್ತು ಮುಂತಾದ ಖಾಸಗಿ ಸಂಸ್ಥೆಗಳು ಕೇಬಲ್ ಅಳವಡಿಸಲು ಹೆಚ್.ಡಿ.ಡಿ. ವಿಧಾನದಲ್ಲಿ ಅನುಮತಿ ನೀಡಲಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಯವರ ನಗರ ಕಾರ್ಯ ಸಲಹೆಗಾರರ ಆದೇಶದಂತೆ, ಗುಂಡಿ ತೆಗೆಯಲು ಕ್ರೋಢಿಕೃತ (consolidated) ದರ ರೂ.15,000/–(ಭದ್ರತಾ ಠೇವಣೆ ಇಲ್ಲದೆ)/ಗುಂಡಿಯನ್ನು ನಿಗಧಿಪಡಿಸಿ ದಿನಾಂಕ:23/02/10 ರಂದು ಮಾನ್ಯ ಆಯುಕ್ತರಿಂದ ಮತ್ತು ವಿಶೇಷ ಆಯುಕ್ತರಿಂದ

.........................2

ಮಂಜೂರಾತಿ ಪಡೆಯಲಾಯಿತು. ಅದರಂತೆ, ಮಂಜೂರಾತಿ ನಂತರದ ಪರವಾನಗಿ ಪತ್ರಗಳಿಗೆ ರೂ.15,000/- ಗಳಂತೆ ದರ ವಿಧಿಸಲಾಯಿತು. ಈ ಸಂಸ್ಥೆಗಳು ಪರವಾನಗಿ ಪಡೆದ ನಂತರ ಕಾರ್ಯನಿರ್ವಹಿಸುವಾಗ, ಅನುಮತಿ ನೀಡಿರುವ ಮಿತಿಯನ್ನು ಮೀರಿ ಗುಂಡಿಗಳನ್ನು ಅಗೆದಿರುವುದು, ನೀರಿನ ಹಾಗೂ ನಿರ್ಮಲೀಕರಣ ಪೈಪ್‌ಗಳಿಗೆ ಹಾನಿ ಉಂಟು ಮಾಡಿರುವುದು ಹಾಗೂ ಕೆಲವೊಂದು ಸಂದರ್ಭದಲ್ಲಿ ಮ್ಯಾನ್ ಹೋಲ್ ಮೂಲಕ ಕೇಬಲ್ ಅಳವಡಿಸಿರುವುದು ಕಂಡು ಬಂದಿರುತ್ತದೆ. ಅಗೆದಿರುವ ಗುಂಡಿಗಳನ್ನು ಮೂಲ ಸ್ಥಿತಿಗೆ ತರಲು ವಿಫಲರಾಗಿ, ಪರವಾನಿಗೆಯಲ್ಲಿ ನೀಡಿರುವ ಷರತ್ತುಗಳನ್ನು ಸರಿಯಾಗಿ ಪಾಲಿಸಿರುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗಿ ಅಪಘಾತಗಳು ಸಂಭವಿಸಿ ಸಂಚಾರಕ್ಕೆ ಅಡಚಣೆಯಾಗಿರುತ್ತದೆ ಹಾಗೂ ರಸ್ತೆಯ structure ಗೆ ಹಾನಿಯಾಗಿರುತ್ತದೆ. ಇವುಗಳ ದುರಸ್ತಿ ಕಾರ್ಯವನ್ನು ಸಹ ಪಾಲಿಕೆಯೇ ಭರಿಸಬೇಕಾಗಿರುತ್ತದೆ.

ಪ್ರಸ್ತುತ ದರಗಳನ್ನು 2006-07 ನೇ ಸಾಲಿಗೆ ದರ ಹೋಲಿಕೆ ಮಾಡಿದಾಗ, ಈಗಾಗಲೇ ಸುಮಾರು ನಾಲ್ಕು ವರ್ಷಗಳಿಂದ ಇಲ್ಲಿಯವರೆಗೆ ಲೋಕೋಪಯೋಗಿ ಎಸ್.ಆರ್ ದರಗಳು ಹಾಗೂ ಮಾರುಕಟ್ಟೆಯಲ್ಲಿ ಬಿಟುಮಿನ್ ಮತ್ತು ಇತರೆ ರಿಪೇರಿ ಕಚ್ಚಾ ವಸ್ತುಗಳು ಪರಿಷ್ಕರಣೆಗೊಂಡು ಮೂರ್‍ನಾಲ್ಕು ಪಟ್ಟು ಏರಿಕೆಯಾಗಿರುವುದರಿಂದ ಮತ್ತು ಓ.ಇಫ್.ಸಿ. ಕೇಬಲ್ ಅಳವಡಿಸಲು ಸಿಕ್ಕಪಟ್ಟೆ ರಸ್ತೆ ಅಗೆಯುವುದರ ಮೇಲೆ ಅಲ್ಪಮಟ್ಟದಲ್ಲಿ ನಿರ್ಬಂಧನೆಗಳನ್ನು ಹೇರಲು ಅನುವಾಗುವ ದೃಷ್ಟಿಯಿಂದ ಗುಂಡಿಗಳ ಅಗೆತಕ್ಕೆ ನಿಗಧಿಪಡಿಸಿರುವ ದರಗಳನ್ನು ಹಾಗೂ ಅಗೆತಕ್ಕೆ ಪ್ರತಿ Rmtr ಗೆ ನಿಗಧಿಪಡಿಸಿರುವ ದರಗಳನ್ನು ಈ ಕೆಳಕಂಡಂತೆ ಪರಷ್ಕರಿಸಿದೆ.

| ಕ್ರ.ಸಂ. | ವಿವರಗಳು | 2006-07 ರಲ್ಲಿ ನಿಗಧಿಪಡಿಸಿದ ದರಗಳು | 2009-10 ರಲ್ಲಿ ನಿಗಧಿಪಡಿಸಿದ ದರಗಳು | ಹಾಲಿ ನಿಗಧಿಪಡಿಸಿರುವ ದರಗಳು |
|---|---|---|---|---|
| 1 | 1.20 ಮೀx1.0 ಮೀ ಪ್ರತಿ ಗುಂಡಿಗೆ | ರೂ.10,500/- ಪ್ರತಿ ಹೆಚ್.ಡಿ.ಡಿ. ಗುಂಡಿಗೆ | ರೂ.15,000 ಪ್ರತಿ ಹೆಚ್.ಡಿ.ಡಿ. ಗುಂಡಿಗೆ | ರೂ.30,000/- ಪ್ರತಿ ಹೆಚ್.ಡಿ.ಡಿ. ಗುಂಡಿಗೆ |
| 2 | ಹೆಚ್.ಡಿ.ಡಿ. ಪಿಟ್ ಪ್ರತಿ Rmtr ಗೆ | ರೂ.95/- Rmtr ಗೆ | ರೂ.135/- Rmtr ಗೆ | ರೂ.300/- Rmtr ಗೆ |
| 3 | ಭದ್ರತಾ ಠೇವಣಿ ಮೂರು ವರ್ಷದ ಅವಧಿ ನಂತರ ಹಿಂತಿರುಗಿಸುವುದು | 25% ಮೂರು ವರ್ಷದ ಅವಧಿಗೆ | --- | 25% ಎರಡು ವರ್ಷದ ಅವಧಿಗೆ |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಓ.ಎಫ್.ಸಿ ಕೇಬಲ್‌ಗಳನ್ನು ಅಳವಡಿಸುವ ವಿಧನ (ಹೆಚ್.ಡಿ.ಡಿ) ಕ್ಕೆ ಪ್ರತಿ ಗುಂಡಿಗೆ ರೂ.30,000/- ಅಥವಾ ಪ್ರತಿ ಮೀಡರ್‌ಗೆ ರೂ.300/- ಗಳನ್ನು (ಯಾವುದು ಅಧಿಕವೊ) ಅದರಂತೆ ಶುಲ್ಕ ವಿಧಿಸಲು ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12-01-2011 ರ ಟಿಪ್ಪಣಿ.

..........................3

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:12-01-2011 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯ ರವರು, ಶ್ರೀ.ಬಿ.ಎಸ್.ಸತ್ಯನಾರಾಯಣ ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:12-01-2011 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎಸ್.ಕೆ.ನಟರಾಜ)
ಮಹಾಪೌರರು

## ದಿನಾಂಕ:13-01-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

**ವಿಷಯದ ಸಂಖ್ಯೆ: 197/2010-11**

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬಸವನಗುಡಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರು, ರಾಜ್ಯದ ಮಾಜಿ ಸಚಿವರು ಹಾಗೂ ಹೆಸರಾಂತ ನೀರಾವರಿ ತಜ್ಞರಾದ ದಿ: ಹೆಚ್.ಎನ್.ನಂಜೇಗೌಡ ರವರ ಹೆಸರನ್ನು ಶ್ರೀನಗರದ ಪೈಪ್‌ಲೇನ್ ರಸ್ತೆಗೆ "ದಿ: ಹೆಚ್.ಎನ್.ನಂಜೇಗೌಡ ರಸ್ತೆ" ಎಂದು ನಾಮಕರಣ ಮಾಡಲು ಹಾಗೂ ಪ್ರಮುಖ ವೃತ್ತದಲ್ಲಿ ಅವರ ಪುತ್ಥಳಿಯನ್ನು ಅನಾವರಣ ಮಾಡಲು ಸಭೆಯು ತೀರ್ಮಾನಿಸಿತು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬಸವನಗುಡಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರು, ರಾಜ್ಯದ ಮಾಜಿ ಸಚಿವರು ಹಾಗೂ ಹೆಸರಾಂತ ನೀರಾವರಿ ತಜ್ಞರಾದ ದಿ: ಹೆಚ್.ಎನ್.ನಂಜೇಗೌಡ ರವರ ಹೆಸರನ್ನು ಶ್ರೀನಗರದ ಪೈಪ್‌ಲೇನ್ ರಸ್ತೆಗೆ "ದಿ: ಹೆಚ್.ಎನ್.ನಂಜೇಗೌಡ ರಸ್ತೆ" ಎಂದು ನಾಮಕರಣ ಮಾಡಲು ಹಾಗೂ ಪ್ರಮುಖ ವೃತ್ತದಲ್ಲಿ ಅವರ ಪುತ್ಥಳಿಯನ್ನು ಅನಾವರಣ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

(ಎಸ್.ಕೆ. ನಟರಾಜ)
ಮಹಾಪೌರರು

# ದಿನಾಂಕ:13–01–2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

## ವಿಷಯದ ಸಂಖ್ಯೆ: 198/2010–11

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜೆ.ಪಿ.ನಗರ, 15ನೇ ಅಡ್ಡ ರಸ್ತೆ, 24ನೇ ಮುಖ್ಯ ರಸ್ತೆ ಜಂಕ್ಷನ್‌ನಲ್ಲಿ ನೂತನವಾಗಿ ನಿರ್ಮಿಸಿರುವ ಕೆಳ ಸೇತುವೆ (ಅಂಡರ್ ಪಾಸ್) ಗೆ ಅಂತರರಾಷ್ಟ್ರೀಯ ಖ್ಯಾತ ಕ್ರಿಕೆಟ್ ಪಟು "ಶ್ರೀ. ಜಿ.ಆರ್.ವಿಶ್ವನಾಥ್" ಕೆಳ ಸೇತುವೆ (ಅಂಡರ್ ಪಾಸ್) ಎಂದು ನಾಮಕರಣ ಮಾಡುವುದೆಂದು ಈ ಸಭೆಯು ತೀರ್ಮಾನಿಸಿತು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜೆ.ಪಿ.ನಗರ, 15ನೇ ಅಡ್ಡ ರಸ್ತೆ, 24ನೇ ಮುಖ್ಯ ರಸ್ತೆ ಜಂಕ್ಷನ್‌ನಲ್ಲಿ ನೂತನವಾಗಿ ನಿರ್ಮಿಸಿರುವ ಕೆಳ ಸೇತುವೆ (ಅಂಡರ್ ಪಾಸ್) ಗೆ ಅಂತರರಾಷ್ಟ್ರೀಯ ಖ್ಯಾತ ಕ್ರಿಕೆಟ್ ಪಟು "ಶ್ರೀ. ಜಿ.ಆರ್.ವಿಶ್ವನಾಥ್" ಕೆಳ ಸೇತುವೆ (ಅಂಡರ್ ಪಾಸ್) ಎಂದು ನಾಮಕರಣ ಮಾಡುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ಎಸ್. ಕೆ. ನಟರಾಜ

(ಎಸ್.ಕೆ. ನಟರಾಜ)
ಮಹಾಪೌರರು

## ದಿನಾಂಕ:13-01-2011 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

**ವಿಷಯದ ಸಂಖ್ಯೆ: 199/2010-11**

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಪೂಜ್ಯ ಮಹಾಪೌರರ ಮತ್ತು ಉಪ ಮಹಾಪೌರರ 2010-11 ರ ಅನುದಾನದ ಶೀರ್ಷಿಕೆಯಡಿಯಲ್ಲಿ ನೀಡುವ ಕಾಮಗಾರಿಗಳು ಅತ್ಯಂತ ತುರ್ತು ಕಾಮಗಾರಿಗಳೆಂದು ಪರಿಗಣಿಸಿ, ಸದರಿ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ನಿರ್ವಹಿಸಬೇಕಾಗಿರುವುದರಿಂದ ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯದ ಕೆ.ಆರ್.ಐ.ಡಿ.ಎಲ್. ಸಂಸ್ಥೆಯವರಿಂದ ಕಾಮಗಾರಿಗಳನ್ನು ನಿರ್ವಹಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ಶ್ರೀ.ಗಂಗಭೈರಯ್ಯ ರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಪೂಜ್ಯ ಮಹಾಪೌರರ ಮತ್ತು ಉಪ ಮಹಾಪೌರರ 2010-11 ರ ಅನುದಾನದ ಶೀರ್ಷಿಕೆಯಡಿಯಲ್ಲಿ ನೀಡುವ ಕಾಮಗಾರಿಗಳು ಅತ್ಯಂತ ತುರ್ತು ಕಾಮಗಾರಿಗಳೆಂದು ಪರಿಗಣಿಸಿ, ಸದರಿ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ನಿರ್ವಹಿಸಬೇಕಾಗಿರುವುದರಿಂದ ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯದ ಕೆ.ಆರ್.ಐ.ಡಿ.ಎಲ್. ಸಂಸ್ಥೆಯವರಿಂದ ಕಾಮಗಾರಿಗಳನ್ನು ನಿರ್ವಹಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ಎಸ್.ಕೆ. ನಟರಾಜ

**(ಎಸ್.ಕೆ. ನಟರಾಜ)**
ಮಹಾಪೌರರು

# ದಿನಾಂಕ:30-12-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

**ವಿಷಯದ ಸಂಖ್ಯೆ: 200/2010-11**

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಕೆ.ಎಸ್.ಸಿ.ಸಿ.ಎ. ಕ್ರೀಡಾಂಗಣ ಬೆಂಗಳೂರು ಮಧ್ಯಭಾಗದಲ್ಲಿದ್ದು, ನಗರ ಪಾಲಿಕೆ ವತಿಯಿಂದ ಎಲ್ಲಾ ರೀತಿಯ ಸೌಲಭ್ಯಗಳನ್ನು ಉಚಿತವಾಗಿ ಪಡೆದುಕೊಳ್ಳುತ್ತಿದೆ. ಆದರೆ, ನಗರ ಪಾಲಿಕೆಯ ಸದಸ್ಯರುಗಳನ್ನು ಅಗೌರವದಿಂದ ಕಾಣುತ್ತಿರುವುದಾಗಿ ಸದಸ್ಯರುಗಳು ಈ ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಹಿಂದೆ ಎಲ್ಲಾ ನಗರ ಪಾಲಿಕೆ ಸದಸ್ಯರುಗಳಿಗೆ ಕ್ರಿಕೆಟ್ ಆಟವನ್ನು ವೀಕ್ಷಿಸಲು ಪಾಸ್‌ಗಳನ್ನು ನೀಡುತ್ತಿರುವುದು ಸರಿಯಷ್ಟೆ. ಆದರೆ, ಈ ಬಾರಿ ಪಾಸುಗಳನ್ನು ಸಹ ಕಡಿತಗೊಳಿಸಿರುತ್ತಾರೆ. ಈ ಹಿನ್ನಲೆ, ನಗರ ಪಾಲಿಕೆಯಿಂದ ಸ್ಥಳ ಮತ್ತು ಸೌಲಭ್ಯವನ್ನು ಪಡೆಯುತ್ತಿರುವ ಕೆ.ಎಸ್.ಸಿ.ಸಿ.ಎ. ಸಂಸ್ಥೆಯ ಅಧಿಕಾರಿಗಳೊಂದಿಗೆ ಪೂಜ್ಯ ಮಹಾಪೌರರು ಒಂದು ಸಭೆಯನ್ನು ನಡೆಸಿ, ಸೌಹಾರ್ದತೆ ರೀತಿಯಲ್ಲಿ ನಗರ ಪಾಲಿಕೆ ವ್ಯವಹರಿಸಲು ಹಾಗೂ ಹಿಂದೆ ನೀಡುತ್ತಿದ್ದ ನಗರ ಪಾಲಿಕೆಯ ಎಲ್ಲಾ ಸದಸ್ಯರುಗಳಿಗೆ ಕ್ರೀಡಾಂಗಣದಲ್ಲಿ ನಡೆಯುವ ಎಲ್ಲಾ ಪಂದ್ಯಗಳಿಗೂ ಪಾಸುಗಳನ್ನು ನೀಡಬೇಕೆಂದು ಸಭೆಯು ಸೂಚಿಸಲು ಈ ಸಭೆಯು ಸರ್ವಾನುಮತದಿಂದ ತೀರ್ಮಾನಿಸುತ್ತದೆ.

ಶ್ರೀ.ಪಿ.ಎನ್.ಸದಾಶಿವ ರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಕೆ.ಎಸ್.ಸಿ.ಸಿ.ಎ. ಕ್ರೀಡಾಂಗಣ ಬೆಂಗಳೂರು ಮಧ್ಯಭಾಗದಲ್ಲಿದ್ದು, ನಗರ ಪಾಲಿಕೆ ವತಿಯಿಂದ ಎಲ್ಲಾ ರೀತಿಯ ಸೌಲಭ್ಯಗಳನ್ನು ಉಚಿತವಾಗಿ ಪಡೆದುಕೊಳ್ಳುತ್ತಿದೆ. ಆದರೆ, ನಗರ ಪಾಲಿಕೆಯ ಸದಸ್ಯರುಗಳನ್ನು ಅಗೌರವದಿಂದ ಕಾಣುತ್ತಿರುವುದಾಗಿ ಸದಸ್ಯರುಗಳು ಈ ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಹಿಂದೆ ಎಲ್ಲಾ ನಗರ ಪಾಲಿಕೆ ಸದಸ್ಯರುಗಳಿಗೆ ಕ್ರಿಕೆಟ್ ಆಟವನ್ನು ವೀಕ್ಷಿಸಲು ಪಾಸ್‌ಗಳನ್ನು ನೀಡುತ್ತಿರುವುದು ಸರಿಯಷ್ಟೆ. ಆದರೆ, ಈ ಬಾರಿ ಪಾಸುಗಳನ್ನು ಸಹ ಕಡಿತಗೊಳಿಸಿರುತ್ತಾರೆ. ಈ ಹಿನ್ನಲೆ, ನಗರ ಪಾಲಿಕೆಯಿಂದ ಸ್ಥಳ ಮತ್ತು ಸೌಲಭ್ಯವನ್ನು ಪಡೆಯುತ್ತಿರುವ ಕೆ.ಎಸ್.ಸಿ.ಸಿ.ಎ. ಸಂಸ್ಥೆಯ ಅಧಿಕಾರಿಗಳೊಂದಿಗೆ ಪೂಜ್ಯ ಮಹಾಪೌರರು ಒಂದು ಸಭೆಯನ್ನು ನಡೆಸಿ, ಸೌಹಾರ್ದತೆ ರೀತಿಯಲ್ಲಿ ನಗರ ಪಾಲಿಕೆ ವ್ಯವಹಿಸಲು ಹಾಗೂ ಹಿಂದೆ ನೀಡುತ್ತಿದ್ದ ನಗರ ಪಾಲಿಕೆಯ ಎಲ್ಲಾ ಸದಸ್ಯರುಗಳಿಗೆ ಕ್ರೀಡಾಂಗಣದಲ್ಲಿ ನಡೆಯುವ ಎಲ್ಲಾ ಪಂದ್ಯಗಳಿಗೂ ಪಾಸುಗಳನ್ನು ನೀಡಬೇಕೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು".

ಎಸ್.ಕೆ. ನಟರಾಜ

(ಎಸ್.ಕೆ. ನಟರಾಜ)
ಮಹಾಪೌರರು